# ಯುಗಶ್ರೀ

❖ ಜಾಗತಿಕ ವಿಷಮ ಪರಿಸ್ಥಿತಿಗೆ ಖುರ್‌ಆನಿನ ಪರಿಹಾರ

❖ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ವಿವಿಧ ಗಣ್ಯರ ಭಾಷಣಗಳು

❖ ಉತ್ತಮ ಆಹಾರ ಕ್ರಮದ ಬಗ್ಗೆ ಖುರ್‌ಆನಿನ ಮಾರ್ಗದರ್ಶನ

❖ ಖುರ್‌ಆನ್ ನಿರ್ದೇಶಿಸುವ ಪರದಾ ಪದ್ಧತಿ

❖ ಬುರ್ಖಾ ಧರಿಸಿ ಆಕ್ಸ್‌ಫರ್ಡ್‌ನಲ್ಲಿ

ನವೆಂಬರ್ 2009

ತ್ರೈಮಾಸಿಕ
ಬೆಲೆ ರೂ. 5/-

"ಪಟ್ಟಣಗಳು ಅಕ್ರಮದಿಂದ ತುಂಬಿರುವಾಗ, ನಿನ್ನ ಪ್ರಭು ಅವುಗಳನ್ನು ಹಿಡಿದು ಶಿಕ್ಷಿಸುವಾಗ, ನಿನ್ನ ಪ್ರಭುವಿನ ಹಿಡಿತ ಇದೇ ರೀತಿಯಾಗಿದೆ. ನಿಶ್ಚಯವಾಗಿಯೂ ಅವನ ಹಿಡಿತ ಯಾತನಾಮಯವೂ ಕಠಿಣವೂ ಆಗಿದೆ."

ಪವಿತ್ರ ಖುರ್‌ಆನ್ (11 : 103)

# ಯುಗರಶ್ಮಿ

ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ.5/- ವಾರ್ಷಿಕ ಚಂದಾ : ರೂ.20/- ಅಂಚೆ ಮೂಲಕ : ರೂ. 30/-


## ವಿಷಯ ಸೂಚಿಕೆ


| | ಪುಟ |
|---|---|
| ☆ ಭೂಕಂಪಗಳೂ ಜಲಪ್ರಳಯಗಳೂ | 1 |
| ☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು | 2 |
| ☆ ಜಾಗತಿಕ ವಿಷಮ ಪರಿಸ್ಥಿತಿಗೆ ಪವಿತ್ರ ಖುರ್‌ಆನಿನ ಪರಿಹಾರ ಮಾರ್ಗಗಳು | 3 |
| ☆ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ವಿವಿಧ ಗಣ್ಯರ ಭಾಷಣಗಳು | 8 |
| ☆ ಉತ್ತಮ ಆಹಾರ ಕ್ರಮದ ಬಗ್ಗೆ ಪವಿತ್ರ ಖುರ್‌ಆನ್ ನೀಡುವ ಮಾರ್ಗದರ್ಶನ | 14 |
| ☆ ಖುರ್‌ಆನ್ ನಿರ್ದೇಶಿಸುವ ಪರದಾ ಪದ್ಧತಿ | 20 |
| ☆ ಬುರ್ಖಾ ಧರಿಸಿ ಆಕ್ಸ್‌ಫರ್ಡ್‌ನಲ್ಲಿ | 22 |
| ☆ ಇಸ್ಲಾಮಿನ ಪ್ರಾಥಮಿಕ ಪಾಠಗಳು | 24 |
| ☆ ನಮ್ಮ ಉಮ್ರಃ ಪುಣ್ಯಯಾತ್ರೆ | 29 |
| ☆ 43ನೇ ಯು.ಕೆ. ಅಹ್ಮದಿಯಾ ವಾರ್ಷಿಕ ಸಮ್ಮೇಳನ | 35 |
| ☆ ಅಹ್ಮದಿಯಾ ಜಮಾಅತಿನ ಪ್ರಗತಿ | 36 |
| ☆ ನಿಧನ ವಾರ್ತೆಗಳು | 38 |
| ☆ ಸಂಪಾದಕರಿಗೆ ಪತ್ರ | 39 |


# ಪ್ರಕೃತಿ ವಿಕೋಪ ಸಂತ್ರಸ್ತರ ಪರಿಹಾರ ನಿಧಿಗೆ ಉದಾರವಾಗಿ ದೇಣಿಗೆ ನೀಡಿರಿ.

بسم الله الرحمن الرحيم

نحمده ونصلي على رسوله الكريم


# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 26 | ನವೆಂಬರ್ 2009 | ನುಬುವ್ವತ್ 1388 | ಸಂಚಿಕೆ : 3 - 4 |
| --- | --- | --- | --- | --- |


## ಭೂಕಂಪಗಳೂ ಜಲಪ್ರಳಯಗಳೂ

"ನೆನಪಿಡಿರಿ, ಈ ಭೂಲೋಕದಲ್ಲಿ ಅನೇಕ ಭೂಕಂಪಗಳು ಘಟಿಸಲಿವೆಯೆಂಬ ಸೂಚನೆಯನ್ನು ದೇವನು ನನಗೆ ಅರುಹಿದ್ದಾನೆ. ನಾನು ಮುಂಚಿತವಾಗಿಯೇ ಹೇಳಿದ್ದಂತೆ, ಅಮೇರಿಕ ಮತ್ತು ಯುರೋಪು ಭೂಕಂಪಗಳಿಗೆ ಗುರಿಯಾಗಿವೆ. ಹಾಗೆಯೇ ಏಷ್ಯಾ ಸಹ ಈಡಾಗುವುದು ಖಂಡಿತ. ಅವುಗಳಲ್ಲಿ ಕೆಲವು ಪ್ರಳಯಕಾಲದ ಭಯಂಕರವಾದ ಸರ್ವನಾಶಕ್ಕೆ ಸಮಾನವಾಗಿರಬಹುದು. ಹಲವಾರು ಮಂದಿ ಮಡಿಯುವರು. ರಕ್ತದ ಹೊಳೆಗಳೇ ಹರಿಯುವುವು.

"ಮನುಷ್ಯನುಂಟಾದ ಕಾಲದಿಂದ ಇಷ್ಟರವರೆಗೆ ಸಂಭವಿಸದ ರೀತಿಯ ಅತ್ಯಂತ ಭಯಂಕರವಾದ ನಾಶವು ಉಂಟಾಗುವುದು. ಭೂಮಿಯ ನಾನಾ ಭಾಗಗಳು ಅಲ್ಲಿ ಎಂದೂ ಜನವಾಸವಿರಲಿಲ್ಲವೆಂದು ಭಾಸವಾಗುವಷ್ಟರ ಮಟ್ಟಿಗೆ ಅಡಿಮೇಲಾಗಿ ಸರ್ವನಾಶವಾಗುವುವು. ಅದರೊಂದಿಗೆ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಭಯಾನಕವಾದ ನಾಶಗಳು ಘಟಿಸುವುವು. ವಿವೇಕಿಗಳಾದ ಜನರು ಇವುಗಳ ಅಸಾಮಾನ್ಯತೆಯನ್ನು ಗ್ರಹಿಸುವರು. ಅವುಗಳ ಕುರಿತು ವೈಜ್ಞಾನಿಕ ಹಾಗೂ ತತ್ವಶಾಸ್ತ್ರ ಗ್ರಂಥಮಾಲೆಗಳಿಂದ ಏನನ್ನೂ ಅರಿಯಲು ಸಾಧ್ಯವಾಗಲಿಕ್ಕಿಲ್ಲ. ಆಗ ಜನರು ಮುಂದೇನು ಸಂಭವಿಸಬಹುದೆಂದು ಕಳವಳಗೊಳ್ಳುವರು. ಅನೇಕರು ರಕ್ಷಿಸಲ್ಪಡುವರು; ಅನೇಕರು ನಾಶವಾಗುವರು. ಅಂತಹ ದಿನಗಳು ಅತಿ ಸಮೀಪವಾಗಿವೆ. ಅಷ್ಟೇಕೆ, ಬಾಗಿಲಲ್ಲೇ ಬಂದು ನಿಂತಿವೆ. ಒಂದು ಮಹಾನಾಶವನ್ನು ಈ ಲೋಕವು ಕಣ್ಣಾರೆ ಕಾಣಲಿದೆ. ಭೂಕಂಪಗಳು ಮಾತ್ರವಲ್ಲ, ಭೂಮಿಯಲ್ಲೂ ಆಕಾಶದಲ್ಲೂ ಇನ್ನೂ ಭಯಂಕರವಾದ ವಿಪತ್ತುಗಳು ಘಟಿಸುವುವು. ಮನುಷ್ಯರು ಪರಮಾತ್ಮನನ್ನು ಮರೆತು, ತಮ್ಮ ಪ್ರಯತ್ನ ಹಾಗೂ ಹೃದಯದ ಸಕಲ ಆಶಯಗಳನ್ನು ಕೇವಲ ಲೌಕಿಕ ಆಡಂಬರಗಳಿಗಾಗಿ ಮೀಸಲಾಗಿರಿಸಿದ ಕಾರಣದಿಂದಾಗಿ ಇವೆಲ್ಲ ಸಂಭವಿಸುವುವು.... 'ಓರ್ವ ಪ್ರವಾದಿಯನ್ನು ಕಳುಹಿಸದೆ ನಾವು ಜನರನ್ನು ಶಿಕ್ಷಿಸುವುದಿಲ್ಲ' ಎಂದು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ (17 : 16) ಹೇಳಿರುವನು.

"ಪಶ್ಚಾತ್ತಾಪಪಡುವವರು ರಕ್ಷಣೆಯನ್ನು ಹೊಂದುವರು. ಆಪತ್ತುಗಳಿಗೆ ಭಯಪಡುವವರೊಡನೆ ಕರುಣೆ ತೋರಿಸಲ್ಪಡುವುದು. ಈ ಕಷ್ಟ ಪರಂಪರೆಗಳಿಗೆ ಗುರಿಯಾಗಲಾರೆವೆಂದು ನೀವು ಭಾವಿಸುವಿರಾ? ಅಥವಾ ಉಪಾಯದಿಂದ ಸ್ವಯಂ ರಕ್ಷಣೆ ಪಡೆಯಲು ನಿಮಗೆ ಸಾಧ್ಯವಿದೆಯೇ? ಎಂದಿಗೂ ಸಾಧ್ಯವಿಲ್ಲ. ಅಂದು ಮನುಷ್ಯರ ಎಲ್ಲ ಯೋಜನೆಗಳು ಪರಾಜಯಗೊಳ್ಳುವುವು. ಅಮೇರಿಕದಲ್ಲಿ ಮತ್ತು ಇನ್ನಿತರ ಭೂಖಂಡಗಳಲ್ಲಿ ಭೂಕಂಪಗಳಾದರೂ ನಿಮ್ಮ ರಾಜ್ಯವು ಸುರಕ್ಷಿತವಾಗಿಯೇ ಇರುವುದೆಂದು ಭಾವಿಸಬೇಡಿ. ಅದಕ್ಕಿಂತಲೂ ಅತ್ಯಂತ ದಾರುಣವಾದ ಕಷ್ಟನಷ್ಟಗಳಿಗೆ ನೀವು ಗುರಿಯಾಗಬೇಕಾದೀತು.

"ಎಲೈ ಯುರೋಪಿನ ಜನಾಂಗಗಳೇ, ನೀವು ಸುರಕ್ಷಿತರಲ್ಲ. ಎಲೈ ಏಷ್ಯಾದ ಜನಾಂಗಗಳೇ, ನೀವು ಸಹ ಸುರಕ್ಷಿತರಲ್ಲ. ಎಲೈ ದ್ವೀಪನಿವಾಸಿಗಳೇ, ನಿಮ್ಮ ಸ್ವಯಂ ಕಲ್ಪಿತ ದೇವರುಗಳು ಆ ದಿನದಂದು ನಿಮ್ಮ ರಕ್ಷಣೆಗೆ ಬರಲಾರರು. ದೊಡ್ಡ ದೊಡ್ಡ ನಗರಗಳು ನಾಶವಾಗುವುದನ್ನು ಮತ್ತು ಜನಭರಿತ ಪ್ರದೇಶಗಳು ಜನಶೂನ್ಯವಾಗುವ ಭವಿಷ್ಯದ ಚಿತ್ರವನ್ನು ನಾನು ಈಗಲೇ ಕಾಣುತ್ತಿದ್ದೇನೆ. ಆ

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

❖ ನಿಮ್ಮ ಪೈಕಿ ಖುರ್‌ಆನ್ ಕಲಿಯುವವನು ಮತ್ತು ಜನರಿಗೆ ಕಲಿಸುವವನು ಉತ್ತಮನು. (ಬುಖಾರಿ)

❖ ಎಲ್ಲ ಮುಸ್ಲಿಂ ಪುರುಷ ಮತ್ತು ಮುಸ್ಲಿಂ ಸ್ತ್ರೀ ವಿದ್ಯೆ ಕಲಿಯುವುದು ಕಡ್ಡಾಯವಾಗಿದೆ. (ಬುಖಾರಿ)

❖ ಆಯಾ ಸಮಯದಲ್ಲಿ ನಮಾಝ್ ನಿರ್ವಹಿಸುವುದು, ತಂದೆ ತಾಯಿಯವರೊಂದಿಗೆ ಉತ್ತಮವಾಗಿ ವರ್ತಿಸುವುದು, ಅಲ್ಲಾಹನ ಮಾರ್ಗದಲ್ಲಿ ಅತ್ಯಂತ ಪರಿಶ್ರಮ ಪಡುವುದು – ಇವು ಅಲ್ಲಾಹನಿಗೆ ಅತ್ಯಂತ ಪ್ರೀತಿಯ ಕರ್ಮಗಳಾಗಿವೆ. (ಬುಖಾರಿ)

❖ ಸತ್ಯಮಾತು ಸತ್ಕರ್ಮದ ಕಡೆಗೆ ಕೊಂಡೊಯ್ಯುತ್ತದೆ. ಸತ್ಕರ್ಮ ಸ್ವರ್ಗದ ಕಡೆಗೆ ಕೊಂಡೊಯ್ಯುತ್ತದೆ....ಸುಳ್ಳುಮಾತು ಪಾಪದ ಕಡೆಗೆ ಕೊಂಡೊಯ್ಯುತ್ತದೆ. ಪಾಪ ನರಕದ ಕಡೆಗೆ ಕೊಂಡೊಯ್ಯುತ್ತದೆ. (ಬುಖಾರಿ)

❖ ಓರ್ವ ವ್ಯಕ್ತಿ ಮಾರ್ಗದಲ್ಲಿ ನಡೆದುಕೊಂಡು ಹೋಗುತ್ತಿದ್ದನು. ಮುಳ್ಳುಗಳಿಂದ ಕೂಡಿದ ಒಂದು ಮರದ ಕೊಂಬೆಯನ್ನು ಅವನು ಮಾರ್ಗದಲ್ಲಿ ಕಂಡನು. ಅವನು ಅದನ್ನು ಮಾರ್ಗದಿಂದ ನೀಗಿಸಿದನು. ಅಲ್ಲಾಹನು ಅವನನ್ನು ಮೆಚ್ಚಿ ಅವನ ಪಾಪಗಳನ್ನು ಕ್ಷಮಿಸಿದನು. (ಬುಖಾರಿ)

❖ ಒಬ್ಬ ಸತ್ಯವಿಶ್ವಾಸಿ ಯಾವುದಾದರೂ ಮರವನ್ನು ನೆಟ್ಟು ಅದರ ಫಲವನ್ನು ಯಾವನಾದರೂ ಮನುಷ್ಯ ಅಥವಾ ಯಾವುದೇ ಮೃಗ ಅಥವಾ ಪಕ್ಷಿ ತಿಂದರೆ ಅದು ಆ ಸತ್ಯವಿಶ್ವಾಸಿಗೆ ಪುನರುತ್ಥಾನ ದಿನದ ವರೆಗೆ ಒಳಿತನ್ನು ನೀಡುತ್ತಲಿರುವುದು. (ಬುಖಾರಿ)

❖ ನನ್ನ ಸಮುದಾಯಕ್ಕೆ ತೊಂದರೆಯಾಗಬಹುದೆಂಬ ಚಿಂತೆ ನನಗೆ ಇಲ್ಲದಿರುತ್ತಿದ್ದರೆ ಎಲ್ಲ ನಮಾಝ್‌ಗಳಿಗೆ ಮುಂಚೆ ಹಲ್ಲುಜ್ಜಲು ನಾನು ಆಜ್ಞಾಪಿಸುತ್ತಿದ್ದೆ. (ಬುಖಾರಿ)

❖ ಸಂಬಂಧಿಕರೊಂದಿಗೆ ಕೆಟ್ಟದ್ದಾಗಿ ವರ್ತಿಸುವವನು ಸ್ವರ್ಗವನ್ನು ಪ್ರವೇಶಿಸಲಾರ. (ಬುಖಾರಿ)

❖ ತನ್ನ ಹೃದಯದಲ್ಲಿ ತುಸುಮಾತ್ರವಾದರೂ ಅಹಂಕಾರವಿದ್ದವನು ಸ್ವರ್ಗವನ್ನು ಪ್ರವೇಶಿಸಲಾರ. (ಮುಸ್ಲಿಂ)

❖ ತನ್ನ ಸಹೋದರನಿಗೆ ಸಹಾಯ ಮಾಡುವ ಕಾರ್ಯದಲ್ಲಿ ಮಗ್ನನಾಗಿರುವವನಿಗೆ ಅಲ್ಲಾಹನು ಸಹಾಯ ಮಾಡುತ್ತಾನೆ. (ಬುಖಾರಿ)

---

ಸರ್ವಾಧಿಪತಿಯಾದ ದೇವನು ಒಂದು ದೀರ್ಘಕಾಲದವರೆಗೆ ಮೌನಾವಲಂಬಿಯಾಗಿದ್ದನು. ಅವನ ಸಮ್ಮುಖದಲ್ಲೇ ಹೇಯವಾದ ಅನೇಕ ಅತಿ ದುಷ್ಕೃತ್ಯಗಳು ನಡೆಯುತ್ತಿದ್ದರೂ ಅವನು ಸುಮ್ಮಗಿದ್ದನು. ಆದರೆ ಈಗ ಅವನು ಭಯಂಕರ ಸ್ವರೂಪದಿಂದ ತನ್ನ ಮುಖವನ್ನು ತೋರಿಸುವನು. ಅಂತಹ ಕಾಲ ದೂರವಿಲ್ಲ! ಕಿವಿ ಇದ್ದವರು ಕೇಳಿಕೊಳ್ಳಲಿ! ನಾನು ಎಲ್ಲರನ್ನೂ ದೇವರ ರಕ್ಷಣೆಯಲ್ಲಿ ಒಂದುಗೂಡಿಸಲಿಕ್ಕೆ ಕೈಲಾದಷ್ಟು ಪ್ರಯತ್ನಿಸಿದೆ. ಆದರೆ ನಿಯತಿ ನಿಯಮ ಪೂರ್ಣಗೊಳ್ಳಬೇಕಲ್ಲವೇ? ನಾನು ಸತ್ಯವಾಗಿಯೂ ನಿಮ್ಮೊಡನೆ ಹೇಳುತ್ತೇನೆ: ಈ ರಾಜ್ಯದ ಸರದಿ ಸಹ ಸಮೀಪಿಸುತ್ತಿದೆ. ನೋಹಾ ಪ್ರವಾದಿಯ ಕಾಲ* ನಿಮ್ಮ ಕಣ್ಣ ಮುಂದೆ ಪ್ರತ್ಯಕ್ಷವಾಗುವುದು. ಪ್ರವಾದಿ ಲೂತ್‌ರವರ ರಾಜ್ಯದಲ್ಲಿ ಸಂಭವಿಸಿದ್ದನ್ನು** ನಿಮ್ಮ ಸ್ವಂತ ಕಣ್ಣುಗಳಿಂದ ಕಾಣುವಿರಿ. ಆದರೆ ಪರಮಾತ್ಮನು ತನ್ನ ಕೋಪವನ್ನು ನಿಧಾನವಾಗಿ ತೋರಿಸುವನು. ನಿಮ್ಮ ಮೇಲೆ ದಯಾದೃಷ್ಟಿಯನ್ನು ಬೀರುವಂತೆ ನೀವು ಅವನನ್ನು ಪಶ್ಚಾತ್ತಾಪದಿಂದ ಪ್ರಾರ್ಥಿಸಿರಿ. ದೇವರನ್ನು ಮರೆತವನು ಮನುಷ್ಯನಲ್ಲ; ಕ್ರಿಮಿಕೀಟಕ್ಕೆ ಸಮಾನನು. ದೇವನಿಗೆ ಯಾರು ಹೆದರುವುದಿಲ್ಲವೋ ಅವನು ಸತ್ತಂತೆಯೇ ಸರಿ; ಜೀವವಿಲ್ಲದವನು." (ಹಖೀಖತುಲ್ ವಹ್ಯ್. 1907 ಪುಟ : 256-257)

– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು

* ಭಯಂಕರ ಜಲಪ್ರಳಯ
** ಭೀಕರ ಭೂಕಂಪ

# ಜಾಗತಿಕ ವಿಷಮ ಪರಿಸ್ಥಿತಿಗೆ ಪವಿತ್ರ ಖುರ್‌ಆನಿನ ಪರಿಹಾರ ಮಾರ್ಗಗಳು

**ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ನಾಯಕರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬರು (ಪಂಚಮ ಖಲೀಫ) 2008 ಅಕ್ಟೋಬರ್ ದಿನಾಂಕ 22ರಂದು ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರನ್ನು ಸಂಬೋಧಿಸಿ ಮಾಡಿದ ಭಾಷಣ.**

ಬ್ರಿಟಿಷ್ ಪಾರ್ಲಿಮೆಂಟಿನ ಸನ್ಮಾನ್ಯ ಸದಸ್ಯರು ಮತ್ತು ಇತರ ಅತಿಥಿಗಳಿಗೆ ನಾನು ಮೊತ್ತ ಮೊದಲು ಕೃತಜ್ಞತೆ ಅರ್ಪಿಸುತ್ತೇನೆ. ಒಂದು ಧಾರ್ಮಿಕ ಸಂಸ್ಥೆಯ ನಾಯಕನಿಗೆ ನಿಮ್ಮನ್ನು ಸಂಬೋಧಿಸಿ ಮಾತನಾಡಲು ನೀವು ಅನುಮತಿಸಿರುವಿರಿ. ಅಹ್ಮದಿಯಾ ಖಿಲಾಫತ್ ಶತವಾರ್ಷಿಕದ ಈ ಸಂದರ್ಭದಲ್ಲಿ ತನ್ನ ಚುನಾವಣಾ ಕ್ಷೇತ್ರದಲ್ಲಿರುವ ಒಂದು ಚಿಕ್ಕ ಸಮುದಾಯಕ್ಕೋಸ್ಕರ ನಮ್ಮ ಪ್ರಥಮ ಮಸ್‌ಜಿದ್ ಇರುವ ಪ್ರದೇಶದ ಪಾರ್ಲಿಮೆಂಟ್ ಸದಸ್ಯೆಯಾದ ಸನ್ಮಾನ್ಯ ಜಸ್ಟಿನ್ ಗ್ರೀನಿಂಗ್‌ರವರು ಈ ಸಮಾರಂಭವನ್ನು ವ್ಯವಸ್ಥೆ ಮಾಡಲು ಬಹಳ ಪರಿಶ್ರಮಪಟ್ಟಿರುವರು. ಅವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ. ಆಕೆಯ ಈ ಪ್ರವೃತ್ತಿ ಆಕೆಯ ಘನತೆ, ಆಕೆಯ ತಿಳಿ ಹೃದಯ ಮತ್ತು ತನ್ನ ಚುನಾವಣೆಯ ಕ್ಷೇತ್ರದಲ್ಲಿ ಇರುವ ಪ್ರತಿಯೊಂದು ಸಮುದಾಯದ ಸದಸ್ಯರ ಬಗ್ಗೆ ಆಕೆಗಿರುವ ಕಾಳಜಿಯನ್ನು ಸೂಚಿಸುತ್ತದೆ.



ಅಹ್ಮದಿಯಾ ಸಂಘಟನೆ ಜನರ ದೃಷ್ಟಿಯಲ್ಲಿ ಚಿಕ್ಕದಾಗಿದ್ದರೂ ಅದು ಇಸ್ಲಾಮ್ ಧರ್ಮದ ಪತಾಕೆಯನ್ನು ಎತ್ತಿಹಿಡಿಯುವ ಮತ್ತು ಇಸ್ಲಾಮಿನ ಸತ್ಯಾಂಶಭರಿತ ಉಪದೇಶಗಳನ್ನು ಪ್ರತಿನಿಧೀಕರಿಸುವ ಜನರನ್ನು ಒಳಗೊಂಡ ಸಮುದಾಯವಾಗಿದೆ. ಗ್ರೇಟ್ ಬ್ರಿಟನ್‌ನಲ್ಲಿ (ಎಂದರೆ ಇಂಗ್ಲೆಂಡ್, ಸ್ಕಾಟ್‌ಲೇಂಡ್, ವೇಲ್ಸ್ ಮತ್ತು ಉತ್ತರ ಅಯರ್‌ಲೇಂಡನ್ನೊಳಗೊಂಡ ಪ್ರದೇಶದಲ್ಲಿ) ವಾಸಿಸುವ ಪ್ರತಿಯೊಬ್ಬ ಅಹ್ಮದಿ ತಾನು ವಾಸಿಸುವ ದೇಶಕ್ಕೆ ಅತ್ಯಂತ ನಿಷ್ಠಾವಂತನೂ ಅದನ್ನು ಪ್ರೀತಿಸುವವನೂ ಆಗಿದ್ದಾನೆ. ಇದು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಪದೇಶಗಳಿಗನುಸಾರವಾಗಿದೆ. ದೇಶಪ್ರೇಮವು ಸತ್ಯ ವಿಶ್ವಾಸದ ಅವಿಭಾಜ್ಯ ಅಂಶವಾಗಿದೆ ಎಂದು ಹಝ್ರತ್ ಪೈಗಂಬರರು(ಸ) ಹೇಳಿದ್ದರು. ಇಸ್ಲಾಮಿನ ಉಪದೇಶಗಳನ್ನು ವಿಶದೀಕರಿಸಿ ಅದರ ಅನುಷ್ಠಾನದ ಬಗ್ಗೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಒತ್ತಿ ಹೇಳಿರುವರು. ನಾವು ಅವರನ್ನು ವಾಗ್ದತ್ತ ಮಸೀಹರೆಂದೂ ಈ ಯುಗದ ಧರ್ಮೋದ್ಧಾರಕರೆಂದೂ ನಂಬುತ್ತೇವೆ.

ನಮ್ಮ ಜಮಾಅತಿನ ಸ್ಥಾಪಕರು ತನ್ನ ವಾದವನ್ನು ಪ್ರಕಟಿಸುತ್ತಾ ಹೀಗೆ ಹೇಳಿದರು: ಸರ್ವಶಕ್ತನಾದ ದೇವನು ನನ್ನ ಮೇಲೆ ಎರಡು ಜವಾಬ್ದಾರಿಗಳನ್ನು ಹೊರಿಸಿರುವನು. ದೇವನ ಹಕ್ಕುಗಳನ್ನು ಈಡೇರಿಸುವುದು ಮೊದಲನೆಯ ಜವಾಬ್ದಾರಿಯಾಗಿದೆ. ದೇವನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವುದು ಎರಡನೆಯ ಜವಾಬ್ದಾರಿಯಾಗಿದೆ. ಇದು ಅತ್ಯಂತ ಕಷ್ಟಕರವೂ ಸೂಕ್ಷ್ಮವೂ ಆಗಿರುವ ಹೊಣೆಗಾರಿಕೆಯಾಗಿದೆ.

ಖಿಲಾಫತ್ ಬಗ್ಗೆ ನೀವು ಆತಂಕಗೊಂಡು ಚರಿತ್ರೆಯು ಪುನರಾವರ್ತಿಸುವ ಕಾಲವು ಬರುವುದೋ ಎಂದು ಭಯಪಡಬಹುದು. ಈ ರೀತಿಯ ನಾಯಕತ್ವದ ಕಾರಣದಿಂದ ಯುದ್ಧಗಳು ಪ್ರಾರಂಭವಾಗಬಹುದೆಂದು ನೀವು ಶಂಕಿಸಬಹುದು.

ನಾನು ನಿಮಗೆ ಖಾತರಿ ನೀಡುತ್ತೇನೆ. ಈ ರೀತಿಯ ಆಕ್ಷೇಪಗಳನ್ನು ಇಸ್ಲಾಮ್ ವಿರುದ್ಧ ಮಾಡಲಾಗುತ್ತಿದೆಯಾದರೂ ದೇವನಿಚ್ಛಿಸುವುದಾದರೆ, ಅಹ್ಮದಿಯಾ ಖಿಲಾಫತ್ ಯಾವಾಗಲೂ ಶಾಂತಿ ಮತ್ತು ಸೌಹಾರ್ದ ಭಾವನೆಯ ಪತಾಕೆಯನ್ನು ಜಗತ್ತಿನಾದ್ಯಂತ ಹಾರಿಸುವ ವ್ಯವಸ್ಥೆಯಾಗಿ ಯಾವಾಗಲೂ ಪ್ರಸಿದ್ಧಿ ಪಡೆಯುವುದು ಮತ್ತು ಅಹ್ಮದಿಯಾ ಜಮಾಅತಿನ ಸದಸ್ಯರು ತಾವು ವಾಸಿಸುವ ದೇಶಕ್ಕೆ ಯಾವಾಗಲೂ ನಿಷ್ಠರಾಗಿ ಇರುವರು.

ಅಹ್ಮದಿಯಾ ಖಿಲಾಫತ್ ಸ್ಥಾಪಿತವಾಗಿರುವುದು ಮಸೀಹ್ ಮತ್ತು ಮಹ್‌ದೀ ಪ್ರಾರಂಭಿಸಿದ ಕೆಲಸವನ್ನು ಶಾಶ್ವತವಾಗಿ ಮುಂದುವರಿಸಲಿಕ್ಕಾಗಿದೆ. ಆದುದರಿಂದ ಅಹ್ಮದಿಯಾ ಖಿಲಾಫತ್ ಬಗ್ಗೆ ಭಯಪಡಲು ಖಂಡಿತವಾಗಿಯೂ ಯಾವುದೇ ಕಾರಣವಿಲ್ಲ. ಈ ಖಿಲಾಫತ್ ಅಹ್ಮದಿಯಾ ಜಮಾಅತಿನ ಸದಸ್ಯರಿಗೆ ಅವರ ಸ್ಥಾಪಕರು ಆಗಮಿಸಿದ ಉದ್ದೇಶವನ್ನು ಸೂಚಿಸಿ ಎರಡು ಜವಾಬ್ದಾರಿಗಳನ್ನು ಈಡೇರಿಸುವ ಬಗ್ಗೆ ಅವರ ಗಮನ ಸೆಳೆಯುತ್ತದೆ. ಅದರ ಫಲಸ್ವರೂಪವಾಗಿ ಜಗತ್ತಿನಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಸ್ಥಾಪಿಸಲು ಅದು ಪ್ರಯತ್ನಶೀಲವಾಗಿದೆ.

ಸಮಯದ ಕೊರತೆಯ ಕಾರಣದಿಂದ ನಾನು ಮುಖ್ಯ ವಿಷಯದ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸುತ್ತೇನೆ. ದಾಟಿಹೋದ ಕೆಲವು ಶತಮಾನಗಳ ಕಾಲಾವಧಿಯನ್ನು ನಾವು ನಿಷ್ಪಕ್ಷವಾಗಿ ಪರಿಶೀಲಿಸುವುದಾದರೆ ಆ ಕಾಲಾವಧಿಯಲ್ಲಿ ನಡೆದ ಯುದ್ಧಗಳು ವಾಸ್ತವಿಕವಾಗಿ ಧಾರ್ಮಿಕ ಯುದ್ಧಗಳಾಗಿರಲಿಲ್ಲ. ಅವುಗಳು ಭೌಗೋಳಿಕವೂ ರಾಜಕೀಯವೂ ಆದ ಕಾರಣಗಳಿಂದ ನಡೆದವುಗಳಾಗಿವೆ. ಈಗಿನ ಕಾಲದಲ್ಲಿ ಸಹ ಸಂಘರ್ಷಗಳು ಮತ್ತು ಯುದ್ಧಗಳು ವಿವಿಧ ಜನಾಂಗಗಳ ಮಧ್ಯೆ ನಡೆಯುತ್ತಿರುವುದನ್ನು ನಾವು ನೋಡುವುದಾದರೆ ಅವುಗಳು ರಾಜಕೀಯ, ಕ್ಷೇತ್ರೀಯ ಮತ್ತು ಆರ್ಥಿಕ ಹಿತಾಸಕ್ತಿಗಳಿಗೋಸ್ಕರವಾಗಿವೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬಲ್ಲೆವು.

ಇಂದಿನ ಕಾಲದಲ್ಲಿ ವಿವಿಧ ವಿಷಯಗಳು ಸಾಗುತ್ತಿರುವ ದಿಶೆಗಳನ್ನು ಪರಿಶೀಲಿಸುವುದಾದರೆ ವಿವಿಧ ದೇಶಗಳ ರಾಜಕೀಯ ಮತ್ತು ಆರ್ಥಿಕ ಚಲನೆಗಳು ಅವುಗಳನ್ನು ಜಾಗತಿಕ ಯುದ್ಧಕ್ಕೆ ಒಯ್ಯಬಹುದೆಂದು ನಾನು ಭಯಪಡುತ್ತೇನೆ. ಬಡದೇಶಗಳು ಮಾತ್ರವಲ್ಲ ಶ್ರೀಮಂತ ದೇಶಗಳು ಸಹ ಇದರಿಂದ ಬಾಧಿಸಲ್ಪಟ್ಟಿವೆ. ಆದುದರಿಂದ ಮಹಾನ್ ಶಕ್ತಿಯುತ ದೇಶಗಳು ಮಾನವರನ್ನು ವಿಪತ್ತಿನ ಅಂಚಿನಿಂದ ರಕ್ಷಿಸಲು ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಬೇಕಾದುದು ಅವರ ಕರ್ತವ್ಯವಾಗಿದೆ.

ಬ್ರಿಟನ್ ಸಹ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳ ಮೇಲೆ ಪ್ರಭಾವ ಬೀರಲು ಶಕ್ತವಾದ ಮತ್ತು ಪ್ರಭಾವ

ಬೀರುತ್ತಿರುವ ಒಂದು ಮಹಾನ್ ಶಕ್ತಿಯುತ ದೇಶವಾಗಿದೆ. ನೀವು ಬಯಸುವುದಾದರೆ ನೀತಿ ಮತ್ತು ನ್ಯಾಯದ ಆವಶ್ಯಕತೆಗಳನ್ನು ಈಡೇರಿಸಿ ಲೋಕಕ್ಕೆ ಮಾರ್ಗದರ್ಶನ ನೀಡಲು ಶಕ್ತರಾಗಿರುವಿರಿ.

ನಾವು ಬ್ರಿಟನಿನ ಇತ್ತೀಚೆಗಿನ ಭೂತಕಾಲದ ಚರಿತ್ರೆಯನ್ನು ನೋಡುವುದಾದರೆ, ಬ್ರಿಟನ್ ಹಲವಾರು ದೇಶಗಳನ್ನು ತನ್ನ ಅಧೀನಕ್ಕೊಳಪಡಿಸಿ ಆಳುತ್ತಿತ್ತು. ಅದು ನ್ಯಾಯ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಉನ್ನತಮಟ್ಟವನ್ನು, ವಿಶಿಷ್ಟವಾಗಿ ಭಾರತ–ಪಾಕಿಸ್ತಾನದ ಉಪ ಭೂಖಂಡದಲ್ಲಿ ಸ್ಥಾಪಿಸಿ ಅದನ್ನು ತನ್ನ ಕೊಡುಗೆಯಾಗಿ ನೀಡಿತು. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇದಕ್ಕೆ ಸಾಕ್ಷಿಯಾಯಿತು. ಬ್ರಿಟಿಷ್ ಸರಕಾರದ ನ್ಯಾಯನಿಷ್ಠೆ ಮತ್ತು ಧಾರ್ಮಿಕ ಸ್ವಾತಂತ್ರ್ಯ ನೀಡುವಿಕೆ ಬಗ್ಗೆ ಅಹ್ಮದಿಯಾ ಜಮಾಅತಿನ ಸ್ಥಾಪಕರು ಅದನ್ನು ಹೊಗಳಿರುವರು. ವಿಕ್ಟೋರಿಯಾ ಮಹಾರಾಣಿಯ ವಜ್ರ ಜೂಬಿಲಿ ಮಹೋತ್ಸವದ ಸಂದರ್ಭದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಅವರಿಗೆ ಶುಭಾಶಯಗಳನ್ನು ಕೋರಿ ಇಸ್ಲಾಮಿನ ಸಂದೇಶವನ್ನು ತಲುಪಿಸಿದರಲ್ಲದೆ ಅವರ ಸರಕಾರ ಹಿಂದೂಸ್ತಾನದಲ್ಲಿ ನೀತಿ ಮತ್ತು ನ್ಯಾಯವನ್ನು ಉತ್ತಮ ರೀತಿಯಲ್ಲಿ ಪರಿಪಾಲಿಸುತ್ತಿರುವುದರಿಂದ ಅವರ ಸರಕಾರವನ್ನು ದೇವನು ಔದಾರ್ಯಪೂರ್ಣವಾಗಿ ಅನುಗ್ರಹಿಸಲಿ ಎಂದು ವಿಶಿಷ್ಟವಾಗಿ ಸೃಷ್ಟಿಕರ್ತನನ್ನು ಪ್ರಾರ್ಥಿಸಿದರು. ಆದುದರಿಂದ ನಮ್ಮ ಜಮಾಅತಿನ ಚರಿತ್ರೆ ತೋರಿಸಿಕೊಡುವುದೇನೆಂದರೆ ಬ್ರಿಟನ್ ತನ್ನ ನ್ಯಾಯನಿಷ್ಠೆಯನ್ನು ಪ್ರಕಟಿಸಿದಾಗಲೆಲ್ಲಾ ನಾವು ಅದಕ್ಕಾಗಿ ಕೃತಜ್ಞತೆ ಸೂಚಿಸಿದೆವು. ಇನ್ನು ಮುಂದೆ ಸಹ ನ್ಯಾಯನಿಷ್ಠೆಯು ಬ್ರಿಟಿಷ್ ಸರಕರದ ಸ್ಥಿರವಾದ ಹೆಗ್ಗುರುತಾಗುವುದೆಂದು ನಾವು ಪ್ರತೀಕ್ಷಿಸುತ್ತೇವೆ. ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿ ಮಾತ್ರವಲ್ಲ ಇತರ ಎಲ್ಲ ವಿಷಯಗಳಿಗೆ ಸಂಬಂಧಿಸಿಯೂ ನೀವು ನಿಮ್ಮ ಹಿಂದಿನ ಉತ್ತಮ ಗುಣಗಳನ್ನು ಎಂದೂ ಮರೆತು ಬಿಡಲಾರಿರೆಂದು ನಾವು ಆಶಿಸುತ್ತೇವೆ.

ಇಂದು ಲೋಕದಲ್ಲಿ ಬಹಳ ಅಸ್ವಸ್ಥತೆಗಳು ಮತ್ತು ಗಾಬರಿಹುಟ್ಟಿಸುವ ಪರಿಸ್ಥಿತಿಗಳು ತಲೆದೋರಿವೆ. ಕೆಲವು ಪ್ರದೇಶಗಳಲ್ಲಿ ಚಿಕ್ಕಮಟ್ಟ ಯುದ್ಧಗಳು ಪ್ರಾರಂಭವಾಗುತ್ತಿವೆ. ಕೆಲವು ಪ್ರದೇಶಗಳಲ್ಲಿ ಮಹಾನ್ ಲೋಕಶಕ್ತಿಗಳು ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸುವುದಾಗಿ ಹೇಳಿಕೊಳ್ಳುತ್ತವೆ. ನ್ಯಾಯದಾನದ ಆವಶ್ಯಕತೆಗಳು ಈಡೇರಿಸಲ್ಪಡದಿದ್ದರೆ ಸ್ಥಳೀಯ ಸಂಘರ್ಷಗಳು ಮತ್ತು ಸ್ಥಳೀಯ ಯುದ್ಧಗಳ ಜ್ವಾಲೆಗಳು ಬಡಿದೆಬ್ಬಿಸಲ್ಪಟ್ಟು ಲೋಕವನ್ನೆಲ್ಲಾ ಆವರಿಸಲು ಸಾಧ್ಯತೆಗಳಿವೆ. ಆದುದರಿಂದ ನೀವು ಲೋಕವನ್ನು ಸರ್ವನಾಶದಿಂದ ಸಂರಕ್ಷಿಸಲು ಕಾರ್ಯೋನ್ಮುಖರಾಗಬೇಕೆಂದು ನಾನು ವಿನೀತನಾಗಿ ನಿಮ್ಮನ್ನು ಕೋರುತ್ತೇನೆ.

ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಇಸ್ಲಾಮ್ ನೀಡುವ ಉಪದೇಶಗಳೇನೆಂದು ನಾನು ಸಂಕ್ಷಿಪ್ತವಾಗಿ ವಿವರಿಸುವೆನು; ಅಥವಾ ಈ ಉಪದೇಶಗಳ ಬೆಳಕಿನಲ್ಲಿ ಲೋಕದಲ್ಲಿ ಶಾಂತಿಯನ್ನು ಹೇಗೆ ಸ್ಥಾಪಿಸಬಹುದೆಂದು ನಾನು ಪ್ರಸ್ತಾಪಿಸುವೆನು. ಅವರು ಈ ಉಪದೇಶಗಳನ್ನು ಯಾರಿಗೆ ಪ್ರಥಮವಾಗಿ ನೀಡಲಾಯಿತೋ ಅವರು, ಎಂದರೆ ಮುಸ್ಲಿಮರು ಈ ಉಪದೇಶಗಳನ್ನು ಕೃತಿಗಿಳಿಸಲು ಕಾರ್ಯತತ್ಪರರಾಗುವ ಸಾಮರ್ಥ್ಯ ಗಳಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಎಲ್ಲಾ ದೇಶಗಳು, ಮಹಾನ್ ಲೋಕ ಶಕ್ತಿಗಳು ಈ ಉಪದೇಶಗಳನ್ನು ಕಾರ್ಯಗತಗೊಳಿಸಬೇಕೆಂದು ನಾನು ಆಶಿಸುತ್ತೇನೆ.

ಈ ಕಾಲಘಟ್ಟದಲ್ಲಿ ಮತ್ತು ಈ ಯುಗದಲ್ಲಿ ವಿಶ್ವವು ಒಂದು ಜಾಗತಿಕ ಗ್ರಾಮವಾಗಿ ಕುಗ್ಗಿಹೋಗಿದೆ. ಈ ಸ್ಥಿತಿಯನ್ನು ಹಿಂದೆ ಊಹಿಸಲು ಕೂಡ ಸಾಧ್ಯವಿರಲಿಲ್ಲ. ನಾವು ಮಾನವರೆಂಬ ನೆಲೆಯಲ್ಲಿ ನಮ್ಮ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಿಕೊಂಡು ಮಾನವರ



ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವ ಕಡೆಗೆ ಗಮನಹರಿಸಬೇಕು. ಹೀಗೆ ಮಾಡುವುದು ಲೋಕದಲ್ಲಿ ಶಾಂತಿ ಸ್ಥಾಪನೆಗೆ ಸಹಾಯಕವಾಗಿದೆ. ಈ ಪ್ರಯತ್ನವು ನೀತಿಪಾಲನೆ ಮತ್ತು ನ್ಯಾಯದಾನದ ಆವಶ್ಯಕತೆಗಳನ್ನು ಈಡೇರಿಸುವ ತಳಹದಿಯ ಮೇಲೆ ಸ್ಪಷ್ಟವಾಗಿ ಸ್ಥಾಪಿತವಾಗಿರಬೇಕು.

ಲೋಕದಲ್ಲಿ ಇಂದು ಭುಗಿಲೆದ್ದಿರುವ ಸಮಸ್ಯೆಗಳಲ್ಲಿ ಒಂದು, ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಧರ್ಮದ ಕಾರಣದಿಂದ ತಲೆದೋರಿದೆ. ಕೆಲವು ಮುಸ್ಲಿಮ್ ಗುಂಪುಗಳು ನ್ಯಾಯರಹಿತ ಆಕ್ರಮಣಗಳ ಮೂಲಕ ಮತ್ತು ಆತ್ಮಹತ್ಯಾ ಬಾಂಬರ್‌ಗಳ ಮೂಲಕ ಧರ್ಮದ ಹೆಸರಿನಲ್ಲಿ ಮುಸ್ಲಿಮೇತರರನ್ನು ಹಾನಿಗೊಳಪಡಿಸುತ್ತಾರೆ ಮತ್ತು ಕೊಲ್ಲುತ್ತಾರೆ. ಸೈನಿಕರು ಮತ್ತು ನಿಷ್ಕಳಂಕ ನಾಗರಿಕರು ಅವರ ಆಕ್ರಮಣಗಳಿಗೆ ಬಲಿಯಾಗುತ್ತಾರೆ. ಅವರು ನಿರಪರಾಧಿಗಳಾದ ಮುಸ್ಲಿಮರನ್ನೂ ಮಕ್ಕಳನ್ನೂ ಸಹ ತಮ್ಮ ಬಲಿಪಶುಗಳನ್ನಾಗಿ ಮಾಡುತ್ತಾರೆ. ಈ ಕ್ರೂರ ಕೃತ್ಯಗಳನ್ನು ಇಸ್ಲಾಮ್ ಧರ್ಮ ಸಂಪೂರ್ಣವಾಗಿ ನಿಷಿದ್ಧಗೊಳಿಸುತ್ತದೆ.

ಕೆಲವು ಮುಸ್ಲಿಮರ ಈ ಭೀಭತ್ಸ್ಯ ಕೃತ್ಯಗಳ ಕಾರಣದಿಂದ ಮುಸ್ಲಿಮೇತರ ದೇಶಗಳಲ್ಲಿ ಮುಸ್ಲಿಮರ ಬಗ್ಗೆ ಸಂಪೂರ್ಣವಾಗಿ ತಪ್ಪು ಅಭಿಪ್ರಾಯಗಳು ರೂಪಿಸಲ್ಪಟ್ಟಿವೆ. ಈ ಕಾರಣದಿಂದ ಅಂತಹ ದೇಶಗಳ ಸಮಾಜದ ಕೆಲವು ವಿಭಾಗಗಳು ಇಸ್ಲಾಮ್ ಧರ್ಮದ ವಿರುದ್ಧ ಬಹಿರಂಗವಾಗಿ ಅಭಿಪ್ರಾಯಗಳನ್ನು ಪ್ರಕಟಿಸುತ್ತಿವೆ. ಬೇರೆ ಕೆಲವರು ಬಹಿರಂಗವಾಗಿ ಇಸ್ಲಾಮನ್ನು ದೂಷಿಸದಿದ್ದರೂ ಅವರ ಹೃದಯಗಳಲ್ಲಿ ಇಸ್ಲಾಮಿನ ಕುರಿತು ಒಳ್ಳೆಯ ಅಭಿಪ್ರಾಯವಿರುವುದಿಲ್ಲ. ಈ ಕಾರಣದಿಂದ ಪಾಶ್ಚಿಮಾತ್ಯ ಮತ್ತು ಮುಸ್ಲಿಮೇತರ ದೇಶಗಳ ಜನರ ಹೃದಯಗಳಲ್ಲಿ ಮುಸ್ಲಿಮರ ಬಗ್ಗೆ ಅಪನಂಬಿಕೆಗಳು ತಲೆದೋರಿವೆ. ಕೆಲವು ಮುಸ್ಲಿಮ್ ಗುಂಪುಗಳ ಕೃತ್ಯಗಳ ಕಾರಣದಿಂದ ಮುಸ್ಲಿಮೇತರರ ಪ್ರತಿಕ್ರಿಯೆಗಳು ಮುಸ್ಲಿಮರಿಗೆ ಹೆಚ್ಚು ಹೆಚ್ಚು ಹಾನಿಕರವಾಗಿ ಮುಂದುವರಿಯುತ್ತಿವೆಯೇ ಹೊರತು ಅದರಲ್ಲಿ ಉತ್ತಮ ಬದಲಾವಣೆ ಕಂಡುಬರುವುದಿಲ್ಲ.

ಮುಸ್ಲಿಮೇತರ ತಪ್ಪು ಪ್ರತಿಕ್ರಿಯೆಯ ಮೊದಲ ಉದಾಹರಣೆ ಹಝ್ರತ್ ಪೈಗಂಬರರ(ಸ) ಸ್ವಭಾವ ಗುಣದ ಬಗ್ಗೆ ಮತ್ತು ಮುಸ್ಲಿಮರ ಪವಿತ್ರ ಗ್ರಂಥವಾದ ಪವಿತ್ರ ಖುರ್‌ಆನಿನ ಬಗ್ಗೆ ಮಾಡಿದ ದೋಷಾರೋಪಣೆಗಳಾಗಿವೆ. ಈ ಬಗ್ಗೆ ಬ್ರಿಟಿಷ್ ರಾಜಕಾರಣಿಗಳು, ಅವರು ಯಾವ ಪಕ್ಷಕ್ಕೆ ಸೇರಿದವರಾದರೂ ಕೈಗೊಂಡ ನಿಲುವು ಬೇರೆ ದೇಶಗಳ ರಾಜಕಾರಣಿಗಳ ಮತ್ತು ಬುದ್ಧಿಜೀವಿಗಳ ನಿಲುವಿನ ಹಾಗೆ ಇರಲಿಲ್ಲ. ಆದುದರಿಂದ ಆ ಬಗ್ಗೆ ನಾನು ನಿಮಗೆ ಕೃತಜ್ಞತೆ ಸೂಚಿಸುತ್ತೇನೆ. ಅನ್ಯರ ಭಾವನೆಗಳನ್ನು ನೋಯಿಸುವುದರಿಂದ ಸಿಗುವ ಪ್ರಯೋಜನವಾದರೂ ಏನು? ಅದರಿಂದ ಹಗೆತನ ಮತ್ತು ದ್ವೇಷವು ಹೆಚ್ಚಾಗುತ್ತದೆಯಲ್ಲದೆ ಬೇರೆ ಯಾವ ಪ್ರಯೋಜನವೂ ಇಲ್ಲ. ಈ ದ್ವೇಷಭಾವನೆಯು ಕೆಲವು ಉಗ್ರವಾದಿ ಮುಸ್ಲಿಮರನ್ನು ಅನಿಸ್ಲಾಮಿಕ ಕೃತ್ಯಗಳನ್ನು ಮಾಡಲು ಪ್ರೇರೇಪಣೆ ನೀಡುತ್ತದೆ. ಅದರ ಫಲಸ್ವರೂಪವಾಗಿ ಹಲವು ಮುಸ್ಲಿಮೇತರರು ಇಸ್ಲಾಮ್ ಬಗ್ಗೆ ತಮ್ಮ ವಿರೋಧವನ್ನು ಇನ್ನಷ್ಟು ಹೆಚ್ಚಿಗೆ

ಸೂಚಿಸಲು ಸಂದರ್ಭ ಸಿಗುತ್ತದೆ.

ಹೀಗಿದ್ದರೂ ಹಝ್ರತ್ ಪೈಗಂಬರರನ್ನು[ಸ] ಹೃತ್ಪೂರ್ವಕವಾಗಿ ಪ್ರೀತಿಸುವವರಾದ, ಆದರೆ ಉಗ್ರವಾದಿಗಳಲ್ಲದ ಮುಸ್ಲಿಮರು ಇಂತಹ ದೋಷಾರೋಪಣೆಗಳಿಂದ ತೀವ್ರವಾಗಿ ನೋವನ್ನು ಅನುಭವಿಸುತ್ತಿದ್ದಾರೆ. ಇವರಲ್ಲಿ ಅಹ್ಮದೀ ಮುಸ್ಲಿಮರು ಮುಂಚೂಣಿ ಯಲ್ಲಿದ್ದಾರೆ. ನಮ್ಮ ಏಕಮಾತ್ರ ಮತ್ತು ಮುಖ್ಯ ಉದ್ದೇಶ ಲಕ್ಷ್ಯ ಹಝ್ರತ್ ಪೈಗಂಬರರ[ಸ]



ಪರಿಪೂರ್ಣ ಸ್ವಭಾವಗುಣವನ್ನು ಲೋಕದ ಮುಂದಿರಿಸುವುದು ಮತ್ತು ಅದರೊಂದಿಗೆ ಇಸ್ಲಾಮಿನ ಸುಂದರ ಉಪದೇಶಗಳನ್ನು ಸೇರ್ಪಡಿಸುವು ದಾಗಿದೆ.

ನಾವು ಎಲ್ಲಾ ಪ್ರವಾದಿಗಳನ್ನು ಗೌರವಿಸಿ ಆದರ ಭಾವದಿಂದ ಕಾಣುತ್ತೇವೆ. ಅವರೆಲ್ಲರೂ ದೇವನ ಸಂದೇಶವಾಹಕರೆಂದು ನಂಬುವ ನಾವು ಅವರ ಪೈಕಿ ಯಾರೊಬ್ಬರ ವಿರುದ್ಧವೂ ಅಪಮಾನಕರವಾಗಿ ಆಕ್ಷೇಪಿಸಲಾರೆವು. ಆದರೆ ನಮ್ಮ ಹಝುರತ್ ಪ್ರವಾದಿಯವರ ಬಗ್ಗೆ ಆಧಾರರಹಿತ, ಸುಳ್ಳು ದೋಷಾರೋಪಗಳನ್ನು ಆಲಿಸುವಾಗ ನಾವು ಬಹಳ ಹೆಚ್ಚು ದುಃಖಿತರಾಗುತ್ತೇವೆ.

ಇಂದಿನ ಕಾಲದಲ್ಲಿ ಲೋಕವು ವಿವಿಧ ಬಣಗಳಾಗಿ ವಿಭಾಗಿಸಲ್ಪಟ್ಟು ತೀವ್ರವಾದಗಳು ಹೆಚ್ಚುಗೊಳ್ಳುತ್ತಿವೆ. ಸಾಂಪತ್ತಿಕ ಮತ್ತು ಆರ್ಥಿಕ ಸ್ಥಿತಿಗಳು ಹದೆಗೆಡುತ್ತಿವೆ. ಎಲ್ಲ ವಿಧ ದ್ವೇಷ, ಹಗೆತನವನ್ನು ಕೊನೆಗೊಳಿಸಿ ಶಾಂತಿಸ್ಥಾಪನೆಗೆ ತೊಡಗಬೇಕಾದುದು ಅತ್ಯಗತ್ಯವಾಗಿದೆ. ಎಲ್ಲ ಮನೋಭಾವನೆಗಳನ್ನು ಗೌರವಿಸಿ ಪರಸ್ಪರ ಆದರಿಸುವುದರಿಂದ ಮಾತ್ರ ಇದು ಸಾಧ್ಯವಾಗುವುದು. ಯಥೋಚಿತವಾಗಿಯೂ ಪ್ರಾಮಾಣಿಕ ವಾಗಿಯೂ ಹೀಗೆ ಮಾಡದಿದ್ದರೆ ಅನಿಯಂತ್ರಿತ ವಿಷಯ ಪರಿಸ್ಥಿತಿಗಳು ಉಂಟಾಗುವುವು. ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಪಾಶ್ಚಾತ್ಯ ದೇಶಗಳು ಔದಾರ್ಯಪೂರ್ವಕವಾಗಿ ಬಡ ಅಥವಾ ಅಭಿವೃದ್ಧಿಶೀಲ ದೇಶಗಳ ಜನರಿಗೆ (ಅವರ ಪೈಕಿ ಮುಸ್ಲಿಮರು ಸಹ ಸೇರುತ್ತಾರೆ) ಆಶ್ರಯ ಪಡೆಯಲು ಅನುಮತಿಸಿರುವುದು ಮೆಚ್ಚಿಕೆಯ ಕಾರ್ಯವಾಗಿದೆ.

ಈ ಜನರ ಮನೋಭಾವನೆಗಳನ್ನೂ ಧಾರ್ಮಿಕ ಅನುಷ್ಠಾನ ಗಳನ್ನೂ ಗೌರವಿಸಬೇಕೆಂದು ನಿಜವಾದ ನ್ಯಾಯವು ಅಗತ್ಯಪಡಿಸುತ್ತದೆ. ಈ ರೀತಿಯಿಂದ ಜನರಿಗೆ ಮನಃಶಾಂತಿ ಸಿದ್ಧಿಸುವುದು. ಒಬ್ಬ ವ್ಯಕ್ತಿಯ ಮನಃಶಾಂತಿ ಕದಡಿದರೆ ಸಮಾಜದ ಮನಃಶಾಂತಿ ಬಾಧಿಸಲ್ಪಡುತ್ತದೆ ಎಂಬುದನ್ನು ನಾವು ನೆನಪಿಡಬೇಕು.

ನಾನು ಇದರ ಮೊದಲು ಹೇಳಿದ ಹಾಗೆ ಬ್ರಿಟಿಷ್ ರಾಜಕಾರಣಿಗಳು ಮತ್ತು ಪಾರ್ಲಿಮೆಂಟ್ ಸದಸ್ಯರು ನ್ಯಾಯಬದ್ಧವಾಗಿ ವರ್ತಿಸಿ ಅನ್ಯರ ಹಾಗೆ ನಿಂದಿಸದುದಕ್ಕೆ ನಾನು ನಿಮಗೆ ಕೃತಜ್ಞನಾಗಿದ್ದೇನೆ. ಇದು ಪವಿತ್ರ ಖುರ್‌ಆನ್ ನಮಗೆ ನೀಡಿದ ಉಪದೇಶಗಳಿಗೆ ಅನುಸಾರವಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

*"ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ."*
*(ಅಧ್ಯಾಯ 2, ವಚನ 257)*

ಈ ಆಜ್ಞೆಯು ಇಸ್ಲಾಮನ್ನು ಖಡ್ಗಬಲದಿಂದ ಹಬ್ಬಿಸಲಾಯಿತೆಂಬ ಆರೋಪವನ್ನು ನಿರಾಕರಿಸುತ್ತದೆಯಲ್ಲದೆ ಮುಸ್ಲಿಮರಿಗೆ ಉಪದೇಶಿಸುತ್ತದೆ ಯೇನೆಂದರೆ, ವಿಶ್ವಾಸವೆಂಬುದು ಮನುಷ್ಯ ಮತ್ತು ದೇವನ ಮಧ್ಯೆ ಇರುವ ಒಂದು ವಿಷಯವಾಗಿದೆ. ನೀವು ಅದರಲ್ಲಿ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಬಾರದು.

ಪ್ರತಿಯೊಬ್ಬನು ತನ್ನ ನಂಬಿಕೆಗನುಸಾರವಾಗಿ ಜೀವಿಸಲು ಮತ್ತು ತನ್ನ ಧಾರ್ಮಿಕ ಅನುಷ್ಠಾನ ಕ್ರಿಯೆಗಳನ್ನು ಮಾಡಲು ಇಸ್ಲಾಮ್ ಅನುಮತಿಸುತ್ತದೆ. ಆದರೆ ಧರ್ಮದ ಹೆಸರಿನಲ್ಲಿ ಮಾಡುವ ಯಾವುದಾದರೂ ಅನುಷ್ಠಾನವು ಅನ್ಯರಿಗೆ ಹಾನಿಯನ್ನುಂಟು ಮಾಡುವುದೂ ದೇಶದ ಕಾನೂನುಕಾಯಿದೆಗಳಿಗೆ ವಿರುದ್ಧವೂ ಆಗಿದ್ದರೆ ಸರಕಾರದ ನಿಯಮ ಪಾಲನೆಯ ಅಧಿಕಾರಿಗಳು ಅದರಲ್ಲಿ ಹಸ್ತಕ್ಷೇಪಮಾಡಿ ತಡೆಯಬೇಕು. ಒಂದು ಕ್ರೂರ ಕೃತ್ಯವು ಯಾವುದಾದರೂ ಧರ್ಮದವರಲ್ಲಿ ಆಚರಿಸಲ್ಪಡು ತ್ತಿದ್ದರೆ ಅದು ಯಾವುದೇ ದೈವಿಕ ಪ್ರವಾದಿಯ ಉಪದೇಶದ ಭಾಗವಾಗಿರ ಲಾರದು.

ಇದು ದೇಶೀಯವಾಗಿಯೂ ಜಾಗತಿಕವಾಗಿಯೂ ಶಾಂತಿಯನ್ನು ಸ್ಥಾಪಿಸಬಹುದಾದ ಮೂಲಭೂತ ಸಿದ್ಧಾಂತವಾಗಿದೆ.

ಇಸ್ಲಾಂ ಹೀಗೆಯೂ ಉಪದೇಶಿಸುತ್ತದೆ:

ನೀವು ನಿಮ್ಮ ಧರ್ಮವನ್ನು ಬದಲಾಯಿಸಿದಾಗ ನೀವಿದ್ದ ಸಮಾಜ ಅಥವಾ ಅದರ ಗುಂಪುಗಳು ಅಥವಾ ಸರಕಾರ ಹಸ್ತಕ್ಷೇಪ ನಡೆಸಿ ನಿಮ್ಮ ಧಾರ್ಮಿಕ ಆಚರಣೆಗಳಿಗೆ ಭಂಗವನ್ನುಂಟುಮಾಡುವುದಾದರೆ ಮತ್ತು ಅನಂತರ ಪರಿಸ್ಥಿತಿಗಳು ಬದಲಾವಣೆಹೊಂದಿ ನಿಮಗೆ ಅನುಕೂಲವಾದ ಸ್ಥಿತಿ ಉಂಟಾದರೆ ನೀವು ನಿಮ್ಮನ್ನು ಹಿಂಸಿಸಿದವರ ವಿರುದ್ಧ ಯಾವುದೇ ದ್ವೇಷವನ್ನು ಹೊಂದಬಾರದು. ನೀವು ಸೇಡು ತೀರಿಸಿಕೊಳ್ಳುವ ಬಗ್ಗೆ ಯೋಚಿಸಬಾರದು. ನೀವು ನ್ಯಾಯ ಮತ್ತು ಸಮಾನತೆಯನ್ನು ಸ್ಥಾಪಿಸಬೇಕು.

ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ:

*"ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವ ವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರ ಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ, ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ಸದಾ ನ್ಯಾಯುತವಾಗಿ ನೀವು ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾಗಿದೆ. ನೀವು ಅಲ್ಲಾಹನ ಭಯಭಕ್ತಿ ಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲಾ ಬಲ್ಲವನಾಗಿದ್ದಾನೆ."* (5 : 9)

ಇದು ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಸಹಾಯಕವಾದ ಉಪದೇಶವಾಗಿದೆ. ಇಲ್ಲಿ ನಿಮ್ಮ ಶತ್ರುಗಳೊಂದಿಗೆ ವರ್ತಿಸುವಾಗ ಕೂಡ ನ್ಯಾಯಬದ್ಧತೆಯನ್ನು ಕೈಬಿಡಬಾರದೆಂದು ಉಪದೇಶಿಸಲಾಗಿದೆ.

ಇಸ್ಲಾಮಿನ ಈ ಉಪದೇಶವನ್ನು ಮುಸ್ಲಿಮರು ಅನುಸರಿಸು ತ್ತಿದ್ದರೆಂದೂ ನ್ಯಾಯಬದ್ಧವಾಗಿ ವರ್ತಿಸುತ್ತಿದ್ದರೆಂದೂ ಇಸ್ಲಾಮಿನ ಆರಂಭ ಕಾಲದ ಚರಿತ್ರೆಯು ಸಾಕ್ಷ್ಯ ನೀಡುತ್ತದೆ. ನಾನು ಈ ಬಗ್ಗೆ ಹೆಚ್ಚು ಉದಾಹರಣೆಗಳನ್ನು ಈಗ ನೀಡಲಾರೆನು. ಆದರೆ, ಮಕ್ಕವನ್ನು ಜಯಿಸಿದ ನಂತರ ಹಝ್ರತ್ ಪೈಗಂಬರರು[ಸ] ತನ್ನನ್ನೂ ತನ್ನ ಅನುಯಾಯಿ ಗಳನ್ನೂ ದೌರ್ಜನ್ಯಗಳಿಗೀಡುಮಾಡಿದವರ ವಿರುದ್ಧ ಯಾವುದೇ ಸೇಡು ತೀರಿಸಲಿಲ್ಲ. ಅವರನ್ನೆಲ್ಲಾ ಕ್ಷಮಿಸಿ ಅವರು ತಮ್ಮ ಧರ್ಮದಲ್ಲಿ ಮುಂದು ವರಿಯಲು ಹಝ್ರತ್ ಪೈಗಂಬರರು[ಸ] ಅನುಮತಿ ನೀಡಿದರೆಂದು ಚರಿತ್ರೆ ಸಾಕ್ಷ್ಯ ನೀಡಿದೆ. ಈಗ ಸಹ ಧಾರ್ಮಿಕ ಉಗ್ರಗಾಮಿಗಳ ವಿರುದ್ಧ

ಮಾಡುವ ಯುದ್ಧಗಳಲ್ಲೂ ಇತರ ಯುದ್ಧಗಳಲ್ಲೂ ಶತ್ರುಗಳ ವಿರುದ್ಧ ನ್ಯಾಯ ಬದ್ಧವಾಗಿ ವರ್ತಿಸಿದರೆ ಮಾತ್ರ ಶಾಂತಿ ಸ್ಥಾಪಿಸಲ್ಪಡಲು ಸಾಧ್ಯವಾಗುವುದು. ಅಂತಹ ಶಾಂತಿಯು ದೀರ್ಘಕಾಲ ಬಾಳುವುದು.

ಕಳೆದ ಶತಮಾನದಲ್ಲಿ ಎರಡು ಜಾಗತಿಕ ಮಹಾಯುದ್ಧಗಳು ನಡೆದವು. ಈ ಯುದ್ಧಗಳಿಗೆ ಕಾರಣಗಳು ಯಾವುವು ಎಂದು ಪರಿಶೀಲಿಸಲು ನಾವು ತಳಸ್ಪರ್ಶಿಯಾಗಿ ನೋಡಿದರೆ ಒಂದು ಮೂಲ ಕಾರಣವು ಸ್ಪಷ್ಟವಾಗಿ ಗೋಚರಿಸುತ್ತದೆಯೇನೆಂದರೆ, ಮೊತ್ತಮೊದಲಾಗಿ ನ್ಯಾಯಬದ್ಧವಾಗಿ ಯಾರೂ ನಡೆದುಕೊಳ್ಳಲಿಲ್ಲ. ಅದರ ಪ್ರತಿಕ್ರಿಯೆಯಾಗಿ, ನಂದಿಸಲಾಗಿದೆ ಎಂದು ಭಾವಿಸಲಾದ ಅಗ್ನಿಕುಂಡದಿಂದ ಕೆಂಡಗಳು ಮೆಲ್ಲಮೆಲ್ಲನೆ ಉರಿಯುತೊಡಗಿದುವು. ಅದರ ಜ್ವಾಲೆಗಳು ಲೋಕದಾದ್ಯಂತ ಎರಡನೆಯ ಸಲವೂ ಆವರಿಸಿತು.

ಇಂದು ಅಶಾಂತ ಪರಿಸ್ಥಿತಿಯು ವರ್ಧಿಸುತ್ತಾ ಇದೆ. ಯುದ್ಧಗಳು ಮತ್ತು ಶಾಂತಿಸ್ಥಾಪನೆಯ ಪ್ರಯತ್ನಗಳು ಇನ್ನೊಂದು ಜಾಗತಿಕ ಮಹಾಯುದ್ಧಕ್ಕೆ ನಾಂದಿಯಾಗುತ್ತಿವೆ. ಇದಲ್ಲದೆ ಇಂದಿನ ಆರ್ಥಿಕ ಮುಗ್ಗಟ್ಟು ಮತ್ತು ಸಾಮಾಜಿಕ ಸಮಸ್ಯೆಗಳು ಈ ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸಲು ಸಹಾಯಕವಾಗುವುವು.

ಪವಿತ್ರ ಖುರ್‌ಆನ್ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಕೆಲವು ಅಮೂಲ್ಯ ತತ್ವಗಳನ್ನು ಉಪದೇಶಿಸಿದೆ. ದುರಾಶೆಯು ದ್ವೇಷವನ್ನು ವರ್ಧಿಸುತ್ತದೆ ಎಂಬುದು ಒಂದು ಸತ್ಯವಾಗಿದೆ. ಅದು ಕೆಲವು ಸಾರಿ ಅನ್ಯ ದೇಶಗಳ ಭೂಮಿಯ ಸ್ವಾಧೀನಪಡಿಸುವಿಕೆ, ಅನ್ಯರ ನೈಸರ್ಗಿಕ ಸಂಪತ್ತಿನ ಕೊಳ್ಳೆಹೊಡೆಯುವಿಕೆ ಮತ್ತು ಅನ್ಯರ ಮೇಲೆ ತಮ್ಮ ಶ್ರೇಷ್ಠತೆಯನ್ನು ಸ್ಥಾಪಿಸಲು ಮಾಡುವ ಆಕ್ರಮಣದ ಮೂಲಕ ಪ್ರಕಟವಾಗುತ್ತದೆ. ಇದು ಕ್ರೂರ ಹಿಂಸಾಚಾರಗಳಿಗೆ ಕಾರಣವಾಗುತ್ತದೆ. ನಿಷ್ಕರುಣ ನಿರಂಕುಶಾಧಿಪತಿಗಳು ಜನರ ಹಕ್ಕುಗಳನ್ನು ಅಪಹರಿಸಿ ತಮ್ಮ ಶ್ರೇಷ್ಠತೆಯನ್ನು ತಮ್ಮ ಸ್ವಾರ್ಥದ ಗಳಿಕೆಯ ಮಾರ್ಗದಲ್ಲಿ ಪ್ರಕಟಿಸುತ್ತಾ ಕ್ರೂರ ಹಿಂಸಾಚಾರಗಳನ್ನು ನಡೆಸುತ್ತಾರೆ. ಅದೇ ರೀತಿ ಅನ್ಯ ದೇಶವನ್ನು ಆಕ್ರಮಣ ಮಾಡುವ ಶಕ್ತಿಗಳು ಕ್ರೂರ ಹಿಂಸಾಚಾರಗಳನ್ನು ನಡೆಸುತ್ತಾರೆ. ಕೆಲವು ಸಾರಿ ಹಿಂಸಾಚಾರಕ್ಕೆ ಗುರಿಯಾದವರ ಆರ್ತನಾದಗಳು ಹೊರ ಲೋಕಕ್ಕೆ ಕೇಳಿಸುತ್ತವೆ.

ಹಝ್ರತ್ ಪೈಗಂಬರರು[ಸ] ನಮಗೊಂದು ಅಮೂಲ್ಯ ತತ್ವವನ್ನು ಕಲಿಸಿಕೊಟ್ಟಿದ್ದಾರೆ. ದೌರ್ಜನ್ಯಗಾರನಿಗೂ ದೌರ್ಜನ್ಯಕ್ಕೆ ಗುರಿಯಾದವನಿಗೂ ನೆರವು ನೀಡಬೇಕೆಂದು ಅವರು ಉಪದೇಶಿಸಿದ್ದಾರೆ.

ಹಝ್ರತ್ ಪೈಗಂಬರರ[ಸ] ಶಿಷ್ಯರು ವಿಚಾರಿಸಿದರು: "ದೌರ್ಜನ್ಯಕ್ಕೆ ಗುರಿಯಾದವನಿಗೆ ನೆರವು ನೀಡುವ ವಿಷಯ ನಮಗೆ ಅರ್ಥವಾಗುತ್ತದೆ. ಆದರೆ ದೌರ್ಜನ್ಯಗಾರನಿಗೆ ನೆರವನ್ನು ನೀಡುವುದು ಹೇಗೆ?" ಪೈಗಂಬರರು[ಸ] ಹೇಳಿದರು: "ದೌರ್ಜನ್ಯಗಾರನ ಕೈಗಳನ್ನು ದೌರ್ಜನ್ಯದಿಂದ ತಡೆಯುವ ಮೂಲಕ ನೀವು ಅವನಿಗೆ ನೆರವು ನೀಡಬಹುದು. ಹೀಗೆ ಅವನನ್ನು ದೇವನ ಶಿಕ್ಷೆಯಿಂದ ರಕ್ಷಿಸಬಹುದು. ಆದುದರಿಂದ ಅವನ ಮೇಲೆ ದಯೆದೋರಿ ರಕ್ಷಿಸಲು ಪ್ರಯತ್ನಿಸಬೇಕು."

ಈ ತತ್ವವನ್ನು ಸಮಾಜದ ಅತ್ಯಂತ ಕೆಳ ಶ್ರೇಣಿಯಿಂದ ಪ್ರಾರಂಭಿಸಿ ಜಾಗತಿಕ ಮಟ್ಟದಲ್ಲೂ ವಿಸ್ತರಿಸಬಹುದಾಗಿದೆ.

ಇದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

*"ಸತ್ಯವಿಶ್ವಾಸಿಗಳ ಎರಡು ಗುಂಪುಗಳು ಪರಸ್ಪರ ಹೋರಾಟಕ್ಕಿಳಿದರೆ, ನೀವು ಅವರ ಮಧ್ಯೆ ಸಂಧಾನವೇರ್ಪಡಿಸಿರಿ. ಆ ಬಳಿಕ ಅವರಲ್ಲಿ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಆಕ್ರಮಣವೆಸಗಿದರೆ, ಅಲ್ಲಾಹನ ಆಜ್ಞೆಯ ಕಡೆಗೆ ಅವರು ಮರಳುವ ತನಕ ಅವರ ವಿರುದ್ಧ ಹೋರಾಡಿರಿ. ಅನಂತರ, ಆ ಗುಂಪು ಮರಳಿದರೆ ಅವರ ಮಧ್ಯೆ ನ್ಯಾಯಯುತವಾಗಿ ಸಂಧಾನ ಮಾಡಿಸಿರಿ ಹಾಗೂ ನ್ಯಾಯೋಚಿತವಾಗಿ ವರ್ತಿಸಿರಿ. ನಿಶ್ಚಯವಾಗಿಯೂ ಅಲ್ಲಾಹನು ನ್ಯಾಯವಂತರನ್ನು ಪ್ರೀತಿಸುತ್ತಾನೆ."* *(49:10)*

ಇದು ಮುಸ್ಲಿಮರಿಗೆ ನೀಡಲಾದ ಉಪದೇಶವಾಗಿದ್ದರೂ ಇದರ ತತ್ವವನ್ನು ಪಾಲಿಸುವುದಾದರೆ ಜಾಗತಿಕ ಶಾಂತಿಗೆ ಅಸ್ತಿಭಾರ ಹಾಕಬಹುದಾಗಿದೆ.

ಶಾಂತಿಸ್ಥಾಪನೆಗೆ ಅತ್ಯಾವಶ್ಯಕವಾದುದು ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸುವುದಾಗಿದೆ ಎಂದು ನಾನು ನನ್ನ ಭಾಷಣದ ಪ್ರಾರಂಭದಲ್ಲಿಯೇ ವಿವರಿಸಿದ್ದೇನೆ. ನ್ಯಾಯಬದ್ಧವಾಗಿ ಶಾಂತಿಗೆ ಮಾಡಿದ ಪ್ರಯತ್ನಗಳು ನಿಷ್ಫಲವಾದರೆ ಎಲ್ಲರೂ ಒಗ್ಗೂಡಿ ಅತಿಕ್ರಮಣಗಾರನ ವಿರುದ್ಧ ಹೋರಾಡಬೇಕು ಮತ್ತು ಅವನು ಶಾಂತಿ ಸಂಧಾನಕ್ಕೆ ಸಿದ್ಧನಾಗುವ ತನಕ ಹೋರಾಟವನ್ನು ಮುಂದುವರಿಸಬೇಕು. ಅತಿಕ್ರಮಣಗಾರನು ಶಾಂತಿ ಸಂಧಾನ ನಡೆಸಲು ಸಿದ್ಧನಾದರೆ ಅವನ ವಿರುದ್ಧ ಸೇಡು ತೀರಿಸಬಾರದು. ಅವನ ಮೇಲೆ ಪ್ರತಿಬಂಧಗಳನ್ನು ಹೊರಿಸಬಾರದು. ಅತಿಕ್ರಮಣಗಾರನ ಮೇಲೆ ದೃಷ್ಟಿಯಿರಿಸಬೇಕು. ಆದರೆ ಅದರೊಂದಿಗೆ, ಅವನ ಜೊತೆ ಸಂಬಂಧ ಸುಧಾರಣೆಗೆ ಪ್ರಯತ್ನಿಸುತ್ತಾ ಇರಬೇಕು.

ಇಂದು ವಿಶ್ವದ ಕೆಲವು ದೇಶಗಳಲ್ಲಿರುವ ಅಶಾಂತಿಯನ್ನು ಕೊನೆಗೊಳಿಸಲು – ಕೆಲವು ಮುಸ್ಲಿಮ್ ದೇಶಗಳು ದುರದೃಷ್ಟಕರವಾಗಿ ಈ ಬಗೆಯ ಅಶಾಂತಿಯನ್ನು ಹೊಂದಿದ ಮುಖ್ಯ ದೇಶಗಳಾಗಿವೆ – ಈ ತತ್ವವನ್ನು ವೀಟೋ ಅಧಿಕಾರವನ್ನು ಹೊಂದಿದ ಪ್ರಮುಖ ದೇಶಗಳು ವಿಶ್ಲೇಷಿಸಬೇಕು ಮತ್ತು ನ್ಯಾಯೋಚಿತವಾಗಿ ದೇಶಗಳು ವರ್ತಿಸಿವೆಯೋ ಎಂಬುದನ್ನು ಪರಿಶೀಲಿಸಬೇಕು. ಸಹಾಯವು ಆವಶ್ಯಕವಾದಾಗ ಶಕ್ತಿಯುತ ದೇಶಗಳ ಕಡೆಗೆ ಸಹಾಯಕ್ಕಾಗಿ ಕೈಗಳನ್ನು ಚಾಚಲಾಗುತ್ತದೆ.

ನಾನು ಇದರ ಮೊದಲು ಹೇಳಿದಂತೆ, ಬ್ರಿಟಿಷ್ ಸರಕಾರದ ಚರಿತ್ರೆ ಯಾವಾಗಲೂ ನ್ಯಾಯವನ್ನು ಎತ್ತಿಹಿಡಿದ ವಾಸ್ತವಿಕಾಂಶವನ್ನು ಒಳಗೊಂಡಿದೆ ಮತ್ತು ನಾವು ಅದಕ್ಕೆ ಸಾಕ್ಷಿಗಳಾಗಿದ್ದೇವೆ. ಇದು ನಾನು ವಿವರಿಸಿದ ಕೆಲವು ವಿಷಯಗಳಿಗೆ ನಿಮ್ಮ ಗಮನ ಹರಿಸಲು ನನ್ನನ್ನು ಪ್ರೋತ್ಸಾಹಿಸಿದೆ.

ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಸಹಾಯಕವಾದ ಇನ್ನೊಂದು ತತ್ವವನ್ನೂ ನಮಗೆ ಕಲಿಸಲಾಗಿದೆ: ನಾವು ಅನ್ಯರ ಸಂಪತ್ತನ್ನು ಅಸೂಯೆಯಿಂದ ನೋಡಬಾರದು. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*"ಅವರ ಪೈಕಿ ನಾವು ಇಹಲೋಕ ಜೀವನದ ವೈಭವಗಳನ್ನು ನೀಡಿ ಸುಖಸೌಕರ್ಯಗಳನ್ನು ಅನುಭವಿಸುವಂತೆ ಮಾಡಿದುದನ್ನು ನೀನು ಕಣ್ಣೆತ್ತಿ ನೋಡಬೇಡ. – ಆ ಮೂಲಕ ಅವರನ್ನು ಪರೀಕ್ಷಿಸಲಿಕ್ಕೋಸ್ಕರ (ನಾವು ಅದನ್ನು ನೀಡಿದ್ದೇವೆ).* *(20:132)*

ಅನ್ಯರ ಸಂಪತ್ತಿನ ಬಗ್ಗೆ ದುರಾಶೆ ಮತ್ತು ಅದರ ಬಗ್ಗೆ ಅಸೂಯೆ ಲೋಕದಲ್ಲಿ ಅಶಾಂತಿ ವರ್ಧಿಸಲು ಕಾರಣವಾಗಿದೆ. ವ್ಯಕ್ತಿಗಳಿಗೆ ಸಂಬಂಧಿಸಿ ಹೇಳುವುದಾದರೆ, ಅನ್ಯರಿಗೆ ಸಮಾನರಾಗಿ ಜೀವಿಸುವ ಹಂಬಲವು ತೃಪ್ತಿಗೊಳ್ಳದ ದುರಾಶೆಯನ್ನು ಉಂಟುಮಾಡಿ ಸಾಮಾಜಿಕ ಶಾಂತಿಯನ್ನು ಕೆಡಿಸಿದೆ. ದೇಶೀಯ ನೆಲೆಯಲ್ಲಿ ಲಾಲಸೆಭರಿತ ಸ್ಪರ್ಧೆಯು ಜಾಗತಿಕ ಶಾಂತಿಯ ನಾಶಕ್ಕೆ ಹೇತುವಾಗಿದೆ. ಅನ್ಯರ ಸಂಪತ್ತಿನ ಬಗ್ಗೆ ಆಶೆಯು ಅಸೂಯೆಯನ್ನೂ ದುರಾಶೆಯನ್ನೂ ವರ್ಧಿಸುವುದೆಂದೂ ಅದು ನಷ್ಟಕ್ಕೆ ಮೂಲ ಕಾರಣವಾಗುವುದೆಂದೂ ಚರಿತ್ರೆಯು ಸಾಬೀತು

ಗೊಳಿಸುತ್ತದೆ. ಪ್ರತಿಯೊಬ್ಬ ವಿವೇಕಶಾಲಿ ಇದನ್ನು ಮನವರಿಕೆ ಮಾಡಿಕೊಳ್ಳಬಲ್ಲನು.

ಇದೇ ಕಾರಣದಿಂದ ಸರ್ವಶಕ್ತನಾದ ದೇವನು ಹೇಳಿರುವನೇನೆಂದರೆ, ನೀವು ನಿಮ್ಮ ಸ್ವಂತ ಸಂಪತ್ತನ್ನು ಸಂರಕ್ಷಿಸಬೇಕು ಮತ್ತು ಅದರಿಂದ ಲಾಭ ಪಡೆಯಲು ಪ್ರಯತ್ನಿಸಬೇಕು.

ಅನ್ಯದೇಶದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮಾಡುವ ಪ್ರಯತ್ನವು ಆ ಭೂಮಿಯ ನೈಸರ್ಗಿಕ ಸಂಪತ್ತಿನಿಂದ ಲಾಭಪಡೆದುಕೊಳ್ಳಲಿಕ್ಕಾಗಿದೆ. ವಿವಿಧ ದೇಶಗಳು ಗುಂಪುಗೂಡುವುದು ಮತ್ತು ಶಾಕ್ತಿಕ ಬ್ಲೋಕ್‌ಗಳನ್ನು (ಶಕ್ತರಾಷ್ಟ್ರಗಳ ಒಕ್ಕೂಟವನ್ನು) ಸ್ಥಾಪಿಸುವುದು ಬೇರೆ ಕೆಲವು ದೇಶಗಳ ನೈಸರ್ಗಿಕ ಸಂಪತ್ತನ್ನು ಸಂಪಾದಿಸಲಿಕ್ಕಾಗಿದೆ. ಕೆಲವು ಶಕ್ತಿಶಾಲಿ ದೇಶಗಳಿಗೆ ಸಲಹೆಗಾರರಾಗಿ ಕೆಲಸ ಮಾಡಿದ್ದ ಅನೇಕ ಲೇಖಕರು ಅನ್ಯ ದೇಶಗಳ ಸಂಪತ್ತಿನ ನಿಯಂತ್ರಣ ಪಡೆಯಲು ಶಕ್ತಿಶಾಲಿ ದೇಶಗಳು ಮಾಡುವ ಪ್ರಯತ್ನಗಳ ಬಗ್ಗೆ ಸವಿಸ್ತಾರವಾಗಿ ವಿವರಿಸುವ ಗ್ರಂಥಗಳನ್ನು ಬರೆದಿದ್ದಾರೆ. ಈ ಲೇಖಕರು ಎಷ್ಟರಮಟ್ಟಿಗೆ ಸತ್ಯಾಂಶಗಳನ್ನು ಪ್ರಕಟಿಸಿರುವವರು ಎಂಬುದರ ಬಗ್ಗೆ ಲೇಖಕರಿಗೆ ಮಾತ್ರ ಗೊತ್ತು. ದೇವನು ಚೆನ್ನಾಗಿ ಈ ಬಗ್ಗೆ ತಿಳಿದಿರುವವನು. ಆದರೆ ಅವರ ಈ ಪುಸ್ತಕಗಳನ್ನು ಓದುವಾಗ ಬಡದೇಶಗಳ ನಿಷ್ಠರಾದ ಪ್ರಜೆಗಳ ಹೃದಯದಲ್ಲಿ ತೀವ್ರಸಂತಾಪ ಉಂಟಾಗುತ್ತದೆ. ಭಯೋತ್ಪಾದನೆಯ ವರ್ಧಿಸುವಿಕೆಗೆ ಮತ್ತು ಸಾಮೂಹಿಕ ವಿನಾಶದ ಆಯುಧಗಳನ್ನು ಪಡೆಯಲು ಸ್ಪರ್ಧೆಗೆ ಈ ಪರಿಸ್ಥಿತಿಯು ಪ್ರಧಾನ ಕಾರಣವಾಗಿದೆ.

ಇಂದು ಲೋಕವು ತನ್ನನ್ನು ಹಿಂದಿನ ಕಾಲಕ್ಕಿಂತ ಹೆಚ್ಚು ಬುದ್ಧಿಶಾಲಿ, ಪ್ರಜ್ಞೆಯುಳ್ಳ ಮತ್ತು ವಿದ್ಯಾಭ್ಯಾಸ ಗಳಿಸಿದುದಾಗಿ ಭಾವಿಸಿಕೊಳ್ಳುತ್ತದೆ. ಬಡದೇಶಗಳಲ್ಲಿ ಸಹ ವಿದ್ಯಾಭ್ಯಾಸದ ವಿವಿಧ ಕ್ಷೇತ್ರಗಳಲ್ಲಿ ಪ್ರವೀಣರಾಗಿರುವ ಬುದ್ಧಿಶಾಲಿಗಳಿದ್ದಾರೆ. ಅತ್ಯಂತ ಹೆಚ್ಚು ಬುದ್ಧಿಶಾಲಿಗಳು ವಿಶ್ವದ ವಿವಿಧ ಸಂಶೋಧನಾಲಯಗಳಲ್ಲಿ ಒಗ್ಗೂಡಿ ಕೆಲಸ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾವು ಹೀಗೆ ಊಹಿಸಬಹುದು: ಇಂತಹ ಬುದ್ಧಿಶಾಲಿ ಜನರು ಒಟ್ಟಿಗೆ ಸೇರಿ ತಪ್ಪು ರೀತಿಯಲ್ಲಿ ಚಿಂತಿಸುವುದನ್ನು ಕೊನೆಗೊಳಿಸಿ ಮತ್ತು ಹಿಂದೆ ನಡೆದ ತಪ್ಪುಗಳ ಮೂಲಕ ಉಂಟಾದ ಹಗೆತನ ಮತ್ತು ಅದರಿಂದ ಸಂಭವಿಸಿದ ಭಯಾನಕ ಯುದ್ಧಗಳನ್ನು ಕೊನೆಗೊಳಿಸಲು ಯತ್ನಿಸುವರು. ದೇವನು ನೀಡಿದ ಬುದ್ಧಿಶಕ್ತಿ ಮತ್ತು ವೈಜ್ಞಾನಿಕ ಪ್ರಗತಿಯನ್ನು ಮಾನವರ ಏಳಿಗೆಗಾಗಿ ವಿನಿಯೋಗಿಸಬೇಕು ಮತ್ತು ಒಬ್ಬರು ಇನ್ನೊಬ್ಬರು ಹೊಂದಿದ ಸಂಪನ್ಮೂಲಗಳಿಂದ ಅನುಮತಿಸಲಾದ ಉಪಕ್ರಮಗಳ ಮೂಲಕ ಲಾಭಗಳಿಸಲು ಪ್ರಯತ್ನಿಸಬೇಕು.

ಪ್ರತಿಯೊಂದು ದೇಶಕ್ಕೆ ದೇವನು ನೈಸರ್ಗಿಕ ಸಂಪತ್ತನ್ನು ದಯಪಾಲಿಸಿರುವನು. ಪ್ರತಿಯೊಂದು ದೇಶ ತನಗೆ ಲಭಿಸಿರುವ ನೈಸರ್ಗಿಕ ಸಂಪತ್ತನ್ನು ತನ್ನ ಉಪಯೋಗಕ್ಕೆ ಬಳಸಿ ಲೋಕವನ್ನು ಶಾಂತಿಧಾಮವನ್ನಾಗಿ ಮಾಡಿಕೊಳ್ಳಬಹುದು. ದೇವನು ಅನೇಕ ದೇಶಗಳಿಗೆ ವಿವಿಧ ಬೆಳೆಗಳನ್ನು ಬೆಳೆಸಲು ಸಹಾಯಕವಾದ ಅತ್ಯುತ್ತಮ ಹವಾಗುಣಗಳನ್ನೂ ಉತ್ತಮ ಪರಿಸರವನ್ನೂ ದಯಪಾಲಿಸಿದ್ದಾನೆ. ಆಧುನಿಕ ತಂತ್ರಜ್ಞಾನವನ್ನು ಕೃಷಿಗಾಗಿ ಸರಿಯಾದ ಯೋಜನೆಗಳನ್ನು ರೂಪಿಸಿ ಬಳಸುವುದಾದರೆ ದೇಶಗಳ ಆರ್ಥಿಕ ಸ್ಥಿತಿಯು ಬಲಿಷ್ಠಗೊಂಡು ಲೋಕದಿಂದ ಹಸಿವು ಅಳಿಸಿಹೋಗಬಹುದಾಗಿದೆ.

ವಿವಿಧ ಅದಿರುಗಳ ಸಂಪತ್ತನ್ನು ಹೊಂದಿದ ದೇಶಗಳು ತಮ್ಮ ಉತ್ಪಾದನೆಗಳನ್ನು ನ್ಯಾಯಬೆಲೆಗೆ ಅನಿಯಂತ್ರಿತವಾಗಿ ಮಾರಾಟಮಾಡಲು ಅನುಮತಿಸಬೇಕು. ಒಂದು ದೇಶವು ಇನ್ನೊಂದರ ಸಂಪನ್ಮೂಲಗಳನ್ನು ಉಪಯೋಗಿಸಿ ಲಾಭ ಪಡೆಯಲು ಪ್ರಯತ್ನಿಸಬೇಕು. ಇದು ಸರಿಯಾದ ಮಾರ್ಗವಾಗಿದೆ. ಇದನ್ನು ಸರ್ವಶಕ್ತನಾದ ದೇವನು ಮೆಚ್ಚುತ್ತಾನೆ.

ಸರ್ವಶಕ್ತನಾದ ದೇವನು ತನ್ನ ಸಂದೇಶವಾಹಕರನ್ನು ಜನರ ಬಳಿಗೆ ಕಳುಹಿಸುತ್ತಾನೆ. ಜನರು ದೇವನ ಸಾಮೀಪ್ಯಗಳಿಸುವ ಮಾರ್ಗವನ್ನು ಅವರು ಹೇಳಿಕೊಡುತ್ತಾರೆ. ಅದೇ ಸಂದರ್ಭದಲ್ಲಿ ಧಾರ್ಮಿಕ ವಿಷಯಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ ಎಂದು ದೇವನು ಹೇಳುತ್ತಾನೆ.

ನಮ್ಮ ನಂಬಿಕೆ ಪ್ರಕಾರ ಶಿಕ್ಷೆ ಮತ್ತು ರಕ್ಷೆಯು ಮರಣಾನಂತರ ಸಹ ದೊರಕಲಿದೆ. ಆದರೆ ದೇವನು ರೂಪಿಸಿದ ವ್ಯವಸ್ಥೆ ಪ್ರಕಾರ ಇಹಲೋಕದಲ್ಲಿ ತನ್ನ ಸೃಷ್ಟಿಗಳಿಗೆ ದೌರ್ಜನ್ಯ ಮಾಡಿದರೆ ಮತ್ತು ನ್ಯಾಯವನ್ನೂ ನೀತಿಯನ್ನೂ ಕಡೆಗಣಿಸಿದರೆ ಅದರ ಪರಿಣಾಮವು ದೇವನು ರೂಪಿಸಿದ ನೈಸರ್ಗಿಕ ನಿಯಮಗಳ ಪ್ರಕಾರ ಇಹಲೋಕದಲ್ಲಿ ಸಹ ಕಾಣಿಸುವುದು. ಅಂತಹ ಅನ್ಯಾಯಗಳಿಗೆ ತೀವ್ರವಾದ ಶಿಕ್ಷೆ ದೊರೆತುದು ಕಂಡುಬಂದಿದೆ.

ಲೋಕವನ್ನು ಜಯಿಸಲು ಇರುವ ಸರಿಯಾದ ಮಾರ್ಗವೇನೆಂದರೆ, ಬಡದೇಶಗಳಿಗೆ ಅವರಿಗೆ ಅರ್ಹವಾದ ಸ್ಥಾನವನ್ನು ನೀಡಬೇಕು.

ಇಂದಿನ ಕಾಲದಲ್ಲಿ ಚರ್ಚೆಯ ಮುಖ್ಯ ವಿಷಯ ಆರ್ಥಿಕ ಮುಗ್ಗಟ್ಟಾಗಿದೆ. ಇದನ್ನು "ಸಾಲನೀಡುವಿಕೆಯ ವಿನಾಶ"ವೆಂದು ಕರೆಯಲಾಗಿದೆ. ವಿಚಿತ್ರವೆಂದು ತೋರಬಹುದಾದರೂ ಇದು ಒಂದು ವಾಸ್ತವಿಕಾಂಶದ ಬಗ್ಗೆ ಸಾಕ್ಷ್ಯನೀಡುತ್ತದೆ.

ಪವಿತ್ರ ಖುರ್‌ಆನ್ ನಮಗೆ ಮಾರ್ಗದರ್ಶನ ನೀಡುವುದೇನೆಂದರೆ, ನೀವು ಬಡ್ಡಿ ವ್ಯವಹಾರವನ್ನು ಮಾಡಬೇಡಿರಿ. ಅದು ಮನೆಯ, ದೇಶದ ಮತ್ತು ಜಾಗತಿಕ ಶಾಂತಿಗೆ ಅಪಾಯಕರವಾದ ಶಾಪವಾಗಿದೆ.

ನಮಗೆ ಹೀಗೆ ಎಚ್ಚರಿಕೆ ನೀಡಲಾಗಿದೆ: ಯಾರು ಬಡ್ಡಿ ವ್ಯವಹಾರ ಮಾಡುತ್ತಾನೋ ಅವನು ಶೈತಾನನಿಂದ ಭ್ರಾಂತನನ್ನಾಗಿ ಮಾಡಲ್ಪಟ್ಟವನಾಗಿದ್ದಾನೆ. ಮುಸ್ಲಿಮರಾದ ನಮಗೆ ಎಚ್ಚರಿಕೆ ನೀಡಲಾಗಿದೆ: ಇಂತಹ ಸ್ಥಿತಿಯು ತಲೆದೋರದಿರಲು ಬಡ್ಡಿ ವ್ಯವಹಾರವನ್ನು ನಿಲ್ಲಿಸಿರಿ. ನೀವು ಬಡ್ಡಿಯ ಮೂಲಕ ಪಡೆಯುವ ಹಣ ನಿಮ್ಮ ಸಂಪತ್ತನ್ನು ವರ್ಧಿಸಲಾರದು. ಮೇಲಿಂದ ಮೇಲೆ ನೋಡಿದರೆ ವರ್ಧಿಸಿದಂತೆ ತೋರಬಹುದು.

ಅನಿವಾರ್ಯವಾಗಿ ಬಡ್ಡಿ ವ್ಯವಹಾರದ ಸತ್ಯವಾದ ಪರಿಣಾಮಗಳು ಗೋಚರಿಸದೆ ಇರಲಾರವು. ನಾವು ಬಡ್ಡಿಯ ವ್ಯಾಪಾರ ಮಾಡಬಾರದೆಂದೂ ಹಾಗೆ ಮಾಡಿದರೆ ಅದು ದೇವನ ವಿರುದ್ಧ ನಡೆಸುವ ಹೋರಾಟದ ಹಾಗೆ ಎಂದೂ ಎಚ್ಚರಿಸಲಾಗಿದೆ.

ಇದು ಇಂದಿನ ಆರ್ಥಿಕ ಮುಗ್ಗಟ್ಟಿನಿಂದ ಸ್ಪಷ್ಟವಾಗುತ್ತದೆ. ಕೆಲವರು ಭೂಸ್ವತ್ತನ್ನು ಖರೀದಿಸಲು ಬಡ್ಡಿಗೆ ಹಣಪಡೆದರು. ಆದರೆ ಆ ಸ್ವತ್ತಿನ ಮಾಲಿಕರಾಗುವ ಮೊದಲು ಅವರು ಸಾಲದ ಹೊರೆಯಿಂದ ಮುಕ್ತರಾಗದೆ ಮೃತರಾದರು.

ಈಗ ಕೆಲವು ಸರಕಾರಗಳು ಸಾಲದ ಹೊರೆಯಿಂದ ಬಳಲಿ ಹುಚ್ಚು ಹಿಡಿದಂತೆ ಆಗಿವೆ. ದೊಡ್ಡ ದೊಡ್ಡ ವ್ಯಾಪಾರ ಸಂಸ್ಥೆಗಳು ದಿವಾಳಿ ಆಗಿವೆ. ಕೆಲವು ಬ್ಯಾಂಕ್‌ಗಳು ಮತ್ತು ಆರ್ಥಿಕ ವ್ಯವಹಾರ ನಡೆಸುವ ಸಂಸ್ಥೆಗಳು ಮುಚ್ಚಲ್ಪಟ್ಟಿವೆ. ಸರಕಾರದ ಆರ್ಥಿಕ ನೆರವಿನ ಮೂಲಕ ಕೆಲವು ರಕ್ಷಿಸಲ್ಪಟ್ಟಿವೆ. ಈ ಪರಿಸ್ಥಿತಿ ಎಲ್ಲಾ ದೇಶಗಳಲ್ಲೂ ಇದೆ. ಬಡ ಅಥವಾ ಶ್ರೀಮಂತ ದೇಶ ಎಂಬ ವ್ಯತ್ಯಾಸವಿಲ್ಲದೆ ಹೀಗೆ ಸಂಭವಿಸಿದೆ. ಈ ವಿಷಮ ಪರಿಸ್ಥಿತಿ ಬಗ್ಗೆ ನಿಮಗೆ ನನಗಿಂತ ಹೆಚ್ಚು ತಿಳಿದಿದೆ. ಬ್ಯಾಂಕ್‌ಗಳಲ್ಲಿರಿಸಲಾದ ಠೇವಣಿ ನಷ್ಟವಾಗಿದೆ. ಠೇವಣಿದಾರರನ್ನು ಹೇಗೆ ರಕ್ಷಿಸುವುದು ಎಂಬುದರ ಬಗ್ಗೆ ಸರಕಾರಗಳು ನಿರ್ಧರಿಸಬೇಕಾಗಿದೆ. ಆದರೆ ಈಗ ಕುಟುಂಬಗಳ, ವ್ಯಾಪಾರಿಗಳ, ಸರಕಾರದ ಮುಖ್ಯಸ್ಥರ ಮಾನಸಿಕ ಶಾಂತಿಯು ಹೆಚ್ಚಿನ ದೇಶಗಳಲ್ಲಿ ನಾಶವಾಗಿದೆ.

ಈ ಪರಿಸ್ಥಿತಿ ನಮಗೆ ಮುಂಚಿತವಾಗಿ ಎಚ್ಚರಿಕೆ ನೀಡಲಾದ

# ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ವಿವಿಧ ಗಣ್ಯರ ಭಾಷಣಗಳು

**ದಿನಾಂಕ : 22-10-2008**

### ಜಸ್ಟೀನ್ ಗ್ರೀನಿಂಗ್ (ಪುಟ್ನಿ ಕ್ಷೇತ್ರದ ಪಾರ್ಲಿಮೆಂಟ್ ಸದಸ್ಯೆ ಮತ್ತು ಈ ಸಮಾರಂಭದ ಆತಿಥೇಯೆ)



ಎಲ್ಲರಿಗೂ ಗುಡ್ ಆಫ್ಟರ್‌ನೂನ್. ನಿಮ್ಮೆಲ್ಲರನ್ನೂ ಪಾರ್ಲಿಮೆಂಟ್‌ಗೆ ಸ್ವಾಗತಿಸಲು ನಾನು ಬಯಸುತ್ತೇನೆ. ನಮ್ಮ ಆದರಣೀಯ ಅತಿಥಿ ಇಲ್ಲಿಗೆ ಆಗಮಿಸಿರುವುದು ಮತ್ತು ಅಹ್ಮದಿಯಾ ಸಂಘಟನೆಯ ಸದಸ್ಯರು ಆಗಮಿಸಿರುವುದು ಈ ದಿನವನ್ನು ಬಹಳ ಮಹತ್ವಪೂರ್ಣವನ್ನಾಗಿ ಮಾಡಿದೆ. ಅಹ್ಮದಿಯರು ನನ್ನ ಪುಟ್ನಿ ಕ್ಷೇತ್ರದಿಂದ ಮಾತ್ರವಲ್ಲ, ಲಂಡನಿನ ಎಲ್ಲಾ ಸ್ಥಳಗಳಿಂದಲೂ ಯುನೈಟೆಡ್ ಕಿಂಗ್‌ಡಮ್‌ಗೆ ಸೇರಿದ ಎಲ್ಲಾ ಪ್ರದೇಶಗಳಿಂದಲೂ ಆಗಮಿಸಿರುವರು. ನಿಮ್ಮನ್ನೆಲ್ಲಾ ಸ್ವಾಗತಿಸಲು ನಮಗೆ ದೊರೆತ ಅವಕಾಶಕ್ಕಾಗಿ ಸಂತೋಷಪಡುತ್ತೇವೆ. ಇಂದಿನ ಸಮಾರಂಭವು ಜಗತ್ತಿನಾದ್ಯಂತ ಅಹ್ಮದಿಯಾ ಖಿಲಾಫತ್ ಶತವಾರ್ಷಿಕ ಜೂಬಿಲಿ ಸಮಾರಂಭಗಳ ಮತ್ತು ವಿಶಿಷ್ಟವಾಗಿ ಬ್ರಿಟನ್‌ನಲ್ಲಿ ನಡೆಸಲಾಗುವ ಸಮಾರಂಭಗಳ ಒಂದು ಭಾಗವಾಗಿದೆ. ಲಂಡನಿನ ಪ್ರಥಮ ಮಸ್‌ಜಿದ್ ಸೌತ್ ಫೀಲ್ಡ್ಸ್‌ನಲ್ಲಿರುವ ಪುಟ್ನಿಯ ಗ್ರೆಸ್ಸನ್ ಹಾಲ್ ರೋಡಿನಲ್ಲಿ ಸ್ಥಾಪಿಸಲ್ಪಟ್ಟಿದ್ದು ಅದು ನನ್ನ ಚುನಾವಣಾ ಕ್ಷೇತ್ರದ ಭಾಗವಾಗಿದೆ. ಅದು ಅದರ ಸ್ಥಾಪನೆಯ ನಂತರ ಮಹತ್ವ ಪೂರ್ಣವೂ ಗುಣಾತ್ಮಕವೂ ಆದ ಪ್ರಭಾವವನ್ನು ಈ ಕ್ಷೇತ್ರದಲ್ಲಿ ಬೀರಿದೆ. "ಎಲ್ಲರೊಂದಿಗೆ ಸ್ನೇಹ, ಯಾರೊಂದಿಗೂ ದ್ವೇಷವಿಲ್ಲ" ಎಂಬ ಅದರ ಘೋಷಣೆಯನ್ನು ಅನುಸರಿಸಿ ನಾವೆಲ್ಲರೂ ಜೀವಿಸಬಹುದಾಗಿದೆ. ಈ ಮಸ್‌ಜಿದ್ ಇರುವ ಪ್ರದೇಶದ ಪಾರ್ಲಿಮೆಂಟ್ ಸದಸ್ಯೆಯಾದ ನನಗೆ ಈ ಸಮಾರಂಭಕ್ಕೆ ಆತಿಥೇಯಳಾಗುವ ಭಾಗ್ಯ ದೊರೆತಿದೆ.

ನಿಮ್ಮೆಲ್ಲರಿಗೆ, ವಿಶಿಷ್ಟವಾಗಿ ಪಾರ್ಲಿಮೆಂಟ್ ಸದಸ್ಯರಿಗೆ, ಅವರು ಇಲ್ಲಿಗೆ ಆಗಮಿಸಿದುದಕ್ಕಾಗಿ ಕೃತಜ್ಞತೆ ಅರ್ಪಿಸುತ್ತೇನೆ. ಬುಧವಾರಗಳು ಪಾರ್ಲಿಮೆಂಟ್‌ನಲ್ಲಿ ಹೆಚ್ಚು ಕೆಲಸಗಳು ಇರುವ ದಿನಗಳಾಗಿವೆ. ಆದರೆ ಅಹ್ಮದಿಯಾ ಜಮಾಅತ್ ಬಗ್ಗೆ ನಮಗಿರುವ ಗೌರವಾದರಗಳ ಕಾರಣದಿಂದಲೂ ಅವರು ನಮ್ಮ ದೇಶಕ್ಕೆ ನೀಡುತ್ತಿರುವ ಕೊಡುಗೆಗಳ ಕಾರಣದಿಂದಲೂ ಅನೇಕ ಪಾರ್ಲಿಮೆಂಟ್ ಸದಸ್ಯರು, ಲಾರ್ಡ್ಸ್ ಸಭೆಯ ಸದಸ್ಯರು ತಮ್ಮ ಗೌರವ ಸೂಚಿಸಲು ಇಲ್ಲಿಗೆ ಆಗಮಿಸಿದ್ದಾರೆ. ವಾಸ್ತವಿಕವಾಗಿ ಈ ದಿನ ನಮಗೆ ಇನ್ನಷ್ಟು ಕಾರ್ಯಕ್ರಮಗಳಲ್ಲಿ ಮುಂದೆ ಭಾಗವಹಿಸಲಿಕ್ಕಿದೆ. ಸ್ವಾಗತ ಸಮಾರಂಭದ ಬಳಿಕ ಅನೇಕ ಸಭೆಗಳು ನಡೆಯಲಿಕ್ಕಿವೆ. ನಾನು ಆದರಣೀಯ ಅತಿಥಿಯವರಿಗೆ ಪಾರ್ಲಿಮೆಂಟ್ ಸದನದ ವಿವಿಧ ಭಾಗಗಳ ಪರಿಚಯ ಮಾಡಿ ಕೊಡಲಿದ್ದೇನೆ. ನಾವು ಬಹಳ ಹೆಚ್ಚು ಸಮಯವನ್ನು ಎಲ್ಲಿ ಕಳೆಯುತ್ತಿದ್ದೇವೆ ಎಂಬುದನ್ನು ಅವರು ನೋಡಲಿರುವರು.

ವಿದೇಶಾಂಗ ಮಂತ್ರಾಲಯದ ಮಂತ್ರಿ ಆಗಿರುವ ಗಿಲ್ಲಿಯನ್ ಮೆರ್ರೋನ್ ಇಲ್ಲಿಗೆ ಆಗಮಿಸಿರುವರು. ಅವರು ನಿಮ್ಮನ್ನು ಸಂಬೋಧಿಸಿ ಮಾತನಾಡಲಿರುವರು. ವಿದೇಶಾಂಗ ಮಂತ್ರಾಲಯ ಅಹ್ಮದಿಯಾ ಜಮಾಅತಿಗೋಸ್ಕರ ಮಾಡುವ ಕೆಲಸಕ್ಕಾಗಿ ನಾವು ಬಹಳ ಕೃತಜ್ಞರಾಗಿದ್ದೇವೆ. ಅಹ್ಮದಿಯಾ ಜಮಾಅತಿನ ವಿರುದ್ಧ ಜಗತ್ತಿನಾದ್ಯಂತ ನಡೆಸಲಾಗುವ ಹಿಂಸಾಚಾರಗಳನ್ನು ಅವರು ಪ್ರತಿಭಟಿಸುತ್ತಿದ್ದಾರೆ. ವಿದೇಶಾಂಗ ಮಂತ್ರಾಲಯ ಮಾನವರ ಮೂಲಭೂತ ಹಕ್ಕುಗಳ ಮತ್ತು ಸ್ವಾತಂತ್ರ್ಯ ರಕ್ಷಣೆಗೋಸ್ಕರ ಮಾಡುವ ಮಹತ್ತರ ಕೆಲಸಗಳ ಕಾರಣದಿಂದ ನಾವು ಹೃತ್ಪೂರ್ವಕವಾಗಿ ಸಂತೋಷಗೊಂಡಿದ್ದೇವೆ. ವಿದೇಶಾಂಗ ಮಂತ್ರಾಲಯದ ಮಂತ್ರಿ ಗಿಲ್ಲಿಯನ್ ಮೆರ್ರೋನ್ ನಮ್ಮೊಂದಿಗೆ ಬಂದು ಸೇರಿದ್ದಾರೆ. ನಾನು ಅವರನ್ನು ಮಾತನಾಡಲು ಆಮಂತ್ರಿಸುತ್ತೇನೆ. ನಿಮಗೆ ಕೃತಜ್ಞತೆಗಳು.

ಒಂದು ಪರಿಣಾಮದ ಕಡೆಗೆ ಲೋಕವು ಸಾಗುತ್ತಿದೆ ಎಂಬುದನ್ನು ಯೋಚಿಸಲು ನಮ್ಮನ್ನು ಆಗ್ರಹಪಡಿಸುತ್ತಿದೆ. ಈಗಿನ ಪರಿಸ್ಥಿತಿಯ ಮುಂದಿನ ಪರಿಣಾಮಗಳೇನೆಂದು ದೇವನಿಗೆ ಮಾತ್ರ ಚೆನ್ನಾಗಿ ತಿಳಿದಿದೆ.

ಸರ್ವಶಕ್ತನಾದ ದೇವನು ಹೇಳಿರುವನು: ಭ್ರಷ್ಟಾಚಾರರಹಿತ ವ್ಯಾಪಾರವು ನಡೆಯುತ್ತಿದ್ದು ನೈಸರ್ಗಿಕ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸಿದರೆ ಮಾತ್ರ ಲೋಕದಲ್ಲಿ ಶಾಂತಿಯು ಸ್ಥಾಪಿತವಾಗುವುದು. ಅಂತಹ ಶಾಂತಿಯ ಕಡೆಗೆ ಬನ್ನಿರಿ.

ನಮ್ಮ ಧರ್ಮದ ಉಪದೇಶಗಳ ಈ ಸಂಕ್ಷಿಪ್ತ ವಿವರಣೆಯನ್ನು ನಿಮಗೊಂದು ವಿಷಯವನ್ನು ನೆನಪಿಸಿ ಮುಕ್ತಾಯಗೊಳಿಸುತ್ತೇನೆ.

ದೇವನ ಕಡೆಗೆ ತಿರುಗುವ ಮೂಲಕ ಮಾತ್ರ ಸತ್ಯವಾಗಿಯೂ ಲೋಕದಲ್ಲಿ ಶಾಂತಿಯು ಸ್ಥಾಪಿತವಾಗುವುದು. ಲೋಕವು ಈ ಸತ್ಯಾಂಶವನ್ನು ಮನವರಿಕೆ ಮಾಡಿಕೊಳ್ಳುವ ಭಾಗ್ಯವನ್ನು ದೇವನು ದಯಪಾಲಿಸಲಿ. ಆಗ ಮಾತ್ರ ಲೋಕದ ಜನರು ಅನ್ಯರ ಹಕ್ಕುಗಳನ್ನು ಸಂದಾಯ ಮಾಡುವರು.

ನೀವು ಇಲ್ಲಿಗೆ ಬಂದು ನನ್ನ ಭಾಷಣವನ್ನು ಆಲಿಸಿದುದಕ್ಕಾಗಿ ನಾನು ನಿಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ನಿಮಗೆಲ್ಲಾ ಬಹಳ ಕೃತಜ್ಞತೆಗಳು.

**(The Review of Religions - December 2008,**
ಭಾಷಾಂತರ : ಎಂ. ಉಬೈದುಲ್ಲಾ)

## ರೈಟ್ ಆನರೇಬಲ್ ಗಿಲ್ಲಿಯನ್ ಮೆರ್ರೋನ್
## (ಲಿಂಕೋಲನ್‌ನಿಂದ ಆಯ್ಕೆಯಾದ ಪಾರ್ಲಿಮೆಂಟ್ ಸದಸ್ಯೆ; ಫಾರಿನ್ ಮತ್ತು ಕಾಮನ್‌ವೆಲ್ತ್ ಆಫೀಸ್‌ನಲ್ಲಿ ಅಂಡರ್ ಸೆಕ್ರೆಟರಿ)



ಆದರಣೀಯ ಅತಿಥಿಯ ವರನ್ನು ಖಿಲಾಫತ್ ಶತಮಾನೋತ್ಸವದ ಈ ಸಂದರ್ಭದಲ್ಲಿ ಪಾರ್ಲಿಮೆಂಟ್ ಸದಸ್ಯರೊಂದಿಗೆ ಮತ್ತು ಯುನೈಟೆಡ್ ಕಿಂಗ್‌ಡಮ್‌ನ ಅಹ್ಮದಿ ಯರೊಂದಿಗೆ ಭೇಟಿಯಾಗುವ ಈ ಸಂದರ್ಭ ನಮಗೆ ಅತ್ಯಂತ ಗೌರವ ಪೂರ್ಣವಾಗಿದೆ. ನಿಮ್ಮ ಜಮಾಅತಿನ ಅನೇಕ ಸದಸ್ಯರು ಇಲ್ಲಿ ಜಮಾಯಿಸಿರುವ ಪಾರ್ಲಿಮೆಂಟ್ ಸದಸ್ಯರ ಚುನಾವಣಾ ಕ್ಷೇತ್ರದಲ್ಲಿ ಅತ್ಯಂತ ಮಹತ್ವಪೂರ್ಣವೂ ಮೌಲ್ಯಾಧಾರಿತವೂ ಆದ ಕೆಲಸಗಳನ್ನು ನಿರ್ವಹಿಸುವವರಾಗಿದ್ದಾರೆಂದು ನನಗೆ ತಿಳಿದಿದೆ.

ಇಲ್ಲಿ ಇಷ್ಟೆಲ್ಲಾ ಪಾರ್ಲಿಮೆಂಟ್ ಸದಸ್ಯರು ಜಮಾಯಿಸಿರುವುದು ನಿಮ್ಮ ಜಮಾಅತ್ ನಮಗೆ ಮುಖ್ಯವಾದುದರ ಕಾರಣವೆಂದು ಜಸ್ಟಿನ್ ಹೇಳಿದ ಮಾತಿಗೆ ನಾನು ಸಹಮತ ಸೂಚಿಸುತ್ತೇನೆ.

ಅಹ್ಮದಿಯಾ ಸಂಘಟನೆ ಮಾಡುವ ಕೆಲಸ ಎಷ್ಟು ಮಹತ್ವ ಪೂರ್ಣವಾದುದೆಂದು ನಾನು ಪ್ರಾರಂಭದಲ್ಲಿಯೇ ಹೇಳಲು ಬಯಸುತ್ತೇನೆ. ಅದು ಧಾರ್ಮಿಕ ವಿಷಯಗಳನ್ನು ಅನ್ಯರಿಗೆ ಮನವರಿಕೆ ಮಾಡಿಕೊಡುತ್ತದೆಯಲ್ಲದೆ ಅವರ ಸಮಾಜಗಳಲ್ಲಿ ಕಡೆಗಣಿಸಲ್ಪಟ್ಟವರಿಗೆ ಅದು ಧ್ವನಿಯನ್ನು ನೀಡುತ್ತದೆ.

ಲೋಕದ ವಿವಿಧ ಕಡೆಗಳಲ್ಲಿ ಮತ್ತು ವಿಶಿಷ್ಟವಾಗಿ ಪಾಕಿಸ್ತಾನ ಮತ್ತು ಇಂಡೋನೇಶಿಯಾ ದೇಶಗಳಲ್ಲಿ ಅಹ್ಮದಿಯಾ ಜಮಾಅತ್ ಕಷ್ಟಕ್ಕೊಳಪಟ್ಟುದರ ಕುರಿತು ವರದಿಗಳು ನನ್ನನ್ನು ಮತ್ತು ನಿಮ್ಮಲ್ಲಿ ಅನೇಕರನ್ನು ಆತಂಕಕ್ಕೀಡಾಗಿಸಿದೆ. ನಾನು ನಿಮಗೆ ಭರವಸೆ ನೀಡುತ್ತೇನೆ. ನಮ್ಮ ಸರಕಾರವು ಆ ದೇಶಗಳ ಸರಕಾರಗಳೊಂದಿಗೆ ಈ ವಿಷಯಗಳ ಕಡೆಗೆ ಗಮನಕೊಡಲು ಹೇಳಿದೆ. ನಾವು ಅಲ್ಪಸಂಖ್ಯಾತರಿಗೆ, ಅವರು ಎಲ್ಲಿದ್ದರೂ ಮಾನವೀಯ ಹಕ್ಕುಗಳನ್ನು ಉತ್ತಮ ರೀತಿಯಲ್ಲಿ ಕೊಡುವ ಬಗ್ಗೆ ಆಗ್ರಹಪಡಿಸುವುದರಲ್ಲಿ ಹಿಂಜರಿಯಲಾರೆವು.

ದಿ ಫಾರಿನ್ ಎಂಡ್ ಕೋಮನ್‌ವೆಲ್ತ್ ಆಫೀಸ್, ಡಿಪಾರ್ಟ್‌ಮೆಂಟ್ ಆಫ್ ಇಂಟರ್‌ನೇಶನಲ್ ಡೆವಲಪ್‌ಮೆಂಟ್, ದಿ ಮಿನಿಸ್ಟ್ರಿ ಆಫ್ ಡಿಫೆನ್ಸ್ (ವಿದೇಶೀಯ ಮತ್ತು ಕಾಮನ್‌ವೆಲ್ತ್‌ಗೆ ಸಂಬಂಧಿಸಿದ ಮಂತ್ರಾಲಯ, ಅಂತಾರಾಷ್ಟ್ರೀಯ ಅಭಿವೃದ್ಧಿ ವಿಭಾಗ, ರಕ್ಷಣಾ ಮಂತ್ರಾಲಯ) ಇವುಗಳೆಲ್ಲ ಒಗ್ಗೂಡಿ ಅಲ್ಪಸಂಖ್ಯಾತರು ಲೋಕದಲ್ಲಿ ಎಲ್ಲಿದ್ದರೂ ಅವರ ಸ್ಥಿತಿ ಸುಧಾರಣೆಗೆ ಪ್ರಯತ್ನಿಸುತ್ತಾ ಇವೆ. ಅನ್ಯರ ಬಗ್ಗೆ ಸಹಿಷ್ಣುತಾ ಮನೋಭಾವ ವರ್ಧಿಸುವಿಕೆ, ಮಾನವೀಯ ಹಕ್ಕುಗಳ ಪಾಲನೆ ಮತ್ತು ಅವುಗಳಿಗೆ ಗೌರವ ನೀಡುವುದು ನಮ್ಮ ಕಾರ್ಯಕ್ಷೇತ್ರದ ಕೇಂದ್ರ ಭಾಗವಾಗಿದೆ. ನಾವು ಈ ಕೆಲಸವನ್ನು ಮುಂದುವರಿಸಲು ಬದ್ಧರಾಗಿದ್ದೇವೆ.

ಕಳೆದ ವಾರ ನಾನು ಹೌಸ್ ಆಫ್ ಕಾಮನ್ಸ್‌ನಲ್ಲಿ (ಪಾರ್ಲಿಮೆಂಟಿನ ಸಾಮಾನ್ಯರ ಸಭೆಯಲ್ಲಿ) ಮಾನವರ ಹಕ್ಕುಗಳ ಮತ್ತು ಪ್ರಜಾಪ್ರಭುತ್ವದ ಬಗ್ಗೆ ಚರ್ಚೆಗೆ ಉತ್ತರ ನೀಡಿದೆ. ನಾನು ಹೇಳಿದೆ: ನಮಗೊಂದು ಉದ್ದೇಶಲಕ್ಷ್ಯವಿದೆ, ಅದು ಮಾನವ ಹಕ್ಕುಗಳ ಸಂರಕ್ಷಣೆ ಮತ್ತು ಅಭಿವೃದ್ಧಿಯಾಗಿದೆ. ಅದರಲ್ಲಿ ನಮಗೆ ಆಸಕ್ತಿ ಇರುವುದರಿಂದ ಮಾತ್ರವಲ್ಲ, ಅದು ಚತುರತೆಯುಳ್ಳ ವಿಚಾರವೂ ಸರಿಯಾದ ವಿಚಾರವು ಆಗಿರುವ ಕಾರಣದಿಂದಾಗಿದೆ. ಅತ್ಯಂತ ಅಪಾಯಕಾರಿ ಸನ್ನಿವೇಶಗಳಲ್ಲೂ ಮಾನವ ಹಕ್ಕುಗಳಿಗಾಗಿ ಹೋರಾಡುವ ಗುಂಪುಗಳ ಮತ್ತು ವ್ಯಕ್ತಿಗಳ ಕೆಲಸಗಳನ್ನು ನಾನು ಅಭಿನಂದಿಸುತ್ತೇನೆ. ಅವರು ಎಂತಹ ಕಷ್ಟದ ಪರಿಸ್ಥಿತಿಯಲ್ಲಿ ಈ ಕೆಲಸವನ್ನು ನಿಭಾಯಿಸುತ್ತಿದ್ದಾರೆಂದರೆ ಆ ಕಷ್ಟಗಳ ಕುರಿತು ನಾವು ಊಹಿಸಲು ಕೂಡ ಸಾಧ್ಯವಿಲ್ಲ. ಕಾಮನ್‌ವೆಲ್ತ್ ಆಫೀಸ್ ಇಂತಹ ಗುಂಪುಗಳೊಂದಿಗೆ – ಅಹ್ಮದಿಯಾ ಜಮಾಅತ್ ಮತ್ತು ಅದರ ಸದಸ್ಯರು ಸೇರಿದಂತೆ – ಮಾಡುವ ಕೆಲಸಗಳಿಗೆ ನಾನು ಬಹಳ ಪ್ರಾಮುಖ್ಯ ನೀಡುತ್ತೇನೆ.

ಆದರಣೀಯ ಮಹಾಶಯರೇ, ಸ್ನೇಹಿತರೇ ಮತ್ತು ಸಹ ಪ್ರವರ್ತಕರೇ, ಇಂದು ಮಾನವಹಕ್ಕುಗಳಿಗೆ ಸಂಬಂಧಿಸಿ ಒಂದು ಅದ್ವಿತೀಯ ಆಯಾಮವನ್ನು ನಾವು ನೋಡುತ್ತೇವೆ. ಅದು ಧಾರ್ಮಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದೆ. ನೀವು ಈ ಬಗ್ಗೆ ಮಾಡಿದ ಕೊಡುಗೆಗಳ ಕಾರಣದಿಂದ ನಮ್ಮ ಮಾನವ ಹಕ್ಕುಗಳ ಧೋರಣೆ ಇನ್ನಷ್ಟು ಉತ್ತಮವೂ ಬಲಯುತವೂ ಆಗಿದೆ. ನಾನು ಇನ್ನು ಮುಂದೆ ಸಹ ಇಂತಹ ನಿಕಟ ಸಹವರ್ತನೆಯನ್ನು ಪ್ರತೀಕ್ಷಿಸುತ್ತೇನೆ. ನಾನು ಅದರ ಕಡೆಗೆ ಮುನ್ನೋಟ ಹೊಂದಿದ್ದೇನೆ.

## ದಿ ರೈಟ್ ಆನರೇಬಲ್ ಹೇಝಲ್ ಬ್ಲಿಯರ್ಸ್
## (ಸಾಲ್‌ಫೋರ್ಡ್ ಕ್ಷೇತ್ರದ ಪಾರ್ಲಿಮೆಂಟ್ ಸದಸ್ಯೆ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಫೋರ್ ಕಮ್ಯುನಿಟೀಸ್ ಎಂಡ್ ಲೋಕಲ್ ಗೌರ್ನಮೆಂಟ್.)



ಆದರಣೀಯ ಮಹಾಶಯರು ನಮ್ಮನ್ನು ಸಂಬೋಧಿಸಿ ನೀಡಿದ ಭಾಷಣಕ್ಕೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ನಿಜವಾಗಿಯೂ ನಾನು ನಿಮ್ಮ ಭಾಷಣವನ್ನು ಆಲಿಸಿ ಬಹಳ ಆನಂದಗೊಂಡಿದ್ದೇನೆ. ಇಲ್ಲಿ ಸೇರಿರುವ ಬಹುತೇಕ ಜನರು ಈ ಭಾಷಣವನ್ನು ಇನ್ನಷ್ಟು ಹೆಚ್ಚು ಕಾಲ ಆಲಿಸಲು ಬಯಸಿರಬಹುದೆಂದು ನಾನು ಭಾವಿಸುತ್ತೇನೆ. ನೀವು ಪ್ರಸ್ತಾಪಿಸಿದುದು ಪ್ರಚಲಿತ ವಿಷಯಗಳಿಗೆ ನಿಜವಾಗಿಯೂ ಸಂಬಂಧಿಸಿದುದೂ ವಾಸ್ತವಿಕವಾಗಿಯೂ ಮನದಟ್ಟಾಗುವಂತಹದೂ ಪಂಥಾಹ್ವಾನ ನೀಡುವಂತಹದೂ ಆಗಿದೆ. ಇದು ಅತ್ಯುತ್ತಮ ಭಾಷಣವಾಗಿದೆ. ರಾಜಕಾರಣಿಗಳು ಅಪರೂಪವಾಗಿ ಆಲಿಸುವಂತಹದೂ ಆಗಿದೆ. ನಿಮ್ಮ ಭಾಷಣ ಆಲಿಸಲು ನನಗೆ ಅತೀವ ಸಂತೋಷವಾಯಿತು.

ನನ್ನ ಹೆಸರು ಹೇಝುಲ್ ಬ್ಲಿಯರ್ಸ್, ನಾನು ಸಮುದಾಯ ಮತ್ತು ಸ್ಥಳೀಯ ಆಡಳಿತೆಗೆ ಸಂಬಂಧಿಸಿದ ಮಂತ್ರಿಯಾಗಿದ್ದೇನೆ. ನಾನು ಇಲ್ಲಿಗೆ ಆಗಮಿಸಿರುವುದು ಎರಡು ಕಾರಣಗಳಿಂದಾಗಿದೆ. ನಾನು ಸರಕಾರದ ಮಂತ್ರಿಯಾಗಿರುವ ನೆಲೆಯಲ್ಲಿ ಈ ದೇಶದಲ್ಲಿರುವ ಪ್ರತಿಯೊಂದು ಧಾರ್ಮಿಕ ಗುಂಪುಗಳನ್ನು ನಮ್ಮ ಐಕ್ಯತೆಯನ್ನು ದೃಢಪಡಿಸಲು ಅನುಕೂಲವಾದ ವಿಷಯಗಳನ್ನು ಪರಸ್ಪರ ಹಂಚಿಕೊಂಡು ಸಂಭ್ರಮಿಸುವುದಕ್ಕೆ. ಆದರೆ ನಾನು ಆಗಮಿಸಿದ ಮುಖ್ಯ ಕಾರಣವು ಆದರಣೀಯ ಪ್ರಧಾನ ಅತಿಥಿಯವರಿಗೆ ಪ್ರಧಾನ ಮಂತ್ರಿ ರೈಟ್ ಆನರೇಬಲ್ ಗೋರ್ಡನ್ ಬ್ರೌನ್‌ರ ಶುಭಾಶಯಗಳನ್ನು ತಲಪಿಸುವುದಕ್ಕಾಗಿದೆ. ಅವರು ಇಲ್ಲಿಗೆ ಆಗಮಿಸಲು ಇಚ್ಛಿಸಿದ್ದರು. ಆದರೆ ಅವರಿಗೆ ಅನಾನುಕೂಲವಾದ ಕಾರಣ ನಾನು ಇಲ್ಲಿಗೆ ಆಗಮಿಸಿ ಆದರಣೀಯ ಅತಿಥಿಯನ್ನು ಪಾರ್ಲಿಮೆಂಟಿನ ಹೌಸ್ ಆಫ್ ಕಾಮನ್ಸ್‌ಗೆ ಸ್ವಾಗತಿಸಲು ಮತ್ತು ಇಲ್ಲಿಗೆ ಆಗಮಿಸಿರುವ ಪಾರ್ಲಿಮೆಂಟ್ ಸದಸ್ಯರನ್ನು ಸ್ವಾಗತಿಸಲು ನನ್ನೊಂದಿಗೆ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಇಲ್ಲಿ ಒಗ್ಗೂಡಲು ಸಾಧ್ಯವಾದುದು ನಮಗೆಲ್ಲರಿಗೂ ಸಂತೋಷಕರವಾಗಿದೆ.

ನಾನು ಸಂಕ್ಷಿಪ್ತವಾಗಿ ಮಾತನಾಡುವೆನು. ನಿಮ್ಮ ಚಿಂತನೆಗಳು ನಮಗೆ ಬಹಳ ಮುಖ್ಯವಾಗಿವೆ. "ಎಲ್ಲರೊಂದಿಗೆ ಸ್ನೇಹ, ಯಾರೊಂದಿಗೂ ದ್ವೇಷವಿಲ್ಲ" ಎಂಬ ನಿಮ್ಮ ಸಿದ್ಧಾಂತವು ಮೌಲ್ಯಾಧಾರಿತವಾಗಿದೆ. ಬಹಳ ಮುಖ್ಯ ವಿಷಯವನ್ನು ನೀವು ಬಹಳ ಸರಳವಾಗಿ ಪ್ರಸ್ತಾಪಿಸಿರುವಿರಿ. ಈ ದೇಶದ ವಿವಿಧ ಸಮುದಾಯಗಳೊಂದಿಗೆ ಸಂಪರ್ಕ ಹೊಂದಿರುವ ನನಗೆ ಈ ತತ್ವವು ಬಹಳ ಮುಖ್ಯವಾಗಿದೆ.

ಈ ದೇಶವು ಅನುಸರಿಸುವ ಮೌಲಿಕವಾದ ಕೆಲವು ವಿಷಯಗಳಿವೆ. ಶಾಂತಿಸ್ಥಾಪನೆ, ಅನುಕಂಪ, ಸಮಾನತೆಯ ವ್ಯವಹಾರ, ಪರಸ್ಪರ ಗೌರವ ನೀಡುವಿಕೆ – ಇವು ಆ ವಿಷಯಗಳಾಗಿವೆ. ಇವುಗಳ ಬಗ್ಗೆ ಪ್ರಸ್ತಾಪಿಸುವುದು ಸುಲಭವಾಗಿದೆ. ಆದರೆ ಅವುಗಳನ್ನು ಆದರ್ಶವಾಗಿಟ್ಟುಕೊಳ್ಳುವುದು ಕಷ್ಟಕರವಾಗಿದೆ. ನಮ್ಮಲ್ಲಿ ಪ್ರತಿಯೊಬ್ಬನು ಈ ಪಂಥಾಹ್ವಾನವನ್ನು ಎದುರಿಸಲು ಕಠಿಣ ಪ್ರಯತ್ನ ಮಾಡುತ್ತಾನೆ. ನಾವು ಯಾವಾಗಲೂ ಜಯಶಾಲಿಗಳಾಗುವುದಿಲ್ಲ. ಕೆಲವೊಮ್ಮೆ ನಾವು ಮುಗ್ಗರಿಸಿ ಬೀಳುತ್ತೇವೆ. ನೀವು ಹೇಳಿದ, ದೌರ್ಜನ್ಯಗಾರರಿಗೆ ನೆರವು ನೀಡುವ ಪ್ರಕಾರ ವರ್ತಿಸಿದರೆ ಕೆಲವು ಸಾರಿ ಸರಿಯಾದ ದಾರಿಯಲ್ಲಿ ಅವರು ಸಾಗಲು ತೊಡಗುತ್ತಾರೆ. ನಿಮ್ಮ ಮಾತುಗಳು ಅತ್ಯಂತ ಸುಧಾರಣೆ ಉಂಟುಮಾಡುವುದೂ ಶುಭ ಪ್ರತೀಕ್ಷೆ ನೀಡುವುದೂ ಆಗಿದೆ. ಏಕೆಂದರೆ ಜನರು ತಮ್ಮನ್ನು ಪರಿವರ್ತಿಸಿಕೊಳ್ಳಲು ಸಮರ್ಥರಾಗಿದ್ದಾರೆ. ಜನರು ಇಂತಹ ಜಟಿಲ ಸಂದೇಶಗಳನ್ನು ಮನವರಿಕೆ ಮಾಡಿಕೊಳ್ಳಬಲ್ಲರು ಮತ್ತು ಹೊಸ ಮೌಲ್ಯಗಳನ್ನು ಅಪ್ಪಿಕೊಳ್ಳಲು ಸಮರ್ಥರಾಗುತ್ತಾರೆ.

ಅಹ್ಮದಿಯಾ ಜಮಾಅತಿನ ಬದ್ಧತೆ ಮತ್ತು ಅದರಲ್ಲಿ ಸ್ಥಿರತೆಯು ನಮ್ಮ ಪೈಕಿ ಪ್ರತಿಯೊಬ್ಬರಿಗೆ ಸ್ಫೂರ್ತಿದಾಯಕವಾಗಬೇಕು. ನಾನು ಮಾಡುವ ಕೆಲಸವು ಕೆಲವು ಸಾರಿ ಕಷ್ಟಕರವೂ ಪಂಥಾಹ್ವಾನ ನೀಡುವಂತಹವೂ ಆಗಿರುತ್ತದೆ. ನಮ್ಮ ಪಾರ್ಲಿಮೆಂಟ್ ಸದಸ್ಯರು ಮತ್ತು ರಾಜಕಾರಿಣಿಗಳು ಹೀಗೆಯೇ ಹೇಳುವರೆಂದು ನಾನು ಭಾವಿಸುತ್ತೇನೆ. ಆಧ್ಯಾತ್ಮಿಕ ನಾಯಕತ್ವವನ್ನೂ ಗಾಢವಾದ ವಿಶ್ವಾಸವನ್ನೂ ಹೊಂದಿದ ಜನರ ಸಂಪರ್ಕವು ನಮಗೆ ನಿಜವಾಗಿಯೂ ಸ್ಫೂರ್ತಿದಾಯಕವಾಗಿದೆ. ಆಗ ನಮಗೆ ನಾವು ಕೈಗೊಂಡ ಕೆಲಸಗಳನ್ನು ಮುಂದುವರಿಸಲು ಶಕ್ತಿ ದೊರಕುತ್ತದೆ. ಇಲ್ಲಿ ಸ್ಪಷ್ಟವಾಗಿ ಪ್ರಕಟಿಸಲಾದ ಕೆಲವು ಅಮೂಲ್ಯ ಉಪದೇಶಗಳು ಪ್ರಚಲಿತ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಲು ಸಹಾಯಕವಾಗಿವೆ. ತಮ್ಮ ಮನೆಗಳ ಬಗ್ಗೆ, ತಮ್ಮ ಕೆಲಸಗಳ ಬಗ್ಗೆ, ತಮ್ಮ ವ್ಯಾಪಾರಗಳ ಬಗ್ಗೆ ಆತಂಕಿತರಾದವರಿಗೆ ನಾವು ಸಹಾಯ ಮಾಡುತ್ತೇವೆ.

ನಾವು ಅನುಸರಿಸಿಕೊಂಡು ಬಂದ ಮೌಲ್ಯಗಳು ನಮ್ಮನ್ನು ಸರಿಯಾದ ದಿಶೆಯಲ್ಲಿ ನಡೆಸುವುದು. ನಾವು ನಮ್ಮ ಮೌಲ್ಯಗಳನ್ನು ಕೈಬಿಟ್ಟರೆ ನಾವು ಬಹಳ ಕಷ್ಟಕರವಾದ ಪರಿಸ್ಥಿತಿಗೆ ತಳ್ಳಲ್ಪಡುವೆವು.

ಈ ಸಮಾರಂಭವನ್ನು ವ್ಯವಸ್ಥೆಗೊಳಿಸಿದುದಕ್ಕಾಗಿ ನಾನು ಜಸ್ಟೀನ್‌ರಿಗೆ ಆಭಾರಿಯಾಗಿದ್ದೇನೆ. ಪ್ರತಿಯೊಂದು ರಾಜಕೀಯ ಪಕ್ಷದಿಂದ ಪ್ರತಿನಿಧಿಗಳು ಆಗಮಿಸಿದುದರಿಂದ ನಾನು ಸಂತೋಷಗೊಂಡಿದ್ದೇನೆ. ರಾಜಕೀಯ ಸಿದ್ಧಾಂತಗಳಲ್ಲಿ ಮೌಲ್ಯಗಳಿಗೆ ಪ್ರಾಮುಖ್ಯತೆ ಇದೆ ಎಂದು ನಾನು ಭಾವಿಸುತ್ತೇನೆ. ಅವುಗಳಲ್ಲಿ ಬಹುತೇಕ ಮೌಲ್ಯಗಳು ನಾವೆಲ್ಲರೂ ಅಂಗೀಕರಿಸುವವುಗಳೇ ಆಗಿವೆ. ನಾನು ಈ ಸಂದರ್ಭದಲ್ಲಿ ಪಾರ್ಲಿಮೆಂಟಿನ ಮಾಜಿ ಸದಸ್ಯರೂ ಅಹ್ಮದಿಯಾ ಜಮಾಅತ್ ಗೌರವಿಸುತ್ತಲೂ ಇದ್ದ ಟೋನಿ ಕೋಲ್‌ಮೇನ್‌ರನ್ನು ನೆನಪಿಸುತ್ತೇನೆ.


ನೀವೆಲ್ಲರೂ ಇಲ್ಲಿ ಆಗಮಿಸಿದುದರಿಂದ ಮತ್ತು ಈ ಸಮಾರಂಭ ನಡೆಸಲು ಸಾಧ್ಯವಾದುದಕ್ಕೆ ಸಂತೋಷಪಡುತ್ತೇನೆ ಹಾಗೂ ಹೊಸ ವಿದೇಶ ಕಾರ್ಯ ಮಂತ್ರಿಯಾದ ಗಿಲ್ಲಿಯನ್ ಮೆರ್ರೋನ್ ಜೊತೆಗೆ ಇಲ್ಲಿ ಭಾಗವಹಿಸಿದುದಕ್ಕೆ ಹರ್ಷಪಡುತ್ತೇನೆ. ಆಕೆ ಈ ದೇಶದ ಅನೇಕ ಸಮುದಾಯಗಳ ಹಕ್ಕುಗಳ ಬಗ್ಗೆ ಹೋರಾಡುವ ಸಾಹಸಿಯಾಗುವರೆಂದೂ ಲೋಕದಾದ್ಯಂತ ಉತ್ತಮ ಸಂಬಂಧ ಸ್ಥಾಪಿಸುವರೆಂದೂ ಪ್ರತೀಕ್ಷಿಸುತ್ತೇನೆ.

ಪ್ರಜಾಪ್ರಭುತ್ವದ ಹೃದಯವಾದ ಈ ನಾಡಿಗೆ ನಾವು ನಿಮ್ಮನ್ನು ಬಹಳ ಸಂತೋಷದಿಂದ ಸ್ವಾಗತಿಸುತ್ತೇವೆ. ನೀವು ನಿಮ್ಮ ಸಮುದಾಯದಲ್ಲಿ ಮಾಡುವ ಕೆಲಸಗಳಿಗೆ ಮತ್ತು ನೀವು ರೂಪಿಸುವ ಮೌಲ್ಯಗಳಿಗೆ ನಾನು ನಿಮಗೆ ವೈಯಕ್ತಿಕ ಅಭಿನಂದನೆ ಸಲ್ಲಿಸುತ್ತೇನೆ.

ನನಗೆ ನಿಮ್ಮ ಭಾಷಣ ಕೇಳಲು ಸಂದರ್ಭ ದೊರಕಿದುದಕ್ಕೆ ನಾನು ಸಂತೋಷಪಡುತ್ತೇನೆ. ಅತ್ಯಂತ ಹೆಚ್ಚು ವಾಗ್ವಾದಗಳು ನಡೆಯುವ ಸ್ಥಳದಿಂದ – ಕೆಲವು ಸಾರಿ ನಾವು ವಾದಕ್ಕೆ ಬೇಕಾಗಿ ವಾದಿಸುತ್ತೇವೆ ಅಲ್ಲವೇ ಜಸ್ಟೀನ್? – ಬಿಡುವು ಗಳಿಸಿ ಇಲ್ಲಿಗೆ ಬಂದಿದ್ದೇವೆ. ನಾವು ಒಳ್ಳೆಯ, ಬಲಯುತವಾದ ವಾಗ್ವಾದಗಳಲ್ಲಿ ಭಾಗವಹಿಸುತ್ತೇವೆ. ಆದರೆ ಅದರಿಂದ ವಿಶ್ರಾಂತಿ ಪಡೆದು ಶಾಂತವಾಗಿ ಕುಳಿತು ಪ್ರತಿಯೊಬ್ಬನನ್ನು ಅವನು ಮಾಡುವ ಕೆಲಸಕ್ಕೆ ಪ್ರಚೋದನೆ ನೀಡುವ ಶಕ್ತಿ ಯಾವುದು ಎಂದು ಯೋಚಿಸುವುದಕ್ಕೆ ಸಂದರ್ಭ ದೊರಕುವುದು ನಿಜವಾಗಿಯೂ ಅಮೂಲ್ಯವಾಗಿದೆ.

### ಮಿಸ್ಟರ್ ಅಲನ್ ಕೀನ್
### (ಫೆಲ್ಟ್‌ಹ್ಯಾಮ್ ಮತ್ತು ಹೆಸ್ಟನಿನ ಪಾರ್ಲಿಮೆಂಟ್ ಸದಸ್ಯ)

ಇಂದಿನ ಸಮಾರಂಭದಲ್ಲಿ ಭಾಗವಹಿಸಲು ಅವಕಾಶ ನೀಡಿದುದಕ್ಕೆ ನಾನು ನಿಮಗೆ ಕೃತಜ್ಞನಾಗಿದ್ದೇನೆ. ಪಾರ್ಲಿಮೆಂಟ್ ಹೌಸ್‌ನಲ್ಲಿ ಬಂದು ಸೇರುವ ಸಂದರ್ಭ ಲಭಿಸಿದುದಕ್ಕೆ ನೀವೆಲ್ಲರೂ ಆಹ್ಲಾದಗೊಂಡಿರುವಿರಿ ಎಂದು ನಾನು ಭಾವಿಸುತ್ತೇನೆ.



ಈ ದಿನ ಬೆಳಗ್ಗೆ ನಾನು ಗಾಬರಿಗೊಂಡೆನು. ಏಕೆಂದರೆ ಪ್ರಧಾನ ಮಂತ್ರಿಯಿಂದ ಒಂದು ಇ-ಮೈಲ್ ಸಂದೇಶ ಬಂದುದಾಗಿ ತಿಳಿಯಿತು. ನಾನು ಯಾವುದೋ ತಪ್ಪುಮಾಡಿದುದಕ್ಕೆ ನನ್ನನ್ನು ಅವರು ಆರ್ಥಿಕ ಮಂತ್ರಿಯನ್ನಾಗಿ ಮಾಡಿದ ಸಂದೇಶ ಅದಾಗಿರಬಹುದೆಂದು ನಾನು ಭಾವಿಸಿದೆನು. ಆದರೆ ಪ್ರಧಾನಮಂತ್ರಿಯವರ ಸಂದೇಶ ಒಂದು ಅತ್ಯುತ್ತಮ ಕಾರಣಕ್ಕೆ ಆಗಿತ್ತು. ಅವರು ಹೀಗೆ ಬರೆದಿದ್ದರು:

*"ಪ್ರಿಯ ಅಲನ್, ನಾನು ಈ ಸಂದೇಶ ಕಳುಹಿಸುವುದು, ನಾನು ನಿಮ್ಮೊಂದಿಗೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ನೇಹಿತರೊಂದಿಗೆ ಭಾಗವಹಿಸುವ ಸಮಾರಂಭಕ್ಕೆ ಬರಲಾಗುವುದಿಲ್ಲ ಎಂಬುದರ ಬಗ್ಗೆ ವಿಷಾದ ಸೂಚಿಸಲಿಕ್ಕಾಗಿದೆ. ನೀವು ಮತ್ತು ಹೇಝೆಲ್ - ಆಕೆ ಇಲ್ಲಿದ್ದಾರೆ - ನನ್ನ ಮತ್ತು ಲೇಬರ್ ಪಕ್ಷದ ಶುಭಾಶಯಗಳನ್ನು ಖಿಲಾಫತ್ ಶತಾಬ್ದ ಸಮಾರಂಭದಲ್ಲಿ ತಲಪಿಸಬೇಕು.*

*ಆದರಣೀಯ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರಿಗೆ ಮತ್ತು ನೂರ ಎಪ್ಪತ್ತಾರಕ್ಕಿಂತ ಹೆಚ್ಚು ದೇಶಗಳಲ್ಲಿರುವ ಅಹ್ಮದೀ ಮುಸ್ಲಿಮರಿಗೆ ನಮ್ಮ ಹೃತ್ಪೂರ್ವಕ ಸ್ವಾಗತವನ್ನು ಕೋರಿರಿ. ಬ್ರಿಟನಿನ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಶಾಂತಿಗಾಗಿಯೂ ಸಹಿಷ್ಣುತೆಗಾಗಿಯೂ ವಿವಿಧ ಧರ್ಮಗಳ ಮಧ್ಯೆ ಸಂವಾದಕ್ಕಾಗಿಯೂ ಇಲ್ಲಿಯೂ ವಿದೇಶದಲ್ಲಿಯೂ ಕಾರ್ಯೋನ್ಮುಖಿವಾಗುತ್ತಾ ಮುಂದುವರಿಯುವುದು. ನೀವು ಮತ್ತು ಹೇಝೆಲ್ ಬ್ರಿಟನ್‌ನಲ್ಲಿ ಅವರು ಸಾಧಿಸಿದ ಉತ್ತಮ ಕೆಲಸಗಳ ಬಗ್ಗೆ ಆಗಿಂದಾಗ್ಗೆ ವರದಿ ನೀಡುವುದನ್ನು ಮುಂದುವರಿಸುವಿರೆಂದು ನಂಬುತ್ತೇನೆ.*

*ನನ್ನ ಮೆಚ್ಚಿಗೆಯನ್ನೂ ನನ್ನ ಕೃತಜ್ಞತೆಯನ್ನೂ ನಿಮ್ಮೊಂದಿಗೆ ಅಲ್ಲಿಗೆ ಬಂದು ಸೇರಿದವರಿಗೆ ತಲಪಿಸಿರಿ ಮತ್ತು ಅವರ ಮೂಲಕ, ಅಲ್ಲಿಗೆ ಆಗಮಿಸದ, ಆದರೆ ದೇಶಕ್ಕಾಗಿ ಉತ್ತಮ ಸೇವೆ ಸಲ್ಲಿಸುವ ಅಹ್ಮದಿಯಾ ಮುಸ್ಲಿಮರಿಗೂ ತಲಪಿಸಿರಿ.*

*ಉತ್ತಮ ಶುಭಾಶಯಗಳೊಂದಿಗೆ,*
***ಗೋರ್ಡನ್."***

ನಾನು ಕೆಲವೇ ಮಾತುಗಳನ್ನು ಹೇಳಬಯಸುತ್ತೇನೆ. ಈ ಸಭೆಯು ನಮ್ಮ ರಾಜಕೀಯ ವ್ಯತ್ಯಾಸಗಳನ್ನು ಹಿನ್ನೆಲೆಗೆ ತಳ್ಳಿದೆ. ಇಲ್ಲಿ ಇಷ್ಟೆಲ್ಲಾ ರಾಜಕಾರಣಿಗಳು ಬಂದು ಸೇರಿರುವುದು ಏಕೆಂದು ನನಗೆ ತಿಳಿದಿದೆ. ಅವರೆಲ್ಲಾ ಇಲ್ಲಿಗೆ ಬಂದುದು ಜಗತ್ತಿನಾದ್ಯಂತ ಅಹ್ಮದಿಯಾ ಮುಸ್ಲಿಮ್ ಸಮಾಜಕ್ಕೆ ಶಾಂತಿಯ ಬಗ್ಗೆ ಇರುವ ಬದ್ಧತೆಯ ಕಾರಣದಿಂದಾಗಿದೆ. ಅವರೆಲ್ಲರೂ ತಮ್ಮ ಕ್ಷೇತ್ರಗಳಲ್ಲಿರುವ ಅಹ್ಮದೀ ಮುಸ್ಲಿಮರನ್ನು ಭೇಟಿಯಾಗಿ ಅವರ ನಿಲುವನ್ನು ಮನವರಿಕೆ ಮಾಡಿಕೊಂಡಿರುವರು. ಇದೇ ಕಾರಣದಿಂದ ನಾವು ಅಹ್ಮದಿಯಾ ಮುಸ್ಲಿಮರಾದ ನಿಮಗೆ ನಮ್ಮ ಸಹಾಯವನ್ನು ವಾಗ್ದಾನ ಮಾಡುತ್ತೇವೆ ಮತ್ತು ನೀವು ಮಾಡುವ ಕೆಲಸಗಳಿಗೋಸ್ಕರ ನಿಮಗೆ ಕೃತಜ್ಞತೆ ಅರ್ಪಿಸುತ್ತೇವೆ. ರಾಜಕೀಯ ಅಭಿಪ್ರಾಯ ವ್ಯತ್ಯಾಸಗಳು ಪ್ರಾಮುಖ್ಯತೆ ಪಡೆದಿಲ್ಲ ಎಂದು ನಾನು ತೋರಿಸಿಕೊಟ್ಟಿದ್ದೇನೆ. ಪುಟ್ನಿಯ ಪಾರ್ಲಿಮೆಂಟ್ ಸದಸ್ಯೆ (ಜಸ್ಟೀನ್ ಗ್ರೀನಿಂಗ್) ಬೇರೆ ಪಕ್ಷಕ್ಕೆ ಸೇರಿದವರಾದರೂ ಆಕೆಯನ್ನು ನಾನು ಮೆಚ್ಚುತ್ತೇನೆಂದು ಆದರಣೀಯ ಅತಿಥಿಗೆ ತೋರಿಸಿಕೊಟ್ಟಿದ್ದೇನೆ.

ನಾನು ಇನ್ನೊಂದು ವಿಷಯವನ್ನು ಹೇಳಬಯಸುತ್ತೇನೆ. ಮಹಾರಾಣಿಯವರ ಸರಕಾರವು ನನ್ನನ್ನು ಸಶಸ್ತ್ರ ಸೇನೆಯಲ್ಲಿ ಸೇರಬೇಕೆಂದು ಆಗ್ರಹಪಡಿಸಿತು. ನಾನು ಸೈನ್ಯಕ್ಕೆ ಸೇರದಿದ್ದರೆ ಉತ್ತಮವೆಂದು ಸರಕಾರಕ್ಕೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದೆ. ಆದರೆ ಅವರು ನನ್ನನ್ನು ಸೈನ್ಯಕ್ಕೆ ಸೇರಿಸಿದರು. ನಾನು ಲಂಡನ್ ನಗರ ಮಧ್ಯದಲ್ಲಿ ಕೆಲಸ ಮಾಡಲು ನಿಯುಕ್ತನಾಗಿದ್ದೆ. ಆದರೆ ನಾನು ಒರ್ಪಿಂಗ್‌ಟನ್‌ನಲ್ಲಿ ವಾಸಿಸುತ್ತಿದ್ದೆ. ಅರುವತ್ತನೆಯ ದಶಕದ ಆದಿಭಾಗದಲ್ಲಿ ಲಿಬರಲ್ ಡೆಮೋಕ್ರಾಟ್ ಸೇರಿದ್ದ ನಾನು ಲಾರ್ಡ್ ಆವ್‌ಬರಿಗೆ ಓಟು ಕೊಟ್ಟು ಅವರು ಪಾರ್ಲಿಮೆಂಟಿಗೆ ಆಯ್ಕೆಯಾಗುವಂತೆ ಸಹಾಯಮಾಡಿದೆ. ಅವರು ಬಹಳ ಕೆಲಸವನ್ನು ಮಾಡಿರುವರು.

ಆದರಣೀಯ ಅತಿಥಿಯವರಿಗೂ ಈ ಸಮಾರಂಭವನ್ನು ಏರ್ಪಡಿಸಲು ನೆರವಿತ್ತ ಜಸ್ಟೀನ್‌ನವರಿಗೂ ನಾನು ಕೃತಜ್ಞತೆ ಸಲ್ಲಿಸುತ್ತೇನೆ.

### ರೈಟ್ ಆನರೇಬಲ್ ಮಿಸ್ಟರ್ ಡೊಮಿನಿಕ್ ಗ್ರೀವ್ (ಬೇಕನ್ಸ್ ಫೀಲ್ಡ್ ಕ್ಷೇತ್ರದ ಪಾರ್ಲಿಮೆಂಟ್ ಸದಸ್ಯ ಮತ್ತು ಶ್ಯಾಡೋ ಹೋಮ್ ಸೆಕ್ರಿಟರಿ)

ಜಸ್ಟೀನ್, ನಿಮಗೆ ತುಂಬಾ ಕೃತಜ್ಞತೆಗಳು. ಅಹ್ಮದಿಯಾ ಜಮಾಅತಿಗೆ ಆತಿಥೇಯರಾಗುವುದು ತುಂಬಾ ಸಂತೋಷಕರವಾಗಿದೆ ಅಥವಾ ಅಹ್ಮದಿಯಾ ಜಮಾಅತಿನ ಅನೇಕ ಸಮಾರಂಭಗಳಲ್ಲಿ ಅತಿಥಿಯಾಗುವುದು. ನೀವು ವಾಸ್ತವಿಕವಾಗಿಯೂ ಯಾವಾಗಲೂ ಬಹಳ ಅಸಾಧಾರಣವಾದ ಒಂದು ಗುಂಪಿನ ಜನರೆಂದು ಕಾಣಿಸಿಕೊಳ್ಳುತ್ತೀರಿ. ನಿಮ್ಮ ವಾರ್ಷಿಕ ಸಮ್ಮೇಳನಕ್ಕೆ ಹ್ಯಾಂಪ್‌ಶೈರ್‌ಗೆ ಎಂದರೆ ಹ್ಯಾಂಪ್‌ಶೈರ್ ಸಸ್ಸೆಕ್ಸ್ ಗಡಿ ಪ್ರದೇಶಕ್ಕೆ



ಹೋಗುವುದು ಬ್ರಿಟಿಷ್ ಜೀವಿತದಲ್ಲಿ ಅದ್ವಿತೀಯ ವಾದೊಂದು ದೃಶ್ಯವನ್ನು ಕಾಣಲಿಕ್ಕಾಗಿರುತ್ತದೆ. ಈ ದೇಶದ ಅಹ್ಮದಿಯರಲ್ಲಿ ಶೇಕಡಾ ಎಪ್ಪತ್ತೈದು - ಎಂಭತ್ತು ಜನರು ಒಂದೇ ಸ್ಥಳದಲ್ಲಿ ಜಮಾಯಿಸುತ್ತಾರೆ. ಒಬ್ಬ ರಾಜಕಾರಣಿಯಾದ ನಾನು ಇಂತಹ ಸಭೆ ನಡೆಸುವ ಬಗ್ಗೆ ಕನಸು ಕಾಣುತ್ತೇನೆ. ಇದು ನಿಮ್ಮ ಎದ್ದು ತೋರುವ ಗುಣವೆಂದು ನನಗೆ ಯಾವಾಗಲೂ ತೋರುತ್ತಿದೆ.

ನಮ್ಮ ರಾಷ್ಟ್ರೀಯ ಜೀವಿತಕ್ಕೆ ನಿಮ್ಮ ಕೊಡುಗೆ ಬೃಹತ್ತಾಗಿದೆ. ನಾನು ಇಲ್ಲಿ ನನಗೆ ಪರಿಚಿತವಾಗಿರುವ ಮುಖಗಳನ್ನು ಕಾಣುತ್ತಿದ್ದೇನೆ.

ಸಾರ್ವಜನಿಕ ಜೀವನದಲ್ಲಿ, ರಾಜಕೀಯದಲ್ಲಿ, ಸರಕಾರದ ಸೇವೆಯಲ್ಲಿ, ಸೈನ್ಯದಲ್ಲಿ ಮತ್ತು ವಿವಿಧ ವೃತ್ತಿಗಳಲ್ಲಿ ಅಹ್ಮದಿಯರ ಪ್ರಾತಿನಿಧ್ಯ ಗಮನಾರ್ಹವಾಗಿದೆ. ಇದು ಸಂಭವಿಸಿರುವುದು ನಮ್ಮ ಪರಸ್ಪರ ಬಾಂಧವ್ಯದ ಕಾರಣದಿಂದಾಗಿದೆ. ನಾವು ಪ್ರಮುಖ ವಿಷಯಗಳನ್ನು ಚರ್ಚಿಸಿ ಪರಸ್ಪರರರ ಅಭಿಪ್ರಾಯಗಳನ್ನು, ಪರಸ್ಪರ ನಿಲುವುಗಳನ್ನು ಮೃದುಗೊಳಿಸಬಹುದಾಗಿದೆ. ಆದರಣೀಯ ಮಹಾಶಯರು ಹೇಳಿದ ಹಾಗೆ ಇದು ಇಸ್ಲಾಮಿನ ಉಪದೇಶಗಳ ಸತ್ವವೇ ಆಗಿದೆ. ನೀವು ಅದನ್ನು ಆಚರಣೆಗೆ ತಂದಿರುತ್ತೀರಿ. ನೀವು ಪ್ರಾರಂಭಿಸಿದ ವಿವಿಧ ಧರ್ಮಗಳ ಮಧ್ಯೆ ಸಂವಾದವು ನಮಗೆಲ್ಲರಿಗೂ ಪ್ರಯೋಜನಕರವಾಗಿದೆ.

ನಾನು ನಿಮಗೆ ಕೃತಜ್ಞತೆ ಅರ್ಪಿಸುತ್ತೇನೆ. ನಿಮ್ಮ ಆಮಂತ್ರಣಕ್ಕಾಗಿ ಮತ್ತು ಎಲ್ಲರೂ ಜೊತೆಗೂಡಿ ಹೌಸ್ ಆಫ್ ಕಾಮನ್ಸ್‌ನಲ್ಲಿ ಆತಿಥೇಯರಾಗಲು ದೊರಕಿದ ಸಂದರ್ಭಕ್ಕಾಗಿ. ಇದು ಈ ಜಮಾಅತಿನ ಖಿಲಾಫತಿನ ಶತವಾರ್ಷಿಕ ಸಮಾರಂಭದ ಭಾಗವಾಗಿದೆ. ಈ ಜಮಾಅತ್ ವಿವಿಧ ಧರ್ಮಗಳ ಮಧ್ಯೆ ಸೌಹಾರ್ದ ಉಂಟು ಮಾಡಲು ಬಹಳ ಪ್ರಯತ್ನ ಮಾಡಿದೆ. ನಮ್ಮ ರಾಷ್ಟ್ರೀಯ ಜೀವಿತದಲ್ಲಿ ಸಾಮರಸ್ಯ ದಿಂದ ಜೀವಿಸುವುದು ಹೇಗೆ ಎಂಬುದಕ್ಕೆ ಈ ಜಮಾಅತ್ ಒಂದು ಮಾದರಿಯಾಗಿದೆ.

ನೀವು ಇಲ್ಲಿ ನಿಮ್ಮ ಕೇಂದ್ರವನ್ನು ಸ್ಥಾಪಿಸಲು ಒಂದು ಕಾರಣ ಬ್ರಿಟನ್ ನಿಮಗೆ ಅದರ ಬಗ್ಗೆ ಸವಲತ್ತುಗಳನ್ನು ಒದಗಿಸಿದುದ ರಿಂದಾಗಿದೆ. ಅಹ್ಮದಿಯಾ ಜಮಾಅತ್ ಕೇಂದ್ರವು ಅದರ ಎಲ್ಲಾ ಜಾಗತಿಕ ಸಂಪರ್ಕದೊಂದಿಗೆ ಇಲ್ಲಿ ಸ್ಥಾಪಿವಾದುದರ ಬಗ್ಗೆ ನಾವೆಲ್ಲಾ ಅಭಿಮಾನಪಡುತ್ತೇವೆ. ನಾನು ಮುಂದಿನ ಬಗ್ಗೆ ಯೋಚಿಸುವಾಗ ನೀವು ಇಲ್ಲಿ ಸಾಧಿಸಿದುದನ್ನು ನಾವು ಸಹ ಅದರ ಅಸ್ತಿಭಾರದ ಮೇಲೆ ನಿರ್ಮಿಸಬಹುದಾಗಿದೆ. ನಾವು ಪರಸ್ಪರ ಬಾಂಧವ್ಯ ಸ್ಥಾಪಿಸಿ ಮುಂದುವರಿಯಬೇಕಾಗಿದೆ. ಏಕೆಂದರೆ ನಾವು ಒಬ್ಬರಿನೊಬ್ಬರಿಂದ ಅನೇಕ ವಿಷಯಗಳನ್ನು ಕಲಿತುಕೊಳ್ಳಲಿಕ್ಕಿದೆ.

ನೀವು ಹೇಳುವ ಹಾಗೆ ಈ ಲೋಕವು ಕಷ್ಟಭರಿತವಾಗಿದೆ. ಅದರಲ್ಲಿ ಸ್ಪಷ್ಟವಾದ ಅನ್ಯಾಯಗಳು ನಡೆಯುತ್ತಿವೆ ಮತ್ತು ಮಾನವೀಯ ದುರ್ಬಲತೆಗಳು ಸ್ಪಷ್ಟವಾಗಿ ಕಾಣಿಸುತ್ತಿವೆ. ಈ ವಿಷಯಗಳ ಬಗ್ಗೆ ಚರ್ಚಿಸಲು ಸ್ನೇಹಿತರು ದೊರಕುವುದು ಮತ್ತು ನಮ್ಮ ಮಕ್ಕಳಿಗೂ ಮೊಮ್ಮಕ್ಕಳಿಗೂ ಉಪಕಾರವಾಗುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದರಲ್ಲಿ ನಮ್ಮ ಶುಭಾಕಾಂಕ್ಷೆ ಇದೆ.

**ರೈಟ್ ಆನರೇಬಲ್ ಮಿಸ್ಟರ್ ಸೈಮನ್ ಹ್ಯೂಸ್**
**(ನೋರ್ತ್ ಸೌತ್ ವಾರ್ಕ್ ಮತ್ತು ಬೆರ್‌ಮಂಡ್‌ಸೇ ಪಾರ್ಲಿಮೆಂಟ್ ಸದಸ್ಯ, ಲಿಬರಲ್ ಡೆಮೋಕ್ರೆಟಿಕ್ ಪಾರ್ಟಿ ಅಧ್ಯಕ್ಷ ಮತ್ತು ಹೌಸ್ ಆಫ್ ಕಾಮನ್ಸಿನ ಶ್ಯಾಡೋ ಲೀಡರ್)**

ಆದರಣೀಯ ಮಹಾಶಯರೇ, ಮಂತ್ರಿಗಳೇ ಮತ್ತು ಸ್ನೇಹಿತರೇ, ನಾವು ಇಲ್ಲಿ ಒಗ್ಗೂಡಿರುವುದು ನಾವು ನಿಮಗೆ ನೀಡುವ ಸ್ವಾಗತದ ವಿಶಾಲತೆಯನ್ನು ಸೂಚಿಸಲಿಕ್ಕಾಗಿದೆ. ನೀವು ನಿಮ್ಮ ಕೇಂದ್ರದಲ್ಲಿ ನಮ್ಮಲ್ಲಿ ಹಲವರನ್ನು ಸ್ವಾಗತಿಸಿದ್ದೀರಿ. ಡೊಮಿನಿಕ್ ಗ್ರೀವ್ ನಿಮ್ಮ ವಾರ್ಷಿಕ ಸಮ್ಮೇಳನದ ಬಗ್ಗೆ ಪ್ರಸ್ತಾಪಿಸಿದರು. ಅಲ್ಲಿ ಸಾವಿರಾರು ಜನರು ಜಮಾಯಿಸುತ್ತಾರೆ. ಅಲ್ಲಿ ಕಲಿಯಲು ಮತ್ತು ಸ್ವಾಗತಿಸಲು ಬಂದು ಸೇರುತ್ತಾರೆ. ನನ್ನ ಮೇಲೆ ಪ್ರಭಾವ ಬೀರಿದ ಮೂರು ವಿಷಯಗಳ ಕಡೆಗೆ ನಿಮ್ಮ ಗಮನ ಸೆಳೆಯುತ್ತೇನೆ.

ಪ್ರಥಮವಾಗಿ, ನಿಮ್ಮನ್ನು ಬ್ರಿಟನ್‌ನಲ್ಲಿ ಬಹಳ ಸ್ವಾಗತಿಸಲಾಗುತ್ತಿದೆ. ಬ್ರಿಟನ್ ಅಹ್ಮದಿಯರ ಕೇಂದ್ರವನ್ನು ಸ್ವಾಗತಿಸಿದೆ.



ಅಹ್ಮದಿಯಾ ಜಮಾಅತ್ ಒಂದು ರಹಸ್ಯ ಪಂಥವಾಗಿ ಕೆಲಸ ಮಾಡುತ್ತಾ ಇಲ್ಲ. ಅದು ಎಲ್ಲಾ ಪಕ್ಷಗಳಿಗೆ ಸೇರಿದ ನಮ್ಮೊಂದಿಗೆ ಸಂಪರ್ಕವಿರಿಸಲು ಪ್ರಯತ್ನಿಸಿದೆ. ಪಕ್ಷದೊಳಗೆ, ಪಕ್ಷದ ಹೊರಗೆ ಮತ್ತು ಸೌತ್ ವೆಸ್ಟ್ ಲಂಡನ್‌ನ ನಿಮ್ಮ ಕೇಂದ್ರದಲ್ಲಿ ಮತ್ತು ಬೇರೆ ಕಡೆಗಳಲ್ಲೂ ತಪ್ಪುಗ್ರಹಿಕೆ ಮತ್ತು ಪೂರ್ವಗ್ರಹದ ಗೋಡೆಗಳನ್ನು ಕೆಡವಲು ಅತ್ಯುತ್ತಮವಾದ ಮಾರ್ಗ ಸಂಬಂಧ ಸ್ಥಾಪಿಸುವುದಾಗಿದೆ. ನಾನು ಅದಕ್ಕಾಗಿ ನಿಮ್ಮನ್ನು ಮತ್ತು ನಿಮ್ಮ ಸಹ ಉದ್ಯೋಗಿಗಳನ್ನು ಈ ಬಗ್ಗೆ ಅಭಿನಂದಿಸುತ್ತೇನೆ.

ದ್ವಿತೀಯವಾಗಿ, ಲಂಡನ್ ಪಾರ್ಲಿಮೆಂಟ್ ಸದಸ್ಯನಾದ ನಾನು ಅಲನ್ ಮತ್ತು ಇತರರ ಹಾಗೆ ಹೆಮ್ಮೆಪಡುತ್ತೇನೆ. ನೀವು ನಿಮ್ಮ ಕೇಂದ್ರ ನಮ್ಮ ದೇಶದಲ್ಲಿ ಸ್ಥಾಪಿಸಿದ ಬಗ್ಗೆ ನಮಗೆ ಅಭಿಮಾನವಿದೆ. ನಮ್ಮದು ಯುರೋಪಿನಲ್ಲಿ ಅಥವಾ ಲೋಕದಲ್ಲೇ ಅತ್ಯಂತ ಕಾಸ್ಮೋಪೊಲಿಟನ್ (ವಿಶ್ವಮಾದರಿ) ನಗರವಾಗಿದೆ. ಎಲ್ಲ ಹಿರಿಯ ಧರ್ಮಗಳ ಪ್ರಾತಿನಿಧ್ಯ ಇಲ್ಲಿರುವುದು ನಮಗೆ ಬಹಳ ಮುಖ್ಯವಾಗಿದೆ. ನಾವು ಎಲ್ಲರೊಂದಿಗೆ ಸಹಬಾಳ್ವೆ ನಡೆಸಲು ಕಲಿಯುತ್ತೇವೆ ಮತ್ತು ಲೋಕದ ಇತರ ಸ್ಥಳಗಳಲ್ಲಿರುವವರೂ ಇಲ್ಲಿಗಿಂತ ಕಡಿಮೆ ಸಹಿಷ್ಣುಗಳಾಗಿದ್ದರೂ ನಮ್ಮ ಹಾಗೆ ಬಾಳ್ವೆ ನಡೆಸಬೇಕೆಂದು ನಾವು ಬಯಸುತ್ತೇವೆ. ನಾವು ಎಲ್ಲರಿಗೂ ಮಾದರಿ ಯಾಗಬೇಕು. ಪರಸ್ಪರ ಅರಿತುಕೊಂಡು ಒಬ್ಬರಿನ್ನೊಬ್ಬರಿಂದ ಕಲಿತು ಕೊಳ್ಳಬೇಕು. ಇಲ್ಲಿ ಅನೇಕ ಧರ್ಮಗಳಿಗೆ ಸೇರಿದವರಿದ್ದಾರೆ. ಅತ್ಯುತ್ತಮ ಸಮುದಾಯಗಳು ಯಾವುವು ಎಂದರೆ, ಅಲ್ಲಿ ಎಲ್ಲಾ ಧರ್ಮಗಳ ಬಗ್ಗೆ ಪರಿಪೂರ್ಣ ಗೌರವ ನೀಡಲಾಗುತ್ತದೆ. ಅದರಿಂದ ಮಾನವರ ಹಕ್ಕುಗಳ ಸಂರಕ್ಷಣೆ ಉಂಟಾಗುತ್ತದೆ. ಜನರು ಸ್ವತಂತ್ರರಾಗಿ ಒಟ್ಟಿಗೆ ಸೇರಿ, ಸ್ವತಂತ್ರರಾಗಿ ಆರಾಧಿಸುವವರಾಗಬೇಕು. ಪ್ರಚಾರ ಮಾಡಲು ಮತ್ತು ಕಲಿಸಲು ಮತ್ತು ಜನರೊಂದಿಗೆ ಸಂಪರ್ಕ ಸ್ಥಾಪಿಸಲು ಸ್ವತಂತ್ರರಾಗಿರಬೇಕು. ನಾವು ಆ ಬಗ್ಗೆ ವಿಶೇಷ ಸವಲತ್ತನ್ನು ಹೊಂದಿದ್ದೇವೆ.

ತೃತೀಯವಾಗಿ, ನಾವು ಇಲ್ಲಿ ಸೇರಿರುವುದು ನಿಮ್ಮ ಖಿಲಾಫತ್ ಶತವಾರ್ಷಿಕವನ್ನು ಆಚರಿಸಲಿಕ್ಕಾಗಿದೆ. ಧಾರ್ಮಿಕ ಸಹಿಷ್ಣುತೆ ಮತ್ತು ಸ್ವಾತಂತ್ರ್ಯದ ಬಗ್ಗೆ ವಾದಿಸುವ ಕೆಲಸ ಇನ್ನೂ ಮುಕ್ತಾಯವಾಗಿಲ್ಲ. ನಾನು ನಿಮ್ಮ ಸಹಚರರೊಂದಿಗೆ ಇದ್ದಾಗೆಲ್ಲಾ ಪಾಕಿಸ್ತಾನಮತ್ತು ಲೋಕದ ಇತರ ಭಾಗಗಳಲ್ಲಿ ಜನರು ತಮ್ಮ ಧಾರ್ಮಿಕ ವಿಶ್ವಾಸವನ್ನು ಅನುಷ್ಠಾನ ಮಾಡಲು ಸ್ವತಂತ್ರರಾಗಿಲ್ಲವೆಂದೂ ಆದುದರಿಂದ ನಾವು

ಅಂತಾರಾಷ್ಟ್ರೀಯ ಮಟ್ಟದಲ್ಲಿ ಅದನ್ನು ಗಳಿಸಿಕೊಡಲು ಪ್ರಯತ್ನಿಸ ಬೇಕೆಂದೂ ನಮಗೆ ನೆನಪಿಸಲಾಗುತ್ತದೆ. ಗಿಲ್ಲಿಯನ್ ಈಗ ಯುರೋಪಿಗೆ ಸಂಬಂಧಿಸಿದ ಮಂತ್ರಿ ಆಗಿದ್ದಾರೆ. ಅವರಲ್ಲದೆ ವಿದೇಶಾಂಗ ವಿಭಾಗದಲ್ಲಿರುವ ಇತರ ಮಂತ್ರಿಗಳು ಜನರಿಗೆ ನಮ್ಮಲ್ಲಿರುವಂತಹ ಸ್ವಾತಂತ್ರ್ಯ ಇಲ್ಲದ ಪ್ರದೇಶಗಳ ಬಗ್ಗೆ ಗಮನ ಹರಿಸುತ್ತಾರೆ.

ಪಾರ್ಲಿಮೆಂಟಿನ ಎರಡು ಸದನಗಳ ಸದಸ್ಯರು ಈಬಗ್ಗೆ ಒಮ್ಮತ ಹೊಂದಿದ್ದಾರೆ. ಪ್ರತಿಯೊಂದು ದೇಶದ ಜನರು ತಮ್ಮಗಿಷ್ಟವಿರುವ ಧರ್ಮವನ್ನು ಅನುಸರಿಸಲು ಸ್ವತಂತ್ರರಾಗಿರಬೇಕು. ಈ ಬಗ್ಗೆ ನಾವು ಸದಾ ಪ್ರಯತ್ನ ಮಾಡುತ್ತಾ ಇರಬೇಕು. ಆ ಕೆಲಸ ಇನ್ನೂ ಪೂರ್ಣ ಗೊಂಡಿಲ್ಲ. ನಿಮ್ಮ ಶತವಾರ್ಷಿಕ ಸಮಾರಂಭದ ಈ ಸಂದರ್ಭದಲ್ಲಿ ನಾವು ಈ ಬಗ್ಗೆ ತೀವ್ರವಾಗಿ ಪ್ರಯತ್ನಿಸುವೆವು. ಅಹ್ಮದಿಯರು ಶಾಂತಿಯಿಂದಲೂ ಸ್ವತಂತ್ರರಾಗಿಯೂ ಸಮಾನ ನಾಗರಿಕರಾಗಿಯೂ ಜೀವಿಸುವ ಅನೇಕ ಪ್ರದೇಶಗಳು ಅವರಿಗೆ ಲಭಿಸಲಿಕ್ಕಾಗಿ ಪ್ರಯತ್ನಿಸಲಾಗುವುದು.

**ಲಾರ್ಡ್ ಎರಿಕ್ ಆವ್‌ಬರೀ**
**(ಆಫ್ರಿಕ ಮತ್ತು ಪೌರಸ್ವಾತಂತ್ರ್ಯದ ಬಗ್ಗೆ ಹೌಸ್ ಆಫ್ ಲಾರ್ಡ್ಸ್ ವಕ್ತಾರ. ಅವರು ಅಹ್ಮದಿಯಾ ಜಮಾಅತ್ ಪರವಾಗಿ ಧಾರ್ಮಿಕ ಸ್ವಾತಂತ್ರ್ಯ ಮತ್ತು ಮನಸ್ಸಾಕ್ಷಿಯ ಸ್ವಾತಂತ್ರ್ಯದ ಬಗ್ಗೆ ದೀರ್ಘಕಾಲದಿಂದ ಪ್ರತಿಪಾದಿಸುತ್ತಿದ್ದಾರೆ.)**



ಆದರಣೀಯ ಮಹಾಶಯರೇ, ಸಹೋದರರೇ ಮತ್ತು ಸಹೋದರಿಯರೇ,

ಅಸ್ಸಲಾಮು ಅಲೈಕುಮ್ (ನಿಮ್ಮ ಮೇಲೆ ಶಾಂತಿ ಇರಲಿ).

ಆದರಣೀಯ ಮಹಾಶಯರು ನಮ್ಮನ್ನು ಸಂಬೋಧಿಸಿ ಮಾಡಿದ ಮಹತ್ವಪೂರ್ಣ ಭಾಷಣಕ್ಕೆ ಕೃತಜ್ಞತೆ ಅರ್ಪಿಸುವ ಮಹಾಭಾಗ್ಯ ನನಗೆ ದೊರೆತಿದೆ. ಅದರ ಬಗ್ಗೆ ಇತರರು ತಮ್ಮ ಕೃತಜ್ಞತೆ ಸೂಚಿಸಿದ್ದಾರೆ. ನಾವು ಮಾಡುತ್ತಿರುವ ಕೆಲಸಗಳ ನೈತಿಕ ನೆಲೆಗಟ್ಟಿನ ಬಗ್ಗೆ ಅವರು ಮಾಡಿದ ಪ್ರಸ್ತಾಪವು ಬಹಳ ಪ್ರಭಾವಶಾಲಿಯಾಗಿತ್ತು.

ಗಿಲ್ಲಿಯನ್ ಮೆರ್ರೋನ್‌ರವರು ಹೇಳಿದ ವಿದೇಶಾಂಗ ಮಂತ್ರಾಲಯದ ಉದ್ದೇಶ ಲಕ್ಷ್ಯಗಳಲ್ಲಿ ಮಾನವೀಯ ಹಕ್ಕುಗಳು ಮತ್ತು ಧಾರ್ಮಿಕ ಸ್ವಾತಂತ್ರ್ಯವು ಸೇರಿವೆ. ಇವುಗಳನ್ನು ಅಹ್ಮದಿಯರಿಗೆ ಲೋಕದ ಹಲವು ದೇಶಗಳಲ್ಲಿ ನಿರಾಕರಿಸಲಾಗಿದೆ. ಆದರಣೀಯ ಮಹಾಶಯರು ಸಂಘರ್ಷಗಳ ತಡೆಗಟ್ಟುವಿಕೆ ಬಗ್ಗೆ ಪ್ರಸ್ತಾಪಿಸಿದ್ದಾರೆ. ನಮ್ಮ ವಿದೇಶಾಂಗ ಮಂತ್ರಾಲಯದ ಪ್ರಮುಖ ಕಾರ್ಯಯೋಜನೆಗಳಲ್ಲಿ ಇದು ಸೇರಿದೆ. ನಾವು ಲೋಕದ ಅನೇಕ ಪ್ರದೇಶಗಳಲ್ಲಿ ಜನರ ಮಧ್ಯೆ ತಲೆದೋರಿರುವ ಜಗಳಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿದ್ದೇವೆ. ಆ ಜಗಳಗಳು ಮಾನವೀಯ ಹಕ್ಕುಗಳ ನಿರಾಕರಣೆಯ ಕಾರಣದಿಂದ ಉದ್ಭವಿಸಿದವುಗಳಾಗಿವೆ. ಅಹ್ಮದಿಯರಿಗೆ ಸಂಬಂಧಿಸಿ ಹೇಳುವುದಾದರೆ, ಪಾಕಿಸ್ತಾನದಲ್ಲಿ ಝಿಯಾಉಲ್ ಹಖ್ ಜಾರಿಗೊಳಿಸಿ ಕುಪ್ರಸಿದ್ಧ ದೇವದೂಷಣೆ ನಿಯಮಗಳು ಅಹ್ಮದಿಯರಿಗೆ ಘಾತಕವಾಗಿವೆ. ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವವು ಪುನಃ ಸ್ಥಾಪಿತವಾಗಿದ್ದರೂ ಈ ಕರಾಳ ನಿಯಮಗಳು ಮುಂದುವರಿಯುತ್ತಾ ಇವೆ.

ಬಂಗ್ಲಾ ದೇಶದಲ್ಲೂ ಅಹ್ಮದಿಯರಿಗೆ ಸಂಬಂಧಿಸಿ ಸಮಸ್ಯೆಗಳಿದ್ದುವು. ಈಗ ತಾತ್ಕಾಲಿಕವಾಗಿ ಅವು ಸ್ಥಗಿತಗೊಂಡಿವೆ. ಆದರೆ ಆ ಸಮಸ್ಯೆಗಳು ಪುನಃ ತಲೆದೋರಲಾರವು ಎಂಬುದರ ಬಗ್ಗೆ ಖಾತರಿ ಇಲ್ಲ. ಖತ್‌ಮೆ ನುಬುವ್ವತ್ (ಪ್ರವಾದಿತ್ವದ ಸಮಾಪ್ತಿ) ಎಂಬ ಸಂಘಟನೆಯು ಬಂಗ್ಲಾ ದೇಶದಲ್ಲಿಯೂ ಬೇರೆ ಸ್ಥಳಗಳಲ್ಲೂ ಅಹ್ಮದಿಯರಿಗೆ ತಮ್ಮ ವಿಶ್ವಾಸಾದರ್ಶಗಳ ಪ್ರಕಾರ ವರ್ತಿಸುವ ಹಕ್ಕನ್ನು, ಎಂದರೆ ಆದರಣೀಯ ಮಹಾಶಯರು ವಿವರಿಸಿದ ರೀತಿಯಲ್ಲಿ ಇಸ್ಲಾಮ್ ಧರ್ಮವನ್ನು ಅನುಷ್ಠಾನಕ್ಕೆ ತರಲು ಇರುವ ಹಕ್ಕನ್ನು ನಿರಾಕರಿಸುತ್ತದೆ.

ಬಹುತೇಕ ಮೌಲ್ಯಗಳೊಂದಿಗೆ ನಾವು ಸಹಮತ ಹೊಂದಿದ್ದೇವೆ. ಹೀಗಿರುವಾಗ ಇಂತಹ ಉತ್ತಮ ಮೌಲ್ಯಗಳನ್ನು ಪ್ರಚಾರ ಗೊಳಿಸುವುದನ್ನು ಯಾರಾದರೂ ಏಕೆ ಆಕ್ಷೇಪಿಸುತ್ತಾರೆಂಬುದು ನಮಗೆ ಅರ್ಥಮಾಡಿ ಕೊಳ್ಳಲು ಕಷ್ಟವಾಗುತ್ತಿದೆ. ಅನೇಕ ಸಂಸ್ಕೃತಿ ಮತ್ತು ಅನೇಕ ಧಾರ್ಮಿಕ ನಂಬಿಕೆಗಳನ್ನೊಳಗೊಂಡ ಸಮಾಜದಲ್ಲಿ ಇವುಗಳು ಪಾಲಿಸಲ್ಪಡಬೇಕಾದವುಗಳಾಗಿವೆ. ಹೀಗಿದ್ದರೂ ಖತ್‌ಮೆ ನುಬುವ್ವತ್ ಸಂಘಟನೆಯು ಪ್ರಭಾವಶಾಲಿಯಾಗಿರುವ ಪ್ರದೇಶ ಗಳಲ್ಲೆಲ್ಲಾ ನಾವು ಇಲ್ಲಿ ಅನುಭವಿಸುತ್ತಿರುವ ಸ್ವಾತಂತ್ರ್ಯವನ್ನು ಅಹ್ಮದಿಯರಿಗೆ ಅಲ್ಲಿನ ಜನರು ನಿರಾಕರಿಸುತ್ತಾರೆ. ಆ ಬಗ್ಗೆ ನಾವು ನಮ್ಮ ವಿದೇಶಾಂಗ ಮಂತ್ರಾಲಯದ ಮೂಲಕ ಆಯಾ ದೇಶದ ಗಮನಕ್ಕೆ ತಂದು ಅಹ್ಮದಿಯರಿಗೆ ಆ ಸ್ವಾತಂತ್ರ್ಯಗಳು ಲಭಿಸಲು ಪ್ರಯತ್ನಿಸುತ್ತೇವೆ.

ಇದರ ಮೊದಲು ಇತರರು ಹೇಳಿದ ಹಾಗೆ ಅಹ್ಮದಿಯಾ ಜಮಾಅತ್ ಈ ದೇಶದಲ್ಲಿರುವುದಕ್ಕೆ ನಾವು ಕೃತಜ್ಞರಾಗಿದ್ದೇವೆ. ಅವರು ನಮ್ಮ ಕರ್ತವ್ಯಗಳನ್ನು ಯಾವಾಗಲೂ ನೆನಪಿಸಿಕೊಡುತ್ತಾರೆ. ಲೋಕದ ವಿವಿಧ ಸ್ಥಳಗಳಲ್ಲಿರುವ ಜನರಿಗೆ ಸ್ವಾತಂತ್ರ್ಯ ದೊರಕುವಂತೆ ಮಾಡಲು ಪ್ರಯತ್ನಿಸುವುದು ಮತ್ತು ಆಗಾಗ ತಲೆದೋರುತ್ತಿರುವ ಸಂಘರ್ಷಗಳ ನಿವಾರಣೆಗಳೇ ನಮ್ಮ ಕರ್ತವ್ಯಗಳಾಗಿವೆ.

ಆದುದರಿಂದ ಆದರಣೀಯ ಮಹಾಶಯರೇ, ನಿಮ್ಮ ವಿವೇಕ ಭರಿತ ಮಾತುಗಳಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ನಾವು ಯಾವಾಗಲೂ ಅವುಗಳನ್ನು ಪರಾಂಬರಿಸುತ್ತಾ ಅವುಗಳನ್ನು ನಮ್ಮ ಜೀವಿತದಲ್ಲಿ ಅನುಷ್ಠಾನಕ್ಕೆ ತರಲು ಪ್ರಯತ್ನಿಸುವೆವು.

ನಿಮಗೆ ಬಹಳ ಕೃತಜ್ಞತೆಗಳು.

**(The Review of Religions - December 2008)**

ಅನುವಾದ : ಮಂ. ಉ.

# ಉತ್ತಮ ಆಹಾರ ಕ್ರಮದ ಬಗ್ಗೆ ಪವಿತ್ರ ಖುರ್‌ಆನ್ ನೀಡುವ ಮಾರ್ಗದರ್ಶನ

✡ ಡಾಕ್ಟರ್ ಲತೀಫ್ ಖುರೈಶಿ FRCP ಲಂಡನ್

ಮಾನವನ ಆಧ್ಯಾತ್ಮಿಕ ಮತ್ತು ಶಾರೀರಿಕ ಆರೋಗ್ಯವು ಉತ್ತಮ ಆಹಾರ ಮತ್ತು ಪಾನೀಯಗಳ ಬಳಕೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ. ಆದುದರಿಂದ ಅದರ ಬಗ್ಗೆ ನಿಗಾವಹಿಸುವುದು ಅತ್ಯಾವಶ್ಯಕ ವಾಗಿದೆ. ಆರೋಗ್ಯದಾಯಕ ಸಮತೋಲನ ಜೀವಿತವನ್ನು ಸಂರಕ್ಷಿಸಿ ಕೊಂಡು ಹೋಗಲು ಯಾವ ಆಹಾರ ಪದಾರ್ಥಗಳನ್ನು ಉಪಯೋಗಿಸ ಬೇಕು ಮತ್ತು ಯಾವ ಆಹಾರ ಪದಾರ್ಥಗಳನ್ನು ಉಪಯೋಗಿಸಬಾರದು ಎಂಬುದರ ಬಗ್ಗೆ ಪವಿತ್ರ ಖುರ್‌ಆನ್ ಅನೇಕ ಮಾರ್ಗಸೂಚಿಗಳನ್ನು ನೀಡಿದೆ.

## ಆಹಾರದ ವಿವಿಧ ಘಟಕಗಳು

ಶರೀರವನ್ನು ಆರೋಗ್ಯದಿಂದಿಡಲು ಉತ್ತಮವಾದ ಸಮತೋಲನ ಆಹಾರವು ಮುಖ್ಯ ಪಾತ್ರವನ್ನು ವಹಿಸುತ್ತದೆ. ದ್ರವ ಪದಾರ್ಥವು, ಮುಖ್ಯವಾಗಿ ನೀರು ದೇಹವನ್ನು ಚೇತನದಿಂದಿರಿಸುತ್ತದೆ. ಅದು ದೇಹದಲ್ಲಿ ನಿರಂತರವಾಗಿ ನಡೆಯುತ್ತಿರುವ ಜೀವವನ್ನು ಕಾಪಾಡುವ ಚಟುವಟಿಕೆಗಳಿಗೆ ಅತ್ಯಾವಶ್ಯಕವಾಗಿದೆ.

ಮನುಷ್ಯನ ಜೀವರಕ್ಷಣೆಗೆ ನೀರು ಪ್ರಥಮ ಸ್ಥಾನದಲ್ಲಿದೆ. ಅನಂತರ ಮನುಷ್ಯನ ಕೆಲಸಗಳಿಗೆ ಶಕ್ತಿಯನ್ನು ಎಂದರೆ ಕ್ಯಾಲರಿಗಳನ್ನು ಒದಗಿಸುವ ಆಹಾರ ಪದಾರ್ಥಗಳೂ ಆವಶ್ಯಕವಾಗಿವೆ. ಒಬ್ಬ ವ್ಯಕ್ತಿಯ ಪ್ರಾಯ, ಲಿಂಗಭೇದ, ಶರೀರದ ಆಕಾರ ಮತ್ತು ಚಟುವಟಿಕೆಗಳಿಗೆ ಅನುಸಾರವಾಗಿ ಇವುಗಳ ಪ್ರಮಾಣವು ದಿನದಿಂದ ದಿನಕ್ಕೆ ವ್ಯತ್ಯಾಸಗೊಳ್ಳಬಹುದು. ಶರೀರದಲ್ಲಿ ನಡೆಯುತ್ತಿರುವ ಆಂತರಿಕ ಚಟುವಟಿಕೆಗಳಿಗೆ ತಕ್ಷಣ ಇಂಧನವನ್ನು ಪೂರೈಸುವುದು ಪ್ರಮುಖವಾಗಿ ಗ್ಲೂಕೋಸ್ ಆಗಿದೆ. ವಿವಿಧ ಕಾಳುಗಳು, ತರಕಾರಿ ಮತ್ತು ಹಣ್ಣು ಹಂಪಲುಗಳಲ್ಲಿರುವ ಇಂಗಾಲದೊಡನೆ ಜಲಜನಕ–ಆಮ್ಲಜನಕಗಳ ಶಕ್ತಿದಾಯಕ ಸಂಯೋಗ ಹೊಂದಿರುವ ಶರ್ಕರ ಪಿಷ್ಟದಿಂದ ಗ್ಲೂಕೋಸು ದೊರಕುತ್ತದೆ. ಗ್ಲೂಕೋಸ್ ಆಮ್ಲಜನಕದೊಂದಿಗೆ ರಕ್ತದಲ್ಲಿ ನಿರಂತರವಾಗಿ ಶರೀರದ ಕೋಶಗಳಲ್ಲಿ ಚಲಿಸುತ್ತಾ ಇರುತ್ತದೆ ಮತ್ತು ಅದು ದಿನದ ಎಲ್ಲಾ ಕ್ಷಣಗಳಲ್ಲಿಯೂ ದೇಹಕ್ಕೆ ಶಕ್ತಿಯನ್ನು ಪ್ರದಾನ ಮಾಡುತ್ತದೆ. ದೇಹಕ್ಕೆ ಶಕ್ತಿಯನ್ನು ಒದಗಿಸುವುದಕ್ಕೆ ಆವಶ್ಯಕವಾಗಿರುವ ಆಹಾರವು ಮಿತಿಮೀರಿ ಉಪಯೋಗಿಸಲ್ಪಟ್ಟಲ್ಲಿ ಅದು ಕೊಬ್ಬಿನ ರೂಪದಲ್ಲಿ ದೇಹದಲ್ಲಿ ಶೇಖರಿಸಲ್ಪಡುತ್ತದೆ. ತೂಕದ ದೃಷ್ಟಿಯಲ್ಲಿ ಪರಿಗಣಿಸುವುದಾದರೆ ಕೊಬ್ಬು ಅಷ್ಟೇ ತೂಕದ ಶರ್ಕರ ಪಿಷ್ಟಗಳಿಗಿಂತ ದುಪ್ಪಟ್ಟು ಕ್ಯಾಲರಿಗಳನ್ನು ಆವಶ್ಯಾನುಸಾರವಾಗಿ ಒದಗಿಸುತ್ತದೆ. ಇದೇ ಕಾರಣದಿಂದ ಕೊಬ್ಬನ್ನು ಶೇಖರಿಸಲು ಕಡಿಮೆ ಸ್ಥಳಾವಕಾಶವು ಶರೀರದೊಳಗೆ ಸಾಕಾಗುತ್ತದೆ.

ದೇಹದ ಕೋಶಗಳ ಬೆಳವಣಿಗೆ, ದುರಸ್ತೀಕರಣ ಮತ್ತು ಭರ್ತಿ ಮಾಡುವಿಕೆಗೆ ಇನ್ನಷ್ಟು ನಿರ್ಮಾಣ ಸಾಮಗ್ರಿಗಳು ಆವಶ್ಯಕವಾಗಿವೆ. ಅವುಗಳನ್ನು ಪ್ರೋಟೀನ್‌ಗಳೆಂದು ಕರೆಯುತ್ತಾರೆ. ಮಾನವ ಶರೀರವೇ ಈ ಪ್ರೋಟೀನ್‌ಗಳನ್ನು ಉತ್ಪಾದಿಸಲು ಶಕ್ತವಾಗಿದೆ. ಆದರೆ ಅವುಗಳ ತಯಾರಿಕೆಗಾಗಿ ಎಮಿನೋ ಆಸಿಡ್ಸ್ (Amino Acids) ಆವಶ್ಯಕವಾಗಿವೆ. ಇವುಗಳಲ್ಲಿ ಕೆಲವು ದೇಹದೊಳಗೆ ನಿರ್ಮಿಸಲ್ಪಡುತ್ತವೆ ಮತ್ತು ಬೇರೆ ಕೆಲವು ಮಾಂಸದಿಂದಲೂ ತರಕಾರಿಗಳಿಂದಲೂ ವಿಶಿಷ್ಟವಾಗಿ ಅಲಸಂಡೆ, ಅವರೆ ಮೊದಲಾದ ಸಸ್ಯ ಮತ್ತು ಬೀಜಗಳಿಂದಲೂ ದೊರಕುತ್ತವೆ. ಸಸ್ಯಜನ್ಯ ಪ್ರೋಟೀನುಗಳು ಶರೀರದ ಎಲ್ಲಾ ಆವಶ್ಯಕತೆಗಳನ್ನು ಪೂರೈಸಲಾರವು. ಆದುದರಿಂದ ಪ್ರಾಣಿಜನ್ಯ ಪದಾರ್ಥಗಳಿಂದ ಕೆಲವು ವಿಶಿಷ್ಟ ಅಮಿನೋ ಆಸಿಡ್ಸ್‌ಗಳನ್ನು ಆವಶ್ಯಕವಾಗಿ ಪಡೆಯಬೇಕಾಗುತ್ತದೆ.

ಉತ್ತಮವಾದ ಆಹಾರವು ದೇಹಕ್ಕೆ ಆವಶ್ಯಕವಾದ ಖನಿಜಗಳನ್ನೂ ಲವಣಗಳನ್ನೂ ಆವಶ್ಯಕವಾಗಿ ಒದಗಿಸುವುದಾಗಿರಬೇಕು. ಕ್ಯಾಲ್ಸಿಯಂ ಎಂಬ ಖನಿಜವು ದೇಹದ ಎಲುಬುಗಳಿಗೆ ಶಕ್ತಿಯನ್ನು ಒದಗಿಸುತ್ತದೆ. ಅದು ಮನುಷ್ಯನಿಗೆ ಅವನ ಶೈಶವದಿಂದಲೇ ಹಾಲಿನ ರೂಪದಲ್ಲಿ ಒದಗಿಸಲ್ಪಡಬೇಕಾಗುತ್ತದೆ. ಕಬ್ಬಿಣವು ದೇಹದೊಳಗೆ ಮುಖ್ಯ ಕೆಲಸಗಳನ್ನು ಮಾಡುತ್ತದೆ. ದೇಹದೊಳಗೆ ಕಬ್ಬಿಣದ ಒಂದು ಭಂಡಾರವು ಇದೆ. ಆದರೆ ಅದರಿಂದ ಉಪಯೋಗಿಸಲಾದುದನ್ನು ಆಹಾರದ ಮೂಲಕ ಭರ್ತಿ ಮಾಡಬೇಕಾಗುತ್ತದೆ. ಝಿಂಕ್ (ಸತುವು), ಮೆಗ್ನೇಶಿಯಮ್ ಮತ್ತು ಕೋಬಾಲ್ಟ್ ಮೊದಲಾದ ಇತರ ಅನೇಕ ಖನಿಜಗಳು ಮನುಷ್ಯನ ದೇಹದೊಳಗೆ ಮುಖ್ಯ ಕೆಲಸಗಳನ್ನು ಮಾಡುತ್ತವೆ. ತಿನ್ನಲು ಯೋಗ್ಯವಾದ ಮಾಂಸ ಪದಾರ್ಥಗಳು, ತಾಜಾ ಹಣ್ಣುಹಂಪಲುಗಳು ಮತ್ತು ತರಕಾರಿ ಗಳು ಈ ಎಲ್ಲಾ ಖನಿಜಗಳನ್ನು ಪೂರೈಕೆ ಮಾಡುತ್ತವೆ. ಸೋಡಿಯಂ ಮತ್ತು ಪೊಟಾಸಿಯಂ ದೇಹದ ಕೋಶಗಳ ಒಳಗೆ ಮತ್ತು ಹೊರಗೆ ಅತ್ಯಾವಶ್ಯಕ ಕೆಲಸಗಳನ್ನು ಈಡೇರಿಸುತ್ತವೆ. ಒಂದು ನಿಗದಿತ ಸಮಯದ ಪರಿಧಿಯಲ್ಲಿ ಈ ಖನಿಜಗಳ ಕೇಂದ್ರೀಕರಣವು ಯಾವಾಗಲೂ ಸ್ಥಿರವಾಗಿರುತ್ತದೆ. ಈ ಸೂಕ್ಷ್ಮ ಸಮತೋಲನವನ್ನು ಸುಸ್ಥಿತಿಯಲ್ಲಿ ಇರಿಸಲು ಜಟಿಲವಾದೊಂದು ವ್ಯವಸ್ಥೆಯು ರೂಪಿಸಲ್ಪಟ್ಟಿದೆ. ಕಿಡ್ನಿ (ಮೂತ್ರ ಜನಕಾಂಗ), ಕರುಳುಗಳು ಹಾಗೂ ಬೇರೆ ಕೆಲವು ಅಂಗಗಳು ಈ ಬಗ್ಗೆ ಮುಖ್ಯ ಕಾರ್ಯನಿರ್ವಹಿಸುತ್ತವೆ. ನಾವು ಉಪಯೋಗಿಸುವ ಉಪ್ಪು, ಹಣ್ಣುಗಳು ಮತ್ತು ತರಕಾರಿಗಳು ನಮಗೆ ಆವಶ್ಯಕವಾಗಿರುವ ಲವಣಗಳನ್ನು ಪೂರೈಕೆ ಮಾಡುತ್ತವೆ.

ಜೀವಸತ್ವಗಳು ಎರಡು ಬಗೆಯವುಗಳಾಗಿವೆ. ಕೆಲವು ಜೀವಸತ್ವ ಗಳು ದೇಹದೊಳಗೆ ಶೇಖರಿಸಲ್ಪಟ್ಟು ದೀರ್ಘಕಾಲ ಶರೀರದಿಂದ ಬಳಸಲ್ಪಡುತ್ತವೆ. ಇವುಗಳನ್ನು ಕೊಬ್ಬಿನಲ್ಲಿ ಕರಗುವ ಜೀವಸತ್ವಗಳೆಂದು ಕರೆಯಲಾಗುತ್ತದೆ. ಎ, ಡಿ ಮತ್ತು ಕೆ ಜೀವಸತ್ವಗಳು ಇವುಗಳಲ್ಲಿ ಮುಖ್ಯವಾದವುಗಳಾಗಿವೆ. ಹಾಲು, ಮೀನಿನ ಯಕೃತ್ತಿನ ತೈಲ ಎ ಮತ್ತು ಡಿ ಜೀವಸತ್ವಗಳನ್ನು ಒದಗಿಸುವ ಮೂಲವಸ್ತುಗಳಾಗಿವೆ. ಬೇರೆ ಜೀವ ಸತ್ವಗಳು ದೇಹದೊಳಗೆ ಸೀಮಿತ ಪರಿಮಿತಿಯಲ್ಲಿದ್ದು ಅವುಗಳನ್ನು ವ್ಯವಸ್ಥಿತವಾಗಿ ದೇಹಕ್ಕೆ ಪೂರೈಕೆ ಮಾಡಬೇಕಾಗುತ್ತದೆ. ಇವುಗಳನ್ನು ನೀರಿನಲ್ಲಿ ಕರಗುವ ಜೀವಸತ್ವಗಳು ಎಂದು ಕರೆಯುತ್ತಾರೆ. ಬಿ ಕಾಂಪ್ಲೆಕ್ಸ್ ಜೀವಸತ್ವವು ಹನ್ನೆರಡು ಅಥವಾ ಹೆಚ್ಚು ಭಾಗಗಳನ್ನು ಹೊಂದಿದೆ. ಈ ಜೀವಸತ್ವ ಮತ್ತು ಸಿ ಜೀವಸತ್ವ ನೀರಿನಲ್ಲಿ ಕರಗುವವುಗಳಾಗಿವೆ. ತಾಜಾ ಹಣ್ಣು ಮತ್ತು ತರಕಾರಿಗಳು ಈ ಜೀವಸತ್ವಗಳನ್ನು ಹೊಂದಿವೆ.

ಆಹಾರವಾಗಿ ಉಪಯೋಗಿಸುವ ಕೆಲವು ವಸ್ತುಗಳು ರೋಗಶಮನಕಾರಿ ಗುಣಗಳನ್ನು ಹೊಂದಿವೆ.

ಚಾ, ಕಾಫಿ, ಮದ್ಯರಹಿತ ಕೋಲಾ ಪಾನೀಯಗಳು, ಮದ್ಯ ಪಾನೀಯಗಳು, ಸಿಗರೇಟು, ಚುಟ್ಟಾ ಮತ್ತಿತರ ಹೊಗೆಸೊಪ್ಪಿನ ಪದಾರ್ಥಗಳು ಕೆಲವು ದೇಶಗಳಲ್ಲಿ ಆಹಾರದ ಅಂಶಗಳಾಗಿ

ಬಳಸಲ್ಪಡುತ್ತಿದ್ದು ಅವುಗಳು ಮಾನವರ ಮೆದುಳಿನ ಮೇಲೆ ಎದ್ದುಕಾಣುವ ಪ್ರಭಾವ ಬೀರುತ್ತವೆ. ಚಾ, ಕಾಫಿ ಮತ್ತು ಕೋಲಾ ಪಾನೀಯಗಳಲ್ಲಿರುವ ಕಫೇನ್ ಮನುಷ್ಯನ ಮೆದುಳನ್ನು ಉತ್ತೇಜಿಸುತ್ತದೆ. ಮೆದುಳಿನ ಮೇಲೆ ಬೀರುವ ಪ್ರಭಾವದಿಂದಾಗಿ ಕಫೇನ್ ನೆಮ್ಮದಿಯ ಭಾವನೆಯನ್ನು ಮತ್ತು ಚುರುಕನ್ನು ಉಂಟುಮಾಡುತ್ತದೆ. ಇವುಗಳ ಉಪಯೋಗವು ವಾಡಿಕೆಯ ಅಭ್ಯಾಸವನ್ನುಂಟುಮಾಡುವುದು ಮತ್ತು ಕೆಲವರಲ್ಲಿ ಅದೊಂದು ಚಟವಾಗಿ ಮಾರ್ಪಾಡಾಗುವುದು. ಮದ್ಯಪಾನೀಯ ಗಳಲ್ಲಿರುವ ಈಥೈಲ್ ಅಲ್ಕೋಹಾಲ್ (ಮದ್ಯಸಾರ) ಮನುಷ್ಯನ ಮೆದುಳಿನಲ್ಲಿ ಖಿನ್ನತೆಯನ್ನುಂಟುಮಾಡುತ್ತದೆ. ಇದನ್ನು ಕುಡಿಯುವವರಲ್ಲಿ ಇದು ಪ್ರಾರಂಭದಲ್ಲಿ ಒಂದು ರೀತಿಯ ಸ್ವಸ್ಥತೆಯ ಮತ್ತು ಉಲ್ಲಾಸದ ಭಾವನೆಯನ್ನುಂಟುಮಾಡುತ್ತದೆ. ಅನಂತರ ಅದರ ಹೆಚ್ಚಿನ ಬಳಕೆಯಿಂದ ಮೆದುಳಿನ ಚಟುವಟಿಕೆಗಳು ಅಸ್ತವ್ಯಸ್ತಗೊಳ್ಳುತ್ತವೆ. ಕೊನೆಗೆ ಅದು ಪ್ರಜ್ಞಾಹೀನತೆಗೂ ಸಾವಿಗೂ ಕೊಂಡೊಯ್ಯುತ್ತದೆ. ಇದು ಚಟವನ್ನೂ ಅಭ್ಯಾಸವನ್ನೂ ಉಂಟುಮಾಡುವ ದ್ರವ್ಯವಾಗಿದ್ದು ಇದು ಯಕೃತ್ತು, ಹೃದಯ, ಮೆದುಳು ಮತ್ತು ನರಮಂಡಲದ ಇತರ ಅಂಗಾಂಗಳ ಮೇಲೆ ಹಾನಿಕರವಾದ ಪರಿಣಾಮವನ್ನುಂಟುಮಾಡುತ್ತದೆ. ಹೊಗೆ ಸೊಪ್ಪಿನಲ್ಲಿ ನಿಕೋಟಿನ್ ಇದೆ. ಅದು ನರಮಂಡಲದ ಮೇಲೆ ಸಂಮಿಶ್ರಿತ ದೋಷಕರ ಪರಿಣಾಮವನ್ನುಂಟುಮಾಡುತ್ತದೆ. ಇದು ಸಹ ಅಭ್ಯಾಸ ವನ್ನುಂಟುಮಾಡುತ್ತದೆ ಮತ್ತು ಚಟವಾಗಿ ಪರಿಣಮಿಸುವ ವಸ್ತುವಾಗಿದೆ. ಕ್ಯಾನ್ಸರ್ ಮತ್ತು ಹೃದಯ ರೋಗಗಳನ್ನುಂಟುಮಾಡುವ ಅಪಾಯಕರವೂ ವಿಷಕಾರಿಯೂ ಆದ ಅನೇಕ ರಾಸಾಯನಿಕ ಪದಾರ್ಥಗಳು ಸಹ ಹೊಗೆಸೊಪ್ಪಿನಲ್ಲಿದೆ.

ನಾವು ತಿನ್ನುವ ಎಲ್ಲಾ ಆಹಾರ ಪದಾರ್ಥಗಳು ಜೀರ್ಣಿಸಲ್ಪಡುತ್ತಿಲ್ಲ ವಾದರೂ ಅವುಗಳು ಜಠರ ಮತ್ತು ಕರುಳುಗಳಲ್ಲಿ ಮುಖ್ಯ ಕೆಲಸಗಳನ್ನು ನಿರ್ವಹಿಸುತ್ತವೆ. ತರಕಾರಿ, ಹಣ್ಣುಗಳು ಮತ್ತು ತವುಡು ತೆಗೆಯದ ಧಾನ್ಯಗಳು ನಾರು ಪದಾರ್ಥಗಳನ್ನು ಹೊಂದಿದ್ದು ಅವು ಆಹಾರ ಪದಾರ್ಥಗಳಿಗೆ ದೊಡ್ಡ ಗಾತ್ರವನ್ನು ಕೊಡುತ್ತವೆ ಮತ್ತು ಅವುಗಳಿಂದ ವಿಶಿಷ್ಟವಾಗಿ ಸಕ್ಕರೆ ಮೊದಲಾದ ಸತ್ವಗಳನ್ನು ಹೊಟ್ಟೆಯಲ್ಲಿ ಹೀರಲು ಅನುಕೂಲಮಾಡಿಕೊಡುತ್ತವೆ.

ಆಹಾರ ಪದಾರ್ಥಗಳನ್ನು ರುಚಿಕರವನ್ನಾಗಿ ಮಾಡಲು ಸಾಂಬಾರ ಮಸಾಲೆಗಳನ್ನು ಉಪಯೋಗಿಸಲಾಗುತ್ತದೆ. ನೀರುಳ್ಳಿ, ಬೆಳ್ಳುಳ್ಳಿ, ಶುಂಠಿ, ಮಿಂಟ್ (ಸುವಾಸನೆಯ ಸಸ್ಯ), ಪಾರ್‌ಸ್ಲೇ (ಒಂದು ರೀತಿಯ ಸೊಪ್ಪು), ಲವಂಗ, ದಾಲ್ಚಿನ್ನಿ ಚೆಕ್ಕೆ, ಕೊತ್ತಂಬರಿ, ಏಲಕ್ಕಿ, ಕರಿಮೆಣಸು ಮೊದಲಾದ ವಸ್ತುಗಳನ್ನು ಅವುಗಳ ಸುವಾಸನೆಯಿಂದ ಕೂಡಿದ ರುಚಿಗಾಗಿ, ಕೆಲವು ಸಾರಿ ಮೀನು ಮೊದಲಾದ ಸಮುದ್ರೋತ್ಪನ್ನಗಳ ಕೆಟ್ಟವಾಸನೆಯನ್ನು ಮರೆಮಾಡಲು ಹಾಗೂ ಆಹಾರ ಪದಾರ್ಥಕ್ಕೆ ವಿಶಿಷ್ಟ ರುಚಿಯನ್ನು ಮತ್ತು ಪರಿಮಳ ಕೊಡಲಿಕ್ಕಾಗಿ ಬಳಸಲಾಗುತ್ತದೆ. ಆಹಾರ ಪದಾರ್ಥಗಳಿಗೆ ಆಹ್ಲಾದಕರವಾದ ಬಣ್ಣವನ್ನು ಕೊಡಲು ಬೇರೆ ಕೆಲವು ವಸ್ತುಗಳನ್ನು ಬಳಸಲಾಗುತ್ತದೆ. ಅರಸಿನ, ಕುಂಕುಮ ಕೇಸರಿ ಮತ್ತು ಕೆಂಪು ಮೆಣಸುಗಳು ಈ ವಿಭಾಗಕ್ಕೆ ಸೇರುವ ಕೃಷಿಯುತ್ಪನ್ನಗಳಾಗಿವೆ. ಆದರೆ ಈಗ ಅನೇಕ ಕೃತ್ರಿಮವಾಗಿ ನಿರ್ಮಿತ ಬಣ್ಣಗಳು ಈ ಉದ್ದೇಶಕ್ಕಾಗಿ ಬಳಸಲ್ಪಡುತ್ತವೆ. ಜೇನು ಮತ್ತು ಸಕ್ಕರೆಯನ್ನು ಸಿಹಿ ಮಾಡುವ ವಸ್ತುಗಳಾಗಿ ಬಳಸಲಾಗುತ್ತದೆ. ಅವುಗಳನ್ನು ಆಹಾರವನ್ನು ಕೆಡದಂತೆ ರಕ್ಷಿಸಲು ಸಹ ಉಪಯೋಗಿಸ ಬಹುದಾಗಿದೆ. ಈಗ ಅನೇಕ ರಾಸಾಯನಿಕ ಪದಾರ್ಥಗಳನ್ನು ಆಹಾರ ವಸ್ತುಗಳಿಗೆ ಸಂಬಂಧಿಸಿದ ಕೈಗಾರಿಕೆಗಳಲ್ಲಿ ಸಿಹಿಗೊಳಿಸುವ ಪದಾರ್ಥ ಗಳಾಗಿ ಸರಕಾರದ ಅಂಗೀಕಾರದ ಬಳಿಕ ಉಪಯೋಗಿಸಲಾಗುತ್ತಿದೆ.

## ಸಮತೋಲನದ ಆಹಾರ

ಒಬ್ಬ ವ್ಯಕ್ತಿಯ ದೈನಂದಿನ ಆವಶ್ಯಕತೆಗಳನ್ನು ಈಡೇರಿಸುವ ಆಹಾರ ಮತ್ತು ಪಾನೀಯ, ಶಕ್ತಿ ನೀಡುವ ಮತ್ತು ಕೋಶಗಳ ಪುನರುಜ್ಜೀವನಗೊಳಿಸುವ, ಜೀವಸತ್ವಗಳು ಮತ್ತು ಖನಿಜಗಳನ್ನು ಒಳಗೊಂಡ, ಆದರೆ ಯಾವುದೇ ಕೆಟ್ಟ ಪರಿಣಾಮವನ್ನು ಉಂಟು ಮಾಡದ ಆಹಾರವೇ ಸಮತೋಲನದ ಆಹಾರವಾಗಿದೆ. ಪ್ರತಿಯೊಬ್ಬನಿಗೆ ಆತನ ವಯಸ್ಸು, ದೇಹದ ಎತ್ತರ ಮತ್ತು ಚಟುವಟಿಕೆಗಳಿಗೆ ಅನುಸಾರ ವಾಗಿ ಆಹಾರದ ಪ್ರಮಾಣವನ್ನು ನಿಗದಿಪಡಿಸಬೇಕಾಗಿದೆ. ಒಬ್ಬ ಶಿಶುವಿನ ಸಮತೋಲನದ ಆಹಾರ ಒಬ್ಬ ಹದಿಹರೆಯದವನ ಆಹಾರದ ಪ್ರಮಾಣ ಕ್ಕಿಂತ ಸಂಪೂರ್ಣವಾಗಿ ಬೇರೆಯಾಗಿರುವುದು. ದಿನವಿಡೀ ಕೆಲಸ ಮಾಡುವ ಒಬ್ಬ ತೋಟಗಾರನ ಆಹಾರದ ಆವಶ್ಯಕತೆಯು ಕಚೇರಿಯಲ್ಲಿ ಕುಳಿತು ಕೆಲಸಮಾಡುವವನ ಆವಶ್ಯಕತೆಗಳಿಗಿಂತ ವಿಭಿನ್ನವಾಗಿರುವುದು. ಗರ್ಭಿಣಿ ಮಹಿಳೆಯ ಆಹಾರದ ಆವಶ್ಯಕತೆಗಳು ಗರ್ಭಧಾರಣೆ ಮಾಡದ ಮಹಿಳೆಯ ಆವಶ್ಯಕತೆಗಿಂತ ಬೇರೆಯೇ ಆಗಿರುವುದು.

ನವಜಾತ ಶಿಶುವಿಗೆ ಅತ್ಯಂತ ಅನುಯೋಜ್ಯವಾದ ಸಮತೋಲನದ ಆಹಾರ ಅದರ ತಾಯಿಯ ಹಾಲೇ ಆಗಿದೆ. ಅದು ಮಗುವಿಗೆ ಆವಶ್ಯಕವಾದ ದ್ರವವನ್ನೂ ಕ್ಯಾಲರಿಗಳನ್ನೂ ಪ್ರೋಟೀನ್‌ಗಳನ್ನೂ ಕ್ಯಾಲ್ಸಿಯಂಗಳನ್ನೂ ಮತ್ತಿತರ ಖನಿಜಗಳನ್ನೂ ಕೆಲವು ಜೀವಸತ್ವ ಗಳನ್ನೂ ಒದಗಿಸುತ್ತದೆ. ಹಾಲಿನ ಮೂಲಕ ತಾಯಿಯಿಂದ ಮಗುವಿಗೆ ಅನೇಕ ಸಂರಕ್ಷಕ ಪ್ರೋಟೀನ್‌ಗಳು ವರ್ಗಾಯಿಸಲ್ಪಡುವುದರಿಂದ ಅವು ಮಗುವನ್ನು ಅನೇಕ ರೋಗಗಳಿಂದ ರಕ್ಷಿಸುತ್ತವೆ. ಮಗು ಬೆಳೆಯುತ್ತಾ ಹೋಗುವಾಗ ಅದರ ದೇಹದೊಳಗೆ ಸಂಗ್ರಹಿಸಲ್ಪಟ್ಟ ಕಬ್ಬಿಣ ಮೊದಲಾದ ಖನಿಜಗಳ ಭಂಡಾರವು ಬರಿದಾಗುತ್ತಾ ಹೋಗುವುದರಿಂದ ಅವುಗಳನ್ನು ಭರ್ತಿ ಮಾಡಲು ಸರಿಯಾಗಿ ತಯಾರಿಸಲಾದ ಪೂರಕ ಆಹಾರವನ್ನು ಮಗುವಿಗೆ ಕೊಡುವುದು ಆವಶ್ಯಕವಾಗುತ್ತದೆ.

ಒಬ್ಬ ಗರ್ಭಿಣಿ ಮಹಿಳೆಗೆ ಕೊಡಬೇಕಾದ ಸಮತೋಲನದ ಆಹಾರವನ್ನು ನಿರ್ಧರಿಸುವಾಗ ಗರ್ಭಸ್ಥ ಶಿಶುವಿನ ಆವಶ್ಯಕತೆಗಳನ್ನೂ ಪರಿಗಣಿಸಬೇಕು. ಆದರೆ ಮೂಲತಃ ಮೇಲೆ ಬರೆದ ತತ್ವಗಳನ್ನು ಅನುಸರಿಸಬೇಕು. ಶರೀರದ ಚಟುವಟಿಕೆಗಳು ಹೆಚ್ಚಾಗುವಾಗ ಗ್ಲೂಕೋಸಿನ ಬಳಕೆಯು ಹೆಚ್ಚಾಗುತ್ತದೆ ಮತ್ತು ಇದು ಆರೋಗ್ಯದ ಮೇಲೆ ಉತ್ತಮ ಪರಿಣಾಮವನ್ನು ಬೀರುತ್ತದೆ. ದೇಹದ ಚಟುವಟಿಕೆಗಳು ಹೆಚ್ಚಾಗುವಾಗ ದೇಹಕ್ಕೆ ಹೆಚ್ಚು ಶಕ್ತಿ ಬೇಕಾಗುತ್ತದೆ. ಆದುದರಿಂದ ಆಹಾರದ ಆವಶ್ಯಕತೆಯು ಹೆಚ್ಚಾಗುತ್ತದೆ.

ಮಕ್ಕಳಿಗೆ, ಹದಿಹರೆಯದವರಿಗೆ, ಮಹಿಳೆಯರಿಗೆ, ಪುರುಷರಿಗೆ ಮತ್ತು ವೃದ್ಧರಿಗೆ ನಿಗದಿಪಡಿಸುವ ಸಮತೋಲನದ ಆಹಾರದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಶುದ್ಧವಾದ, ಮಾಲಿನ್ಯರಹಿತ ಕುಡಿಯಲು ಯೋಗ್ಯವಾದ ನೀರು ಇರಬೇಕು.

ಸಮುದ್ರದ ಮೀನು ಧಾರಾಳ ಪ್ರೋಟೀನುಗಳನ್ನು ಒದಗಿಸುತ್ತದೆ. ಅಲ್ಲದೆ ಕೆಲವು ಜೀವಸತ್ವಗಳನ್ನೂ ತೈಲಗಳನ್ನೂ ಅವು ನೀಡುತ್ತವೆ. ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಇವುಗಳು ಸಹಾಯಕವಾಗಿವೆ. ಸಮತೋಲನದ ಆಹಾರ ಎಂದರೆ ಮಿತಿಮೀರಿ ಹೆಚ್ಚು ಆಗಿರದ ಮತ್ತು ಆವಶ್ಯಕತೆಗಿಂತ ಕಡಿಮೆಯಾಗಿರದ ಆರೋಗ್ಯದಾಯಕ ಆಹಾರ ವಾಗಿದೆ. ಮೇಲಿನ ಪದಾರ್ಥಗಳನ್ನು ಮಿತಿಮೀರಿ ಉಪಯೋಗಿಸಿದರೆ ಅಥವಾ ಬಹಳ ಕಡಿಮೆ ಬಳಸಿದರೆ ಆರೋಗ್ಯವು ಕೆಡುತ್ತದೆ. ಔಷಧೀಯ ಗುಣಗಳನ್ನು ಹೊಂದಿದ ವಸ್ತುಗಳು ಆರೋಗ್ಯದಾಯಕ ಆಹಾರಕ್ರಮದ ಭಾಗವಾಗಿರಬಾರದು. ಹಾಗೆಯೇ ಸಾಂಬಾರ ಮಸಾಲೆಗಳು, ಬಣ್ಣ ನೀಡುವ ವಸ್ತುಗಳು ಮತ್ತು ಕೆಡದಂತೆ ರಕ್ಷಿಸುವ ರಾಸಾಯನಿಕಗಳನ್ನು

ಉಪಯೋಗಿಸದಿರುವುದು ಉತ್ತಮವಾಗಿದೆ. ಆದರೆ ಯಾವುದಾದರೂ ರೋಗ ಚಿಕಿತ್ಸೆಗಾಗಿ ಇವುಗಳನ್ನು ಬಳಸಬಹುದು.

## ಉಪಯೋಗಿಸಲು ಅನುಮತಿಸಲಾದ ಆಹಾರ ಪದಾರ್ಥಗಳು

ಪವಿತ್ರ ಖುರ್‌ಆನ್ ಉತ್ತಮ ಆಹಾರ ಕ್ರಮದ ಬಗ್ಗೆ ಅನೇಕ ಮಾರ್ಗಸೂಚಿಗಳನ್ನು ನೀಡಿದೆ. ಯಾವ ಆಹಾರಪದಾರ್ಥಗಳನ್ನು ತಿನ್ನಬಹುದೆಂಬುದರ ಕುರಿತು ಪವಿತ್ರ ಖುರ್‌ಆನ್ ಉಪದೇಶಿಸಿದೆ ಮತ್ತು ಆ ಉಪದೇಶಗಳನ್ನು ಪುನರಾವರ್ತಿಸಿದೆ. ಈ ಕೆಳಗಿನ ವಚನ ಈ ಬಗ್ಗೆ ಹೀಗೆ ಹೇಳುತ್ತದೆ:

*"ಓ ಮನುಷ್ಯರೇ, ನೀವು ಭೂಮಿಯಲ್ಲಿರುವ ಧರ್ಮಬದ್ಧವಾದವು ಮತ್ತು ಹಿತಕರವಾದವುಗಳನ್ನು ತಿನ್ನಿರಿ.*

*(ಪವಿತ್ರ ಖುರ್‌ಆನ್ 2 : 169)*

ಈ ವಚನದಲ್ಲಿ ಬಳಸಲಾದ 'ತಯ್ಯಿಬ್' ಎಂಬ ಅರಬಿ ಶಬ್ದದ ಅರ್ಥ 'ಹಿತಕರ'ವೆಂದೂ 'ಉತ್ತಮ'ವೆಂದೂ ಆಗಿದೆ. ಇದನ್ನು 'ಆರೋಗ್ಯ ದಾಯಕ, ಶುಚಿಯಾದ ಮತ್ತು ಪರಿಶುದ್ಧವಾದ' ಎಂದೂ ಭಾಷಾಂತರಿಸ ಬಹುದು. ಆದುದರಿಂದ ನಾವು ಬಳಸುವ ಆಹಾರ ಮತ್ತು ನೀರು ಮಾಲಿನ್ಯರಹಿತವೂ ಪರಿಶುದ್ಧವೂ ಆರೋಗ್ಯದಾಯಕವೂ ಆಗಿರಬೇಕು. ಇದು ಆಧುನಿಕ ಆರೋಗ್ಯ ವಿಜ್ಞಾನದ ಮೂಲಸಿದ್ಧಾಂತಗಳಲ್ಲಿ ಒಂದಾಗಿದೆ. ಮಾಲಿನ್ಯಭರಿತ ದ್ರವ ಪದಾರ್ಥಗಳನ್ನು ಕುಡಿಯುವುದರಿಂದ ಕಾಲೆರಾ, ರಕ್ತಭೇದಿ, ಟೈಫಾಯ್ಡ್ ಮತ್ತು ಹೆಪಟೈಟಿಸ್ (ಕಾಮಾಲೆ) ಮೊದಲಾದ ಮಾರಕ ರೋಗಗಳು ಉಂಟಾಗುತ್ತವೆ. ಕುಡಿಯುವ ನೀರನ್ನು ಕ್ರಿಮಿಮುಕ್ತವನ್ನಾಗಿ ಮಾಡಲು ಶುದ್ಧೀಕರಿಸಲಾಗುತ್ತದೆ. ಹಾಲನ್ನು ಪಾಶ್ಚರೀಕರಣದಿಂದ ಕ್ರಿಮಿಮುಕ್ತವನ್ನಾಗಿ ಮಾಡಲಾಗುತ್ತದೆ. ಬೇಯಿಸದ ಮತ್ತು ಕೊಳೆತ ತರಕಾರಿಗಳೂ ಹಣ್ಣುಹಂಪಲುಗಳೂ ಹಾನಿಕರವಾಗ ಬಹುದು. ಇದೇ ರೀತಿ ಮಾಂಸ ಮತ್ತು ಕ್ರೀಮ್ ಸೂಕ್ಷ್ಮಾಣುಗಳಿಂದ ಕೂಡಿದ್ದರೆ ವಿಷಕರವಾಗಬಹುದು.

ಈ ಎಲ್ಲಾ ಅಪಾಯಗಳಿಂದ ಮುಕ್ತರಾಗಲು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

*"ತಮಗೆ (ತಿನ್ನಲು) ಧರ್ಮಬದ್ಧಗೊಳಿಸಿದುದು ಯಾವುದೆಂದು ಅವರು ನಿನ್ನೊಡನೆ ಕೇಳುತ್ತಾರೆ. ಹೇಳು: 'ಪರಿಶುದ್ಧವಾದವು ಎಲ್ಲವೂ ನಿಮಗೆ ಧರ್ಮಬದ್ಧಗೊಳಿಸಲ್ಪಟ್ಟಿವೆ.'" (5 : 5)*

ಈ ವಚನದಲ್ಲಿ "ತಯ್ಯಿಬ್" ಶಬ್ದದ ಬಹುವಚನವಾದ "ತಯ್ಯಿಬಾತ್" ಎಂಬ ಅರಬಿ ಪದವನ್ನು ಬಳಸಲಾಗಿದೆ.

ನೀರಿನ ಪ್ರಾಮುಖ್ಯತೆ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*"ಪ್ರತಿಯೊಂದು ಜೀವಿಯನ್ನು ನಾವು ನೀರಿನಿಂದ ಸೃಷ್ಟಿಸಿದೆವು." (21:13)*

ಹಾಲು ಉತ್ತಮವೂ ಹಿತಕರವೂ ಆಗಿರುವ ಆಹಾರ ಪದಾರ್ಥವಾಗಿದೆ ಎಂದು ಈ ಕೆಳಗಿನ ಪವಿತ್ರ ಖುರ್‌ಆನ್ ವಚನದಲ್ಲಿ ಸೂಚಿಸಲಾಗಿದೆ.

*"ದಿಟವಾಗಿಯೂ ಜಾನುವಾರುಗಳಲ್ಲೂ ನಿಮಗೊಂದು ಪಾಠವಿದೆ. ಅವುಗಳ ಹೊಟ್ಟೆಯಲ್ಲಿರುವ ಸೆಗಣಿ ಮತ್ತು ರಕ್ತದ ಮಧ್ಯದಿಂದ ಶುದ್ಧವೂ ಕುಡಿಯುವವರಿಗೆ ರುಚಿಕರವೂ ಆದ ಹಾಲನ್ನು ನಾವು ನಿಮಗೆ ನೀಡುತ್ತೇವೆ." (16:67)*

ಜಾನುವಾರುಗಳು ತಿನ್ನುವ ಹುಲ್ಲು ಮತ್ತು ಸಸ್ಯ ಪದಾರ್ಥಗಳನ್ನು ರುಚಿಕರವೂ ಪೌಷ್ಟಿಕವೂ ಆದ ಪಾನೀಯವಾಗಿ ಅವು ಪರಿವರ್ತಿಸುತ್ತವೆ ಎಂಬುದನ್ನು ಈ ವಚನ ಸುಂದರವಾಗಿ ವಿವರಿಸುತ್ತದೆ. ಹಾಲಿನಲ್ಲಿ ಪ್ರೋಟೀನ್‌ಗಳು, ಸಕ್ಕರೆ, ಕೊಬ್ಬು, ಕ್ಯಾಲ್ಸಿಯಮ್ ಮತ್ತು ಜೀವಸತ್ವಗಳು ಇವೆ. ಶಿಶುಗಳಿಗೆ ಮತ್ತು ಚಿಕ್ಕ ಮಕ್ಕಳಿಗೆ ಹಾಲಿನ ಆವಶ್ಯಕತೆಯ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

*"ಮನುಷ್ಯನು ತನ್ನ ತಂದೆ ತಾಯಂದಿರಿಗೆ ಒಳಿತು ಮಾಡಬೇಕೆಂದು ನಾವು ಆಜ್ಞಾಪಿಸಿದ್ದೇವೆ. ಅವನ ತಾಯಿ ಕಷ್ಟ ಅನುಭವಿಸಿ ಅವನನ್ನು ಗರ್ಭಹೊತ್ತಳು ಹಾಗೂ ಕಷ್ಟ ಸಹಿಸಿ ಹೆತ್ತಳು. ಅವನ ಗರ್ಭಧಾರಣೆ ಮತ್ತು ಹಾಲೂಡಿಸುವ ಕಾಲಾವಧಿ (ಕನಿಷ್ಠ) ಮೂವತ್ತು ತಿಂಗಳು ಗಳಾಗಿವೆ." (46:16)*

ತಾಯಿಯ ಹಾಲು ಅಣುಮುಕ್ತವಾಗಿದೆ. ಅದನ್ನು ಕುಡಿಸುವ ಮೊದಲು ಪಾಶ್ಚರೀಕರಣಗೊಳಿಸುವುದಾಗಲಿ, ಕುದಿಸುವುದಾಗಲಿ ಅಗತ್ಯವಿಲ್ಲ. ನವಜಾತ ಶಿಶುಗಳಿಗೆ ಅತ್ಯುತ್ತಮ ಆಹಾರವು ತಾಯಿಯ ಹಾಲಾಗಿದೆ. ರೋಗಪ್ರತಿಬಂಧಕ ಘಟಕಗಳು ತಾಯಿಯ ಹಾಲಿನ ಮೂಲಕ ಶಿಶುವಿಗೆ ವರ್ಗಾಯಿಸಲ್ಪಡುತ್ತವೆ. ಮಗುವಿಗೆ ತಾಯಿಯ ಹಾಲಿಗೆ ಬದಲಾಗಿ ಕೃತಕವಾಗಿ ತಯಾರಿಸಿದ ಆಹಾರ ಪದಾರ್ಥಗಳನ್ನು ನೀಡುವ ಒಂದು ಸಂಪ್ರದಾಯವು ಕೆಲಕಾಲ ಜಾರಿಯಲ್ಲಿದ್ದಿತು. ಆದರೆ ವೈದ್ಯರು ಮತ್ತು ವಿಜ್ಞಾನಿಗಳು ಇಂದು ಮೆಲ್ಲಮೆಲ್ಲನೆ ತಾಯಿಯ ಹಾಲಿನ ಮಹತ್ವವನ್ನು ಅರಿಯುತ್ತಾ ಇದ್ದಾರೆ.

ಮಗುವಿಗೆ ಎಷ್ಟು ಕಾಲ ಹಾಲೂಡಿಸಬೇಕು ಎಂಬುದರ ಬಗ್ಗೆ ಪವಿತ್ರ ಖುರ್‌ಆನ್ ಉಪದೇಶಿಸುತ್ತದೆ. ಆದರೆ ವ್ಯಕ್ತಿಗತ ಸಂದರ್ಭ ಗಳಿಗನುಸಾರವಾಗಿ ಈ ಕಾಲಾವಧಿಯನ್ನು ವ್ಯತ್ಯಾಸ ಮಾಡುವ ಅನುಮತಿ ಸಹ ಅದು ನೀಡುತ್ತದೆ. ಈ ವಚನ ನೋಡಿರಿ:

*"ತಾಯಂದಿರು ತಮ್ಮ ಶಿಶುಗಳಿಗೆ ಪೂರ್ಣವಾಗಿ ಎರಡು ವರ್ಷಗಳ ಕಾಲ ಮೊಲೆಯುಣ್ಣಿಸಬೇಕಾಗಿದೆ. ಇದು (ನಿಶ್ಚಿತ ಕಾಲದವರೆಗೆ) ಸ್ತನ್ಯಪಾನವನ್ನು ಪೂರ್ಣಗೊಳಿಸಲು ಬಯಸುವವರಿಗೆ (ಇರುವ ಆದೇಶವಾಗಿದೆ)." (2 : 234)*

ಪವಿತ್ರ ಖುರ್‌ಆನ್ ಪ್ರಸ್ತಾಪಿಸಿರುವ ಇನ್ನೊಂದು ಪಾನೀಯ ಜೇನು ಆಗಿದೆ. ಅದರ ಬಗ್ಗೆ ಹೀಗೆ ಹೇಳಿದೆ:

*"ನಿನ್ನ ಪ್ರಭು ಜೇನು ನೊಣಕ್ಕೆ ವಹ್ಯ್ (ಸಂದೇಶ) ನೀಡಿದನು: 'ಬೆಟ್ಟಗಳಲ್ಲೂ ವೃಕ್ಷಗಳಲ್ಲೂ ಮನುಷ್ಯರು ನಿರ್ಮಿಸುವ ಚಪ್ಪರಗಳಲ್ಲೂ ಗೂಡುಕಟ್ಟು, ಅನಂತರ ಎಲ್ಲ ಫಲವರ್ಗಗಳಿಂದ ನೀನು ತಿನ್ನು. ನಿನ್ನ ಪ್ರಭು ನಿಶ್ಚಯಿಸಿದ ಮಾರ್ಗದಲ್ಲಿ ವಿಧೇಯತೆಯಿಂದ ಸಂಚರಿಸು. ಅವುಗಳ ಹೊಟ್ಟೆಯಿಂದ ವಿವಿಧ ವರ್ಣಗಳಿಂದ ಕೂಡಿದ ಒಂದು ಪಾನೀಯ ಹೊರಬರುತ್ತದೆ. ಅದರಲ್ಲಿ ಜನರಿಗೆ ರೋಗಶಮನವಿದೆ. ನಿಶ್ಚಯವಾಗಿಯೂ ಅದರಲ್ಲಿ ಚಿಂತಿಸುವವರಿಗೆ ದೃಷ್ಟಾಂತವಿದೆ." (16 : 69-70)*

ಜೇನು ತಯಾರಿಕೆಯ ವಿಧಾನವನ್ನು ಸುಂದರವಾಗಿ ವಿವರಿಸ ಲಾಗಿದೆ. ವಿವಿಧ ರೀತಿಯ ಜೇನುಗಳು ವಿವಿಧ ಗುಣಗಳನ್ನು ಹೊಂದಿವೆಯೆಂದು ಹೇಳಿ ಅವುಗಳ ಬಗ್ಗೆ ಸಂಶೋಧನೆ ನಡೆಸಲು ಆಹ್ವಾನಿಸಲಾಗಿದೆ. ಪುಷ್ಪರೇಣುಗಳಿಂದ ಅಲರ್ಜಿಗೆ ಪಾತ್ರರಾಗುವವರನ್ನು ಜೇನು ಕಡಿಮೆ ಸಂವೇದನಶೀಲರನ್ನಾಗಿ ಮಾಡಿ ಅವರಿಗೆ ಗುಣಕರ ವಾಗುತ್ತದೆ ಮತ್ತು ಹೇಫಿವರ್ (ಜ್ವರ) ಮತ್ತು ಅಸ್ತಮಾ ಪೀಡಿತರಿಗೆ ಜೇನು ಹಿತಕರವಾಗಿದೆ ಎಂದು ನಮಗೆ ತಿಳಿದಿದೆ.

ಧ್ಯಾನಗಳನ್ನು ಮತ್ತು ಹಣ್ಣುಗಳನ್ನು ಆಹಾರ ಪದಾರ್ಥಗಳಾಗಿ ಪವಿತ್ರ ಖುರ್‌ಆನ್ ಹೀಗೆ ವಿವರಿಸುತ್ತದೆ:

"ನಿರ್ಜೀವವಾದ ಭೂಪ್ರದೇಶ ಅವರಿಗೊಂದು ದೃಷ್ಟಾಂತವಾಗಿದೆ. ನಾವು ಅದನ್ನು ಜೀವಂತಗೊಳಿಸಿ, ಅದರಿಂದ ಧಾನ್ಯಗಳನ್ನು ಹೊರಡಿಸುತ್ತೇವೆ. ಹಾಗೆ ಅದರಿಂದ ಅವರು ತಿನ್ನುತ್ತಾರೆ. ಅದರಲ್ಲಿ ಖರ್ಜೂರ ಮತ್ತು ದ್ರಾಕ್ಷೆಯ ತೋಟಗಳು ಸಹ ಬೆಳೆಯುವಂತೆ ನಾವು ಮಾಡಿದ್ದೇವೆ. ನೀರಿನ ಚಿಲುಮೆ ಉಕ್ಕಿಹರಿಯುವಂತೆಯೂ ಮಾಡಿದ್ದೇವೆ. ಅವುಗಳ ಹಣ್ಣುಗಳಿಂದ ಅವರು ತಿನ್ನಲಿಕ್ಕೋಸ್ಕರ. ಅದು ಅವರ ಕೈಗಳು ಮಾಡಿದುದಲ್ಲ. ಹಾಗಿದ್ದು ಕೂಡ ಅವರು ಕೃತಜ್ಞತೆ ತೋರಿಸುವುದಿಲ್ಲವೇ?" *(36 : 34 - 36)*

ಹಣ್ಣುಗಳು, ತೈಲ ಮತ್ತು ಸಂಬಾರ ಮಸಾಲೆಗಳ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ತಡಕೆಯ ಮೇಲೆ ಹಬ್ಬಿಸಲ್ಪಟ್ಟ ಮತ್ತು ಹಬ್ಬಿಸಲ್ಪಡದ ವಿವಿಧ ತೋಟಗಳನ್ನೂ ಖರ್ಜೂರದ ಮರಗಳನ್ನೂ ನಾನಾತರದ ಫಲೋತ್ಪನ್ನ ಬೆಳೆಗಳನ್ನೂ ಪರಸ್ಪರ ಹೋಲಿಕೆ ಇರುವ ಹಾಗೂ ಇಲ್ಲದ ಓಲಿವ್ ಮತ್ತು ದಾಳಿಂಬೆ ಮರಗಳನ್ನೂ ಸೃಷ್ಟಿಸಿದವನು ಅವನಾಗಿದ್ದಾನೆ. ಅವು ಫಲಬಿಟ್ಟಾಗ ಅವುಗಳ ಫಲಗಳನ್ನು ನೀವು ತಿನ್ನಿರಿ..." *(6 : 42)*

"ಹಾಗೆ ಅದರ (ನೀರಿನ) ಮೂಲಕ ನಾವು ನಿಮಗೋಸ್ಕರ ಖರ್ಜೂರ ಮತ್ತು ದ್ರಾಕ್ಷೆಯ ತೋಟಗಳನ್ನು ಸೃಷ್ಟಿಸಿದೆವು. ಅವುಗಳಲ್ಲಿ ನಿಮಗೋಸ್ಕರ ಧಾರಾಳ ಹಣ್ಣು ಹಂಪಲುಗಳಿವೆ. ಅವುಗಳಿಂದ ನೀವು ತಿನ್ನುತ್ತೀರಿ. ಸಿನಾಯ್ ಪರ್ವತದಲ್ಲಿ ಬೆಳೆಯುವ ಒಂದು ವೃಕ್ಷವನ್ನು ಸಹ (ನಾವು ಸೃಷ್ಟಿಸಿದೆವು). ಅದು ಎಣ್ಣೆಯನ್ನು ಉತ್ಪಾದಿಸುತ್ತದೆ; ಉಣ್ಣುವವರಿಗೆ ರುಚಿಕರವಾದ ಪದಾರ್ಥವನ್ನು ಸಹ." *(23 : 20, 21)*

ಈ ವಚನ (ವಚನ 21) ಓಲಿವ್ ಮರದ ಕಡೆಗೆ ಸೂಚಿಸುತ್ತದೆ. ಆದರೆ ತೈಲೋತ್ಪಾದಕವಾದ ಬೇರೆ ಅನೇಕ ಮರಗಳೂ ಸಸ್ಯಗಳೂ ಇವೆ. ಈ ವಚನ ಅವುಗಳಿಗೆಲ್ಲಾ ಅನ್ವಯಿಸುತ್ತದೆ ಎಂದು ತಿಳಿಯ ಬಹುದು.

ಮಾಂಸಾಹಾರದ ಬಗ್ಗೆ ಈ ಕೆಳಗಿನ ವಚನಗಳಲ್ಲಿ ಪ್ರಸ್ತಾಪಿಸಲಾಗಿದೆ:

"ಅವರು ಕಾಣುವುದಿಲ್ಲವೇ? ನಾವು ನಮ್ಮ ಕೈಗಳಿಂದಲೇ ಅವರಿಗೆ ಜಾನುವಾರುಗಳನ್ನು ಸೃಷ್ಟಿಸಿದೆವು. ಹಾಗೆ ಅವರು ಅವುಗಳ ಮಾಲಿಕ ರಾದರು."

"ಅವುಗಳನ್ನು ನಾವು ಅವರಿಗೆ ಅಧೀನಪಡಿಸಿದೆವು. ಅವುಗಳಲ್ಲಿ ಕೆಲವನ್ನು ಅವರು ಸವಾರಿಗೋಸ್ಕರ ಉಪಯೋಗಿಸುತ್ತಾರೆ." *(36 : 72, 73)*

ಸಮುದ್ರವನ್ನೂ ಅವನು ನಿಮ್ಮ ಪ್ರಯೋಜನಕ್ಕಾಗಿ ಏರ್ಪಡಿಸಿ ದ್ದಾನೆ. ಅದರಿಂದ ನೀವು (ಮೀನಿನ) ತಾಜಾ ಮಾಂಸವನ್ನು ತಿನ್ನಲಿಕ್ಕಾಗಿ." *(16 : 15)*

ಸಮುದ್ರ ಮತ್ತು ನದಿಗಳಿಂದ ದೊರಕುವ ಆಹಾರ ಪದಾರ್ಥಗಳ ಕುರಿತು ಈ ಕೆಳಗಿನ ವಚನಗಳಲ್ಲಿ ಹೇಳಲಾಗಿದೆ:

"ಎರಡು ಸಮುದ್ರಗಳು ಸಮಾನವಾಗಿರುವುದಿಲ್ಲ. ಒಂದು ರುಚಿಕರವೂ ಸಿಹಿಯೂ ಕುಡಿಯಲು ಸ್ವಾದಿಷ್ಟವೂ ಆದುದು. ಇನ್ನೊಂದು ಉಪ್ಪುಪ್ಪು ಮತ್ತು ಕಹಿಯಾದುದು. ಪ್ರತಿಯೊಂದರಿಂದ ನೀವು ತಾಜಾ (ಮೀನಿನ) ಮಾಂಸವನ್ನು ತಿನ್ನುತ್ತೀರಿ." *(35 : 13)*

ಹೀಗೆ ಸೃಷ್ಟಿಕರ್ತನು ಮನುಷ್ಯರಿಗೆ ತಿನ್ನಲು ಅನುಮತಿಸಿದ ಆಹಾರ ವಸ್ತುಗಳು ಬಹಳ ಇವೆ. ಆದರೆ ತಿನ್ನುವ ಆಹಾರ ಶುದ್ಧವಾದುದೂ ಆರೋಗ್ಯದಾಯಕವೂ ವ್ಯಕ್ತಿಗೆ ಅನುಯೋಜ್ಯವಾದುದೂ ಆಗಿರಬೇಕು. ಕೆಲವರಿಗೆ ಕೆಲವು ಆಹಾರ ಪದಾರ್ಥಗಳು ಅಲರ್ಜಿಯನ್ನುಂಟು ಮಾಡುತ್ತದೆ. ಅಂತಹ ಆಹಾರ ವಸ್ತು ತಿನ್ನಲು ಅನುಮತಿಸಲಾಗಿದ್ದರೂ ಅದು ಹಿತಕರವಲ್ಲದ ಕಾರಣ ಅದನ್ನು ತಿನ್ನಬಾರದು.

ಆಹಾರ ವಸ್ತುಗಳ ಕುರಿತು ಪವಿತ್ರ ಖುರ್‌ಆನ್ ಇನ್ನೊಂದು ಮುಖ್ಯ ಮಾರ್ಗದರ್ಶನ ನೀಡಿದೆ:

"ನೀವು ತಿನ್ನಿರಿ, ಕುಡಿಯಿರಿ; ಆದರೆ ಮಿತಿಮೀರಬೇಡಿರಿ. ಮಿತಿ ಮೀರುವವರನ್ನು ಅವನು (ಅಲ್ಲಾಹನು) ಖಂಡಿತವಾಗಿಯೂ ಇಷ್ಟಪಡುವುದಿಲ್ಲ." *(7:32)*

ಅತಿ ಮಹತ್ತಾದ ಈ ಉಪದೇಶವು ಪ್ರಬಲವಾದ ಆಧಾರದಿಂದ ಕೂಡಿದುದೆಂದು ನಿಸ್ಸಂಶಯವಾಗಿಯೂ ಇಂದಿನ ಕಾಲದಲ್ಲಿ ಸಾಬೀತಾಗಿದೆ. ಈಗಿನ ಕಾಲದ ಬಹುತೇಕ ಸಾಮಾನ್ಯ ಕಾಯಿಲೆಗಳು ಆಹಾರದ ಬಗ್ಗೆ ಅಜಾಗರೂಕತೆಯ ಕಾರಣದಿಂದ ಉಂಟಾಗುವವು ಗಳಾಗಿವೆ. ಬೊಜ್ಜು ಪಾಶ್ಚಿಮಾತ್ಯ ದೇಶಗಳಲ್ಲಿ ಮಿತಿಮೀರಿದ್ದು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣಗಳಲ್ಲಿ ಆಹಾರವನ್ನು ತಿಂದುದರ ಕಾರಣದಿಂದಾಗಿದೆ. ಅಗತ್ಯಕ್ಕಿಂತ ಹೆಚ್ಚಾಗಿರುವ ಆಹಾರವು ಕೊಬ್ಬಿನ ರೂಪದಲ್ಲಿ ದೇಹದಲ್ಲಿ ಸಂಗ್ರಹವಾಗುತ್ತದೆ ಮತ್ತು ಅದು ಅನೇಕ ತೊಂದರೆಗಳಿಗೆ ಕಾರಣ ವಾಗುತ್ತದೆ. ಸಕ್ಕರೆ ಕಾಯಿಲೆಗೆ ಮುಖ್ಯ ಕಾರಣವು ಹೆಚ್ಚು ಸಕ್ಕರೆ ತಿಂದು ಸಾಕಷ್ಟು ಚಟುವಟಿಕೆಗಳನ್ನು ಕೈಗೊಳ್ಳದಿರುವುದಾಗಿದೆ. ರಕ್ತದ ಏರೊತ್ತಡಕ್ಕೆ ಕಾರಣವು ಉಪ್ಪನ್ನು ಹೆಚ್ಚಾಗಿ ತಿನ್ನುವುದರಿಂದಾಗಿದೆ ಎಂದು ಭಾವಿಸಲಾಗುತ್ತಿದೆ. ಕೊಬ್ಬಿನ ಪದಾರ್ಥಗಳನ್ನು ಹೆಚ್ಚು ಹೆಚ್ಚಾಗಿ ತಿನ್ನುವುದರಿಂದ ಹೃದಯ ರೋಗಗಳು ಉಂಟಾಗುತ್ತವೆ. ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಪವಿತ್ರ ಖುರ್‌ಆನಿನ ಉಪದೇಶಗಳನ್ನು ಮನುಷ್ಯರಿಗೆ ಸಾಧ್ಯವಿರುವಷ್ಟು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಅವರು ಆಹಾರ ತಿನ್ನುವ ಕುರಿತು ಹೀಗೆ ಹೇಳಿದುದಾಗಿ ವರದಿಯಾಗಿದೆ:

"ಹಸಿವು ಇನ್ನೂ ಉಳಿದಿರುವಾಗಲೇ ನೀವು ತಿನ್ನುವುದನ್ನು ನಿಲ್ಲಿಸಿರಿ."

ಆಹಾರವನ್ನು ತಿನ್ನುವಾಗ ನಾವು ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶವೇನೆಂದರೆ, ಎಲ್ಲಾ ವಸ್ತುಗಳನ್ನು ಸೃಷ್ಟಿಸಿದವನು ನಮಗೆ ಈ ಆಹಾರವನ್ನು ಒದಗಿಸಿಕೊಟ್ಟಿದ್ದಾನೆ. ಅವನು ನಮಗೆ ದಯಪಾಲಿಸಿದ ಈ ಅನುಗ್ರಹಕ್ಕಾಗಿ ನಾವು ಅವನಿಗೆ ಕೃತಜ್ಞತೆ ತೋರಿಸಬೇಕು.

ಉತ್ತಮವೂ ಹಿತಕರವೂ ಶುದ್ಧವೂ ಆಗಿರುವ ಆಹಾರ ದೇಹವನ್ನು ಆರೋಗ್ಯದಿಂದಿರಿಸುವುದಲ್ಲದೆ ಅದು ಆತ್ಮದ ಮೇಲೆಯೂ ಗಾಢವಾದ ಪ್ರಭಾವ ಬೀರುತ್ತದೆ. ಆದುದರಿಂದ ನಾವು ಆಹಾರವನ್ನು ತಯಾರಿಸು ವಾಗಲೂ ಅದನ್ನು ತಿನ್ನುವಾಗಲೂ ಸೃಷ್ಟಿಕರ್ತನನ್ನು ನೆನೆಯುತ್ತಾ ಇರಬೇಕು. ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ:

"ಆದುದರಿಂದ ನೀವು ಅಲ್ಲಾಹನ ವಚನಗಳಲ್ಲಿ ವಿಶ್ವಾಸವುಳ್ಳ ವರಾದರೆ, ಯಾವುದರ ಮೇಲೆ ಅಲ್ಲಾಹನ ನಾಮ ಉಚ್ಚರಿಸಲಾಗಿದೆಯೋ ಅದನ್ನು ಭಕ್ಷಿಸಿರಿ." *(6 : 119)*

## ನಿಷಿದ್ಧ ಆಹಾರ

ಮನುಷ್ಯರಿಗೆ ನಿಷಿದ್ಧಗೊಳಿಸಲಾದ ಆಹಾರದ ಕುರಿತು ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಸತ್ತ ಪ್ರಾಣಿ, ರಕ್ತ, ಹಂದಿ ಮಾಂಸ, ಅಲ್ಲಾಹೇತರರ ನಾಮದಲ್ಲಿ ಅರ್ಪಿಸಲ್ಪಟ್ಟದ್ದು, ಉಸಿರುಗಟ್ಟಿ ಸತ್ತದ್ದು, ಹೊಡೆದು ಸಾಯಿಸಿದ್ದು, ಬಿದ್ದು ಸತ್ತದ್ದು, ಕೊಂಬಿನಿಂದ ತಿವಿಯಲ್ಪಟ್ಟು ಸತ್ತದ್ದು, ಕ್ರೂರಪ್ರಾಣಿಗಳು ತಿಂದು ಬಾಕಿಯಾದುದು (ಅವು ಪ್ರಾಣಬಿಡುವ ಮೊದಲು) ನೀವು ವಿಧಿ

ಪ್ರಕಾರ ಕೊಯ್ದರೆ ಹೊರತು, ವಿಗ್ರಹಗಳಿಗೋಸ್ಕರ ಬಲಿಪೀಠದಲ್ಲಿ ವಧಿಸಲ್ಪಟ್ಟದ್ದು ಇತ್ಯಾದಿಗಳು ನಿಮಗೆ ನಿಷಿದ್ಧಗೊಳಿಸಲ್ಪಟ್ಟಿವೆ." (5 :4)

ಇವು ಬಹಳ ಸವಿವರವಾಗಿದೆ. ಇವುಗಳಲ್ಲಿ ಪ್ರತಿಯೊಂದನ್ನು ನಿಷಿದ್ಧಗೊಳಿಸಿದುದಕ್ಕೆ ವೈಜ್ಞಾನಿಕ ಆಧಾರವಿದೆ. ಸತ್ತ, ಉಸಿರುಗಟ್ಟಿಸಿ ಕೊಂದ ಅಥವಾ ಗಾಯಗೊಳಿಸಿ ಕೊಂದ ಪ್ರಾಣಿಗಳ ಮಾಂಸವನ್ನು ಭಕ್ಷಿಸುವುದರಿಂದ ಕಠಿಣ ರೋಗಗಳು ಉಂಟಾಗಬಹುದಾಗಿದೆ. ಆದುದರಿಂದ ಅವುಗಳ ಮಾಂಸ ತಿನ್ನುವುದನ್ನು ನಿಷಿದ್ಧ ಗೊಳಿಸಲಾಗಿದೆ. ಜೀವಂತ ಪ್ರಾಣಿಯ ಶರೀರದಿಂದ ಹೊರಗೆ ಬರುವ ರಕ್ತವು ಎಲ್ಲಾ ವಿಧ ಕ್ರಿಮಿಗಳು ಬೆಳೆಯುವ ಮಾಧ್ಯಮವಾಗಿರುತ್ತದೆ. ಆದುದರಿಂದ ರಕ್ತವನ್ನು ನಿಷಿದ್ಧಗೊಳಿಸಲಾಗಿದೆ. ಹಂದಿ ಮಾಂಸವನ್ನು ಸರಿಯಾಗಿ ಬೇಯಿಸದೆ ತಿಂದರೆ ಮನುಷ್ಯರಲ್ಲಿ ಅನೇಕ ರೋಗಗಳನ್ನು ಅದು ಉಂಟುಮಾಡುತ್ತದೆ ಎಂದು ಆಧುನಿಕ ಕಾಲದ ಸಂಶೋಧನೆಗಳು ಸಾಬೀತುಗೊಳಿಸಿವೆ. ಹದಿನಾಲ್ಕು ನೂರು ವರ್ಷಗಳ ಹಿಂದೆ ಆರೋಗ್ಯ ಶಾಸ್ತ್ರ ಇನ್ನೂ ಹುಟ್ಟದಿದ್ದಾಗ ಶುಚಿತ್ವದ ಬಗ್ಗೆ ಇರುವ ಉಪದೇಶವು ಆಶ್ಚರ್ಯಕರವಾಗಿದೆ.

ಆರೋಗ್ಯ ಶಾಸ್ತ್ರ ಅಥವಾ ವೈದ್ಯಶಾಸ್ತ್ರದ ಯಾವುದೇ ಪಾಠ ಪುಸ್ತಕದಲ್ಲಿ ಪ್ರಸ್ತಾಪಿಸಲ್ಪಡದೆ ಇರುವ ಒಂದು ದೃಷ್ಟಿಕೋನವು ಪವಿತ್ರ ಖುರ್‌ಆನಿನ ಉಪದೇಶಗಳಲ್ಲಿ ಅಡಕವಾಗಿದೆ. ದೈವಿಕ ಗ್ರಂಥಗಳಲ್ಲಿ ನೀಡಲಾದ ಉಪದೇಶಗಳ ಮೂಲಾಧಾರವು ದೇಹ ಮತ್ತು ಆತ್ಮದ ನಡುವೆ ಇರುವ ನಿಕಟ ಸಂಬಂಧವಾಗಿದೆ. ಇದರ ಬಗ್ಗೆ ಈ ಮೊದಲು ಸಹ ಉಲ್ಲೇಖಿಸಲಾಗಿದೆ. ದೇಹ ಮಾಡುವ ಪ್ರತಿಯೊಂದು ಕೆಲಸವು ಆತ್ಮದ ಮೇಲೆ ಪ್ರಭಾವ ಬೀರುತ್ತದೆ. ಪ್ರತಿಲೋಮವಾಗಿ ಸಹ ಹೀಗೆಯೇ ಆಗುತ್ತದೆ.

ಮೇಲಿನ ವಚನದಲ್ಲಿ ಈ ಸಂಬಂಧವನ್ನು ಆಹಾರ ಭಕ್ಷಣೆಯೊಂದಿಗೆ ಸೇರಿಸಿ ಹೇಳಲಾಗಿದೆ. ಆಹಾರವನ್ನು ತಿನ್ನುವುದರ ಉದ್ದೇಶ ಕೇವಲ ಆರೋಗ್ಯ ಕಾಪಾಡುವಿಕೆ ಮಾತ್ರವಲ್ಲ. ಆಹಾರವನ್ನು ನಮಗೆ ದಯಪಾಲಿಸಿದ ಸೃಷ್ಟಿಕರ್ತನಿಗೆ ನಾವು ಕೃತಜ್ಞರಾಗಬೇಕು. ಪ್ರಾಣಿಗಳನ್ನು ಸೃಷ್ಟಿಸಿದವನು ಸಹ ಅವನೇ ಆದುದರಿಂದ ಅವುಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು ಮತ್ತು ನೋವನ್ನುಂಟು ಮಾಡದ ರೀತಿಯಲ್ಲಿ ಕರುಣೆಯಿಂದ ವಧಿಸಬೇಕು. ಆಹಾರವು ದೇಹದ ಮೇಲೆ ಉಂಟು ಮಾಡುವ ಪ್ರಭಾವವು ಸ್ವತಃಸಿದ್ಧವಾದುದಾಗಿದೆ. ಅದು ಆತ್ಮದ ಮೇಲೆ ಸಹ ಪ್ರಭಾವ ಬೀರುತ್ತದೆ. ಈ ಬಗ್ಗೆ ಗಾಢವಾಗಿ ಅಧ್ಯಯನ ಮಾಡಿದರೆ ಈ ಗೂಢ ಕಲ್ಪನೆಯು ಸ್ಪಷ್ಟವಾಗುತ್ತದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ಈ ಬಗ್ಗೆ ಇನ್ನೂ ಬೆಳಕು ಬೀರುತ್ತದೆ:

*"ಯಾವುದರ ಮೇಲೆ ಅಲ್ಲಾಹನ ನಾಮ ಉಚ್ಚರಿಸಲ್ಪಡುವುದಿಲ್ಲವೋ ಅದನ್ನು ನೀವು ತಿನ್ನಬಾರದು. ಖಂಡಿತವಾಗಿಯೂ ಅದು ಅವಿಧೇಯತೆಯಾಗುತ್ತದೆ. ನಿಶ್ಚಯವಾಗಿಯೂ ದುರ್ಜನರು ತಮ್ಮ ಮಿತ್ರರಿಗೆ, ಅವರು ನಿಮ್ಮೊಡನೆ ವಿವಾದಕ್ಕಿಳಿಯಲಿಕ್ಕಾಗಿ ಗುಪ್ತವಾಗಿ ಪ್ರೇರೇಪಿಸುತ್ತಾರೆ. ನೀವು ಅವರನ್ನು ಅನುಸರಿಸಿದರೆ ಖಂಡಿತವಾಗಿಯೂ ನೀವು ಬಹುದೇವಾರಾಧಕರಾಗುತ್ತೀರಿ."* (6 : 122)

ಅಸಾಧಾರಣ ತುರ್ತು ಪರಿಸ್ಥಿತಿಗಳಲ್ಲಿ ವಿನಾಯತಿ ನೀಡಲಾಗಿದೆ ಮತ್ತು ನಿಷಿದ್ಧ ವಸ್ತುಗಳನ್ನು ಪ್ರಾಣರಕ್ಷಣೆಗಾಗಿ ಮಿತವಾಗಿ ಭಕ್ಷಿಸಬಹುದಾಗಿದೆ. ಪವಿತ್ರ ಖುರ್‌ಅನ್ ಹೀಗೆ ಹೇಳುತ್ತದೆ:

*"ಹೇಳು: 'ನನಗೆ ಅವತೀರ್ಣವಾದುದರಲ್ಲಿ, ತಿನ್ನಲು ಬಯಸುವವನಿಗೆ ಸತ್ತ ಪ್ರಾಣಿ ಅಥವಾ ಹರಿದ ರಕ್ತ ಅಥವಾ ಹಂದಿ ಮಾಂಸ – ಅದು ಮಲಿನವಾದುದು – ಅಥವಾ ಅಲ್ಲಾಹೇತರರಿಗೆ ಅರ್ಪಿಸಲ್ಪಟ್ಟು ಅಪವಿತ್ರವಾದುದು – ಇವುಗಳ ಹೊರತು ಬೇರೇನನ್ನೂ ನಿಷಿದ್ಧಗೊಳಿಸಿದುದಾಗಿ ನಾನು ಕಾಣುವುದಿಲ್ಲ. ಆದರೆ ಬೇಕೆಂದೇ ನಿಯಮೋಲ್ಲಂಘನೆ ಮಾಡುವವನೂ ಎಲ್ಲೆ ಮೀರುವವನೂ ಆಗಿರದೆ ಯಾರಾದರೂ (ಅದನ್ನು ತಿನ್ನಲು) ನಿರ್ಬಂಧಿತರಾದರೆ ಪಾಪವಿಲ್ಲ.' ನಿಸ್ಸಂದೇಹವಾಗಿಯೂ ನಿನ್ನ ಪ್ರಭು ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ."* (6 : 146)

## ಉಪವಾಸ ಮತ್ತು ಆರೋಗ್ಯ

ತಿನ್ನುವುದು ಮತ್ತು ಕುಡಿಯುವುದು ಆನಂದದಾಯಕವಾಗಿದ್ದರೂ ಇಸ್ಲಾಮ್ ಧರ್ಮ ಮತ್ತು ಇತರ ಅನೇಕ ಧರ್ಮಗಳು ತಮ್ಮ ಅನುಯಾಯಿಗಳಿಗೆ ಉಪವಾಸ ಮಾಡುವುದನ್ನು ಆಜ್ಞಾಪಿಸಿದೆ. ಲೋಕದ ಎಲ್ಲಾ ಮುಖ್ಯ ಧರ್ಮಗಳಲ್ಲಿ ಈ ಆಚರಣೆಯು ಜಾರಿಯಲ್ಲಿದೆ. ಪವಿತ್ರ ಖುರ್‌ಆನ್ ಉಪವಾಸದ ಬಗ್ಗೆ ಹೀಗೆ ಮಾರ್ಗದರ್ಶನ ನೀಡಿದೆ:

*ಓ ಸತ್ಯವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ಉಪವಾಸ ವ್ರತವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷ ಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ.*

*"(ಈ ಉಪವಾಸವನ್ನು) ಕೆಲವು ನಿರ್ದಿಷ್ಟ ದಿನಗಳಲ್ಲಿ ಅನುಷ್ಠಿಸಬೇಕಾಗಿದೆ. ಆದರೆ ನಿಮ್ಮಲ್ಲಿ ಯಾರಾದರೂ ರೋಗಿ ಅಥವಾ ಯಾತ್ರಿಕನಾಗಿದ್ದರೆ ಬೇರೆ ದಿನಗಳಲ್ಲಿ ಸಂಖ್ಯೆಯನ್ನು ಪೂರ್ಣಗೊಳಿಸಲಿ. (ಉಪವಾಸ ಮಾಡಲು ದೈಹಿಕ ನಿಶ್ಶಕ್ತಿಯಿದ್ದು ಆರ್ಥಿಕವಾಗಿ) ಸಮರ್ಥರಿದ್ದರೆ ಅವರು ಪ್ರಾಯಶ್ಚಿತ್ತವಾಗಿ ಒಬ್ಬ ನಿರ್ಗತಿಕನಿಗೆ ಆಹಾರವನ್ನು ನೀಡಬೇಕಾಗಿದೆ. ಇನ್ನು ಯಾರಾದರೂ ಪೂರ್ಣವಾದ ಅನುಸರಣೆಯನ್ನು ತೋರಿಸುತ್ತಾ ಏನಾದರೂ ಒಳಿತನ್ನು ಮಾಡುವುದಾದರೆ ಅದು ಆತನಿಗೆ ಉತ್ತಮ. ನೀವು ಗ್ರಹಿಸುವಿರಾದರೆ ವ್ರತಾನುಷ್ಠಾನ ನಿಮಗೆ ಗುಣಕರವಾಗಿದೆ.*

*"ಸಕಲ ಮಾನವರಿಗೆ ಸನ್ಮಾರ್ಗದರ್ಶಕವಾದ ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದುದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ. ಆದರೆ ಯಾರಾದರೂ ರೋಗಿ ಅಥವಾ ಪ್ರಯಾಣಿಕನಾಗಿದ್ದಲ್ಲಿ ಬೇರೆ ದಿನಗಳಲ್ಲಿ ಆ ಸಂಖ್ಯೆಯನ್ನು ಪೂರ್ತಿಗೊಳಿಸಲಿ. ಅಲ್ಲಾಹನು ನಿಮಗೆ ಸೌಲಭ್ಯವನ್ನು ಇಚ್ಛಿಸುತ್ತಾನೆ; ನಿಮಗೆ ಕಷ್ಟಕೊಡಲು ಇಚ್ಛಿಸುವುದಿಲ್ಲ. (ಇದು) ನೀವು ಸಂಖ್ಯೆಯನ್ನು ಪೂರ್ಣಗೊಳಿಸಲಿಕ್ಕೂ ನಿಮಗೆ ಮಾರ್ಗದರ್ಶನ ಮಾಡಿದುದಕ್ಕಾಗಿ ಅಲ್ಲಾಹನ ಸ್ತುತಿ ಕೀರ್ತನ ಮಾಡಲಿಕ್ಕೂ ನೀವು ಕೃತಜ್ಞತೆ ಸೂಚಿಸಲಿಕ್ಕೂ ಆಗಿದೆ."* (2 : 184-186)

ಉಪವಾಸದ ಕುರಿತು ಪವಿತ್ರ ಖುರ್‌ಆನಿನ ಆಜ್ಞೆಯನ್ನು ಪ್ರಾಪ್ತ ವಯಸ್ಕರಾದ ಆರೋಗ್ಯವಂತರು ಕಡ್ಡಾಯವಾಗಿ ಪಾಲಿಸಬೇಕಾಗಿದೆ. ನಸುಕಿನಿಂದ ಸೂರ್ಯಾಸ್ತಮಾನದ ತನಕ ತಿನ್ನುವುದನ್ನೂ ಕುಡಿಯುವುದನ್ನೂ ಸಂಪೂರ್ಣವಾಗಿ ನಿಷಿದ್ಧಗೊಳಿಸಲಾಗಿದೆ. ರೋಗಿಗಳೂ ಪ್ರಯಾಣಿಕರೂ ಉಪವಾಸಮಾಡಬಾರದೆಂದು ಆಜ್ಞಾಪಿಸಲಾಗಿದೆ. ರೋಗಿಗಳು ರೋಗಮುಕ್ತರಾದ ನಂತರ ಮತ್ತು ಪ್ರಯಾಣಿಕರು ಪ್ರಯಾಣ ಮುಗಿದ ನಂತರ ಬೇರೆ ದಿನಗಳಲ್ಲಿ ಉಪವಾಸದ ಸಂಖ್ಯೆಯನ್ನು ಪೂರ್ಣಗೊಳಿಸಬೇಕು. ಕಠಿಣ ರೋಗದ ಕಾರಣದಿಂದ ಅಥವಾ ಬೇರೆ ಯಾವುದೇ ಕಾರಣದಿಂದ ಉಪವಾಸದ ಸಂಖ್ಯೆಯನ್ನು ಪೂರ್ಣಗೊಳಿಸಲು ಯಾರಿಗಾದರೂ ಸಾಧ್ಯವಾಗುವುದಿಲ್ಲ

ವಾದರೆ ಅವರು ಪ್ರಾಯಶ್ಚಿತ್ತ ಒಂದು ಉಪವಾಸಕ್ಕೆ ಬದಲಾಗಿ ಒಬ್ಬ ಬಡವನಿಗೆ ಆಹಾರ ನೀಡಲು ವಿಧಿಸಲಾಗಿದೆ. ಉಪವಾಸ ಮಾಡಲು ಆಜ್ಞಾಪಿಸಿರುವುದು ಜನರ ಹಿತಕ್ಕಾಗಿದೆ. ಅದರ ಮುಖ್ಯ ಉದ್ದೇಶ ಉಪವಾಸ ಮಾಡುವವರನ್ನು ಸಾತ್ವಿಕರನ್ನಾಗಿ ಮಾಡುವುದಾಗಿದೆ. ಅದರ ಉದ್ದೇಶ ಅವರನ್ನು ಕಷ್ಟಕ್ಕೆ ಗುರಿಮಾಡುವುದಲ್ಲ.

ಇದು ಉಪವಾಸದ ಕುರಿತು ಪವಿತ್ರ ಖುರ್‌ಆನ್ ಉಪದೇಶಿಸುವುದರ ಸಂಕ್ಷಿಪ್ತ ರೂಪವಾಗಿದೆ. ಅನಿಯಮಿತವಾದುದಾಗಲಿ, ಕ್ರಮಬದ್ಧವಾದುದಾಗಲಿ ಉಪವಾಸವು ಆರೋಗ್ಯದ ಮೇಲೆ ಹಿತಕರವಾದ ಪರಿಣಾಮವನ್ನುಂಟುಮಾಡುತ್ತದೆ ಎಂದು ಆಧುನಿಕ ಸಂಶೋಧನೆಗಳಿಂದ ಸಾಬೀತಾಗಿದೆ. ಅದು ಕೋಶಗಳ ಬೆಳವಣಿಗೆಯನ್ನು ಸುಸ್ಥಾಪಿತಗೊಳಿಸುತ್ತದೆ, ರಕ್ತದ ಒತ್ತಡವನ್ನು ತಗ್ಗಿಸುತ್ತದೆ, ಸಕ್ಕರೆಯನ್ನು ಶರೀರವು ಸರಿಯಾಗಿ ಬಳಕೆಮಾಡುವಂತೆ ಮಾಡುತ್ತದೆ, ಶರೀರದ ಭಾರವನ್ನು ಕುಗ್ಗಿಸುತ್ತದೆ, ಧೂಮಪಾನ, ದ್ರವ್ಯ ಸೇವನೆ ಮತ್ತು ಮದ್ಯಪಾನದಂತಹ ಹಾನಿಕರ ಅಭ್ಯಾಸಗಳನ್ನು ಬಿಟ್ಟು ಬಿಡಲು ಸಹಾಯಕವಾಗುತ್ತದೆ. ಅದರಿಂದ ನೈತಿಕ ಲಾಭಗಳು ಸಹ ಇವೆ. ಹಸಿದವರಿಗೆ ಮತ್ತು ಬಡವರಿಗೆ ಆಹಾರ ನೀಡಲು ಅದು ಪ್ರೇರೇಪಿಸುತ್ತದೆ. ಸಂಯಮ ಮತ್ತು ಸಹಿಷ್ಣುತೆಯನ್ನು ಕಲಿಸಿ ತಮಗಿಂತ ಕಡಿಮೆ ಭಾಗ್ಯವನ್ನು ಪಡೆದವರ ಸಮಸ್ಯೆಗಳ ಕುರಿತು ಒಳನೋಟ ಪಡೆಯುವಂತೆ ಅದು ಮಾಡುತ್ತದೆ.

## ಮಾದಕ ವಸ್ತುಗಳು

ಮದ್ಯ ಮತ್ತು ಮಾದಕ ವಸ್ತುಗಳನ್ನು ಆಹಾರದ ಭಾಗಗಳಾಗಿ ಕೆಲವರು ಉಪಯೋಗಿಸುತ್ತಾರೆ. ಹಲವು ಗಿಡಗಳು, ಅವುಗಳ ಹಣ್ಣುಗಳು, ಬೀಜಗಳು, ಅವುಗಳಿಂದ ಒಸರುವ ರಸ, ಬೇರು ಮತ್ತು ಇತರ ಭಾಗಗಗಳು ಔಷಧಗಳ ಗುಣಗಳನ್ನು ಹೊಂದಿವೆ. ಪೋಪಿ (ಗಸಗಸೆ) ಗಿಡ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಅದರ ಹಣ್ಣುಗಳು, ಬೀಜಗಳು ಮತ್ತು ಅದರ ಹಣ್ಣುಗಳಿಂದ ಸ್ರವಿಸುವ ರಸ ಅಫೀಮು ಎಂಬ ಹೆಸರಿನಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದು ಔಷಧವಾಗಿ ಮಾನವನ ಚರಿತ್ರೆಯಲ್ಲಿ ದೀರ್ಘಕಾಲದಿಂದ ಉಪಯೋಗಿಸಲ್ಪಡುತ್ತಿದೆ. ಇಂದು ಸಹ ಅದರ ಸತ್ವಗಳಿಂದ ತಯಾರಿಸಲಾದ ಮದ್ದುಗಳು ಬೇರೆ ಎಲ್ಲ ಮೂಲಗಳಿಂದ ತಯಾರಿಸಲಾದ ಮದ್ದುಗಳಿಗಿಂತ ಉತ್ತಮವಾಗಿದೆ. ಅದು ನೋವನ್ನು ನಿವಾರಿಸುತ್ತದೆ, ನಿದ್ರೆಯನ್ನು ಸರಿಪಡಿಸುತ್ತದೆ, ಭೇದಿಯನ್ನು ನಿಯಂತ್ರಿಸುತ್ತದೆ ಮತ್ತು ಕೆಮ್ಮನ್ನು ಉಪಶಮನ ಮಾಡುತ್ತದೆ. ಆದರೆ ಅದು ಮೆದುಳಿನ ಚಟುವಟಿಕೆಗಳನ್ನು ತಗ್ಗಿಸುತ್ತದೆ. ಅದರ ಉಪಯೋಗ ಅಭ್ಯಾಸವಾಗುವಂತೆ ಮಾಡಿ ಅದೊಂದು ಚಟವಾಗಿ ಪರಿಣಮಿಸುತ್ತದೆ. ಅದರ ದುರುಪಯೋಗದಿಂದ ಅತೀವ ಕಷ್ಟದ ಪರಿಸ್ಥಿತಿ ಉಂಟಾಗುತ್ತದೆ ಮತ್ತು ಆರೋಗ್ಯ ಕೆಡುತ್ತದೆ. ಹೀಗಿದ್ದರೂ ಈ ದ್ರವ್ಯದ ಉಪಯುಕ್ತತೆಯನ್ನು ಕಡೆಗಣಿಸಲಾಗದು.

ಈಥೈಲ್ ಅಲ್ಕೊಹಾಲ್ (ಮದ್ಯಸಾರ) ಇನ್ನೊಂದು ದ್ರವ್ಯವಾಗಿದೆ. ಅನೇಕ ರೀತಿಯ ಸಕ್ಕರೆಗಳನ್ನು ಮತ್ತು ಪಿಷ್ಟಗಳನ್ನು ಹುಳಿಬರಿಸುವಿಕೆಯ ಮೂಲಕ ಇದನ್ನು ತಯಾರಿಸಲಾಗುತ್ತದೆ. ಹಿಂದೆ ಅಲ್ಕೊಹಾಲ್ ಅನೇಕ ಔಷಧಗಳಲ್ಲಿ, ಅದು ಮೆದುಳಿನ ಚಟುವಟಿಕೆಗಳನ್ನು ಕುಗ್ಗಿಸುವ ಕಾರಣದಿಂದ ಬಳಸಲ್ಪಡುತ್ತಿತ್ತು. ರೋಗಿಗಳನ್ನು ಶಾಂತ ಗೊಳಿಸಲು, ನಿದ್ರೆ ಬರಿಸಲು ಇದನ್ನು ಉಪಯೋಗಿಸಲಾಗುತ್ತಿತ್ತು. ಬೇರೆ ಕೆಲವು ಗಿಡಮೂಲಿಕೆಗಳ ಸತ್ವಗಳನ್ನು ಕರಗಿಸಿ ಮದ್ಯಾರ್ಕಗಳನ್ನು ಮತ್ತು ಸಿದ್ಧೌಷಧಗಳನ್ನು ತಯಾರಿಸಲು ಅದನ್ನು ಬಳಸಲಾಗುತ್ತಿತ್ತು. ಅದನ್ನು ಉತ್ತಮವಾಗಿ ಉಪವಾಗಿಸಬಹುದಾದರೂ ಅದರ ದುರುಪಯೋಗದಿಂದ ಮತ್ತು ಮಿತಿಮೀರಿದ ಕುಡಿತದಿಂದ ಯುನೈಟೆಡ್ ಕಿಂಗ್‌ಡಮ್‌ನಲ್ಲಿ (ಬ್ರಿಟನ್, ವೇಲ್ಸ್, ಸ್ಕಾಟ್‌ಲೇಂಡ್, ಐರ್‌ಲೇಂಡ್) ಬಿಲಿಯನ್‌ಗಟ್ಟಲೆ ಪೌಂಡ್‌ಗಳ ನಷ್ಟ ಸಂಭವಿಸುತ್ತಾ ಇದೆ. ಸಿರ್‌ಹೋಸಿಸ್ ಆಫ್ ಲಿವರ್ (ಯಕೃತ್ತಿನ ಕಾಯಿಲೆ), ಹೃದಯ ರೋಗ, ಮದ್ಯವ್ಯಸನ, ವಾಹನ ಅಪಘಾತಗಳು, ರಸ್ತೆಯ ಗೂಂಡಾಗಿರಿ ಮತ್ತು ಸಾವು ಮದ್ಯಸಾರದ ಉಪಯೋಗದ ಪರಿಣಾಮಗಳಾಗಿವೆ. ಮದ್ಯಸಾರವನ್ನು ಅಲ್ಪಪ್ರಮಾಣದಲ್ಲಿ ಉಪಯೋಗಿಸಿದರೂ ಅದು ಮನುಷ್ಯನ ನಿರ್ಣಯ ಶಕ್ತಿಯ ಮೇಲೆ ಪ್ರಭಾವ ಬೀರುತ್ತದೆ ಎಂದು ಈಗ ಚೆನ್ನಾಗಿ ತಿಳಿದು ಬಂದಿದೆ.

ಇನ್ನೊಂದು ಮುಖ್ಯ ದ್ರವ್ಯ ಕೊಕೆಯ್ನ್ ಆಗಿದೆ. ಇದು ಸಹ ಒಂದು ಗಿಡದ ಸತ್ವವಾಗಿದೆ. ಇದನ್ನು ಸ್ಥಳೀಯ ಅರಿವಳಿಕೆಗೆ ದೀರ್ಘಕಾಲ ಬೇರೆ ಮದ್ದುಗಳ ಸಂಶೋಧನೆ ಆಗುವ ತನಕ ಬಳಸಲಾಗುತ್ತಿತ್ತು. ಇದು ಮೆದುಳನ್ನು ಉದ್ರೇಕಿಸಿ ನೆಮ್ಮದಿಯ ಭಾವನೆಯನ್ನುಂಟು ಮಾಡುತ್ತದೆ. ಅದು ಎಚ್ಚರದಿಂದಿರುವಂತೆ ಮಾಡುತ್ತದೆ ಮತ್ತು ನಿದ್ರೆಗೆ ಭಂಗವನ್ನುಂಟುಮಾಡುತ್ತದೆ. ಅದರ ಅಭ್ಯಾಸವನ್ನುಂಟುಮಾಡುತ್ತದೆ. ಮತ್ತು ಅದು ಒಂದು ಚಟವಾಗುತ್ತದೆ. ದುರದೃಷ್ಟವಶಾತ್, ಇದನ್ನು ಸಂತೋಷದಾಯಕವೆಂದು ಪರಿಗಣಿಸಿ ಉಪಯೋಗಿಸುವುದರಿಂದ ಅನೇಕ ತೀವ್ರ ಕೆಟ್ಟ ಪರಿಣಾಮಗಳು ಉಂಟಾಗುತ್ತವೆ.

ಕಫೇನ್ ಇನ್ನೊಂದು ಉತ್ತೇಜಕ ದ್ರವ್ಯವಾಗಿದೆ. ಹಲವರು ಇದನ್ನು ತಮ್ಮ ಆಹಾರದ ಭಾಗವನ್ನಾಗಿ ಮಾಡುತ್ತಾರೆ. ಕಾಫಿ, ಚಾ ಮತ್ತು ಕೋಲಾ ಪಾನೀಯಗಳಲ್ಲಿ ಇದು ಇದೆ. ಇದು ಮೆದುಳಿನ ಚಟುವಟಿಕೆಗಳನ್ನು ವೃದ್ಧಿಗೊಳಿಸುತ್ತದೆ ಮತ್ತು ಕ್ರಿಯಾಶೀಲತೆಯ ಭಾವನೆಯನ್ನುಂಟುಮಾಡುತ್ತದೆ. ಇದು ನಿದ್ರೆಗೆ ಸಮಸ್ಯೆಯನ್ನುಂಟುಮಾಡಬಹುದು ಮತ್ತು ಕೆಲವರಿಗೆ ಇದು ಅಭ್ಯಾಸವನ್ನುಂಟುಮಾಡಬಹುದು. ಇದು ಮೂತ್ರಜನಾಂಗದ ಮೇಲೆ ಪ್ರಭಾವ ಬೀರಿ ಮೂತ್ರದ ಪರಿಮಾಣವನ್ನು ಹೆಚ್ಚಿಸುತ್ತದೆ.

ಮರಿಜುವಾನ ಇನ್ನೊಂದು ಗಿಡದ ಸತ್ವವಾಗಿದೆ. ಇದು ಮಾನಸಿಕ ವಿಭ್ರಾಂತಿಯನ್ನುಂಟುಮಾಡುತ್ತದೆ. ಬೇರೆ ಬೇರೆ ಜನರಲ್ಲಿ ಬೇರೆ ಬೇರೆ ಪರಿಣಾಮವನ್ನು ಇದು ಉಂಟುಮಾಡುತ್ತದೆ. ಕೆಲವರು ಇದರ ಉಪಯೋಗದಿಂದ ಹುಚ್ಚರೂ ಆಗಬಹುದು. ಇದು ಕೆಲವು ಔಷಧೀಯ ಗುಣಗಳನ್ನು ಹೊಂದಿದೆ. ಕೆಲವು ರೋಗಗಳ ಚಿಕಿತ್ಸೆಗಾಗಿ ಇದನ್ನು ಬಳಸಲಾಗುತ್ತಿದೆ. ರಕ್ತನಾಳಗಳಲ್ಲಿ ತಲೆದೋರುವ ಅಡಚಣೆಗಳನ್ನು ನಿವಾರಿಸಲು ಇದನ್ನು ಬಳಸಲಾಗುತ್ತಿದ್ದು, ಇದು ಸ್ವಲ್ಪಮಟ್ಟಿಗೆ ಪ್ರಯೋಜನಕರವೆಂದು ಹೇಳಲಾಗುತ್ತದೆ.

ಹೊಗೆಸೊಪ್ಪನ್ನು ಧೂಮ್ರಪಾನಕ್ಕಾಗಿ ಮತ್ತು ತಿನ್ನಲು ಬಳಸುತ್ತಾರೆ. ಅದಕ್ಕೆ ಔಷಧೀಯ ಗುಣಗಳಿರುತ್ತವೆ. ನರಮಂಡಲಕ್ಕೆ ಪ್ರಭಾವ ಬೀರುವ ಅದರಲ್ಲಿರುವ ಒಂದು ವಸ್ತು ನಿಕೋಟೀನ್ ಆಗಿದೆ. ಹೊಗೆಸೊಪ್ಪು ಬಳಸುವವನಿಗೆ ನಿಕೋಟೀನ್ ಉಲ್ಲಾಸನೀಡುತ್ತದೆ ಮತ್ತು ಅದನ್ನು ಉಪಯೋಗಿಸುತ್ತಾ ಇರುವ ಅಭ್ಯಾಸ ಉಂಟಾಗುತ್ತದೆ. ಹೊಗೆ ಸೊಪ್ಪನ್ನು ಬಹುತೇಕವಾಗಿ ಸಿಗರೇಟಿನ ರೂಪದಲ್ಲಿ ಸೇದಲಾಗುತ್ತದೆ. ಅದರ ಹಾನಿಯ ಬಗ್ಗೆ ನಾವು ತುಂಬಾ ತಿಳಿದಿರುವೆವು. ಈ ಕಾರಣದಿಂದ ಸಿಗರೇಟಿನ ಜಾಹಿರಾತುಗಳನ್ನು ಎಲ್ಲ ಮಾಧ್ಯಮಗಳಲ್ಲಿ ನಿಷೇಧಿಸಲಾಗಿದೆ ಮತ್ತು ಸಾರ್ವಜನಿಕ ಸ್ಥಳಗಳಲ್ಲೂ ಸಾರ್ವಜನಿಕ ವಾಹನಗಳಲ್ಲೂ ಅದರ ಬಳಕೆ ನಿಷೇಧಿಸಲಾಗಿದೆ. ಅಲ್ಲದೆ ಸಿಗರೇಟು ಪ್ಯಾಕೆಟ್‌ಗಳಲ್ಲಿ ಶಾಸನ ವಿಧಿಸಿದ, ಆರೋಗ್ಯಕ್ಕೆ ಹಾನಿಕರವೆಂಬ ಎಚ್ಚರಿಕೆಯನ್ನು ಮುದ್ರಿಸಲಾಗುತ್ತಿದೆ.

ಮಾದಕ ವಸ್ತುಗಳ ಕುರಿತು ಪವಿತ್ರ ಖುರ್‌ಆನ್ ಈ ಕೆಳಗಿನ ವಚನಗಳಲ್ಲಿ ಮಾರ್ಗದರ್ಶನ ನೀಡಿದೆ:

*......(28ನೇ ಪುಟಕ್ಕೆ)*

# ಖುರ್‌ಆನ್ ನಿರ್ದೇಶಿಸುವ ಪರದಾ ಪದ್ಧತಿ

ಮನುಷ್ಯನ ನೈತಿಕ ಸ್ಥಿತಿಯನ್ನು ಉತ್ತಮಗೊಳಿಸಲು ಇಸ್ಲಾಂ ನಿರ್ದೇಶಿಸಿರುವ ಪದ್ಧತಿಗಳಲ್ಲಿ ಒಂದು, ಹೃದಯದಲ್ಲಿ ಪಾಪವಿಚಾರ ಹುಟ್ಟಲಿಕ್ಕೆ ಎಡೆಕೊಡುವ ಎಲ್ಲಾ ದಾರಿಗಳನ್ನು ಮುಚ್ಚುವುದಾಗಿದೆ. ಇಸ್ಲಾಂ ಧರ್ಮ ಸಿದ್ಧಾಂತ ಪ್ರಕಾರ ಮನುಷ್ಯನ ಸ್ವಭಾವ ನಿರ್ದೋಷವೂ ಪರಿಶುದ್ಧವೂ ಆಗಿದೆ; ಪಾಪ ಹೊರಗಿನಿಂದ ಬಂದು ಸೇರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಳಿತನ್ನು ಪ್ರೀತಿಸುವ ಮತ್ತು ಕೆಡುಕನ್ನು ದ್ವೇಷಿಸುವ ಒಂದು ಅಂತರ್ಬೋಧ ಅಥವಾ ಅಂತಃಕರಣ ಮನುಷ್ಯನಿಗೆ ದೇವದತ್ತವಾದುದಾಗಿದೆ. ಜಾತಿ ಮತ ಭೇದವಿಲ್ಲದೆ ಸಕಲರೂ ಈ ಶುದ್ಧವಾದ ಸ್ವಭಾವದಿಂದ ಕೂಡಿ ಜನಿಸುತ್ತಾರೆ. ಆದರೆ, ಈ ಅಂತರ್ಬೋಧ ಮಾತ್ರವೇ ಮನುಷ್ಯನನ್ನು ಪಾಪದಿಂದ ರಕ್ಷಿಸಲು ಪರ್ಯಾಪ್ತವಲ್ಲ. ಕಾರಣವೇನೆಂದರೆ, ಅದು ಅವನೊಡನೆ ಒಳಿತನ್ನು ಮಾಡಲಿಕ್ಕೆ ಮತ್ತು ಕೆಡುಕನ್ನು ವರ್ಜಿಸಲಿಕ್ಕೆ ಮಾತ್ರವೇ ಹೇಳುತ್ತದೆ. ಒಳಿತು ಯಾವುದು ಕೆಡುಕು ಯಾವುದು ಎಂಬ ವ್ಯತ್ಯಾಸವನ್ನು ತೋರಿಸಿ ಕೊಡುವ ಕೆಲಸವನ್ನು ಮನುಷ್ಯನ ವಿವೇಕವು ಮಾಡುತ್ತದೆ. ಈ ಗುಣದೋಷ ವಿವೇಚನೆಗೆ ಇಂದ್ರಿಯಗಳ ಮುಖಾಂತರ ಮನುಷ್ಯನಿಗೆ ಸಿದ್ಧಿಸುವ ಅರಿವೇ ಆಧಾರ. ಆದುದರಿಂದ, ಈ ಬಾಹ್ಯಪ್ರೇರಣೆಗಳನ್ನು ಸ್ವೀಕರಿಸುವುದರಲ್ಲಿ ಅವನು ತಪ್ಪಿಬೀಳುವ ಪಕ್ಷದಲ್ಲಿ, ಒಂದು ಸಂಗತಿ ಒಳ್ಳೆಯದೋ ಕೆಟ್ಟದೋ ಎಂದು ವಿವೇಚಿಸುವ ವಿಷಯದಲ್ಲೂ ಅವನಿಗೆ ತಪ್ಪು ಸಂಭವಿಸುವುದೆಂಬುದು ಖಂಡಿತ. ಆಗ ಅವನ ಅಂತಃಬೋಧ ಅಥವಾ ಅಂತಃಕರಣ ಒಳ್ಳೆಯದನ್ನು ಕೆಟ್ಟದೆಂದೂ ಕೆಟ್ಟದನ್ನು ಒಳ್ಳೆಯದೆಂದೂ ತಪ್ಪಾಗಿ ತಿಳಿದು ಅದರ ಫಲವಾಗಿ ಸತ್ಕರ್ಮ ತಡೆಯಲ್ಪಟ್ಟು ದುಷ್ಕರ್ಮ ಪ್ರೋತ್ಸಾಹಿಸಲ್ಪಡುತ್ತದೆ. ಆದ್ದರಿಂದ, ಮನುಷ್ಯನು ಸ್ವೀಕರಿಸುವ ಈ ಬಾಹ್ಯಪ್ರೇರಣೆಗಳನ್ನು ಇಲ್ಲವಾಗಿಸಬೇಕು ಅಥವಾ ತಡೆಯಬೇಕು. ಇದೇ ಪ್ರಕಾರವೇ ಮನುಷ್ಯನನ್ನು ದುಷ್ಕೃತ್ಯದೆಡೆಗೆ ದೂಡಿಬಿಡುವ ವಿಕಾರ ವಿಲೋಭನಗಳ ಪ್ರೇರಣೆ ಸಹ ಹೊರಗಿನಿಂದ ಬಂದು ಸೇರುವುದರಿಂದ, ಅದನ್ನು ನಿವಾರಿಸಬೇಕಾದುದು ಅಗತ್ಯ. ಏಕೆಂದರೆ ಈ ಬಾಹ್ಯಪ್ರೇರಣೆಗಳನ್ನು ತಡೆಗಟ್ಟಿದರೆ ಮಾತ್ರ ಮನುಷ್ಯನಿಗೆ ಆತ್ಮನಿಯಂತ್ರಣ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ, ಮದ್ಯಪಾನಮಾಡಿ ಅಭ್ಯಾಸವುಳ್ಳವನಿಗೆ ಇತರರು ಮದ್ಯಪಾನ ಮಾಡುವುದನ್ನು ಕಾಣುವಾಗ, ಅಥವಾ ಮದ್ಯ ಸೇವಿಸಲಿಕ್ಕೋ ಅದನ್ನು ಶೇಖರಿಸಿಡಲಿಕ್ಕೋ ಉಪಯೋಗಿಸುವ ಪಾತ್ರೆಗಳನ್ನು ಕಾಣುವಾಗ, ಅಥವಾ ಅವನು ದಿನಾಲು ಮದ್ಯಪಾನಮಾಡುವ ಸಮಯ ಬರುವಾಗ ವಿಕಾರಕ್ಕೆ ಅಧೀನನಾಗುತ್ತಾನೆ. ಇಂತಹ ಮನುಷ್ಯನನ್ನು ಮದ್ಯ ಸಿಕ್ಕುವ ಸ್ಥಳದಿಂದ ದೂರವಿರಿಸಿ ಮದ್ಯಪಾನದ ನೆನಪನ್ನುಂಟುಮಾಡುವ ವಸ್ತುಗಳು ಅವನ ಕಣ್ಣ ಮುಂದೆ ಬಾರದಂತೆ ಜಾಗ್ರತೆ ವಹಿಸಿದರೆ ಒಂದು ಕ್ಲಪ್ತ ಕಾಲದೊಳಗೆ ಅವನ ಈ ದುಷ್ಚಟ ಬಿಟ್ಟುಹೋಗಿ, ಆತ್ಮನಿಯಂತ್ರಣದ ಶಕ್ತಿ ಲಭಿಸುತ್ತದೆ.

> **ಇದು ಅಹ್ಮದಿಯಾ ಸಂಘಟನೆಯ ದ್ವಿತೀಯ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಅವರು 1924ರಲ್ಲಿ ಲಂಡನಿನ ವೆಂಬ್ಲೀ (Wembley) ನಗರದಲ್ಲಿ ಜರಗಿದ ಸರ್ವಧರ್ಮ ಸಮ್ಮೇಳನಕ್ಕಾಗಿ ವಿರಚಿಸಿದ "ಟ್ರೂ ಇಸ್ಲಾಂ" ಎಂಬ ಉಪನ್ಯಾಸದ ಒಂದು ಚಿಕ್ಕ ಭಾಗವಾಗಿದೆ.**
>
> **ಪರದಾ ಸಂಪ್ರದಾಯದ ತತ್ವವೇನೆಂದೂ ಅದರಿಂದ ಮನುಷ್ಯನಿಗೆ ಪ್ರಾಪ್ತವಾಗುವ ನೈತಿಕ ಗುಣಗಳೇನೆಂದೂ ತಿಳಿಯದೆ ಪರದಾ ಸಂಪ್ರದಾಯವನ್ನು ಟೀಕಿಸುವ ಆಧುನಿಕರಿಗೆ ಈ ಲೇಖನವು ಉತ್ತರ ರೂಪದಲ್ಲಿದೆ.**
>
> **-ಸಂ.**

ಈ ತತ್ವವನ್ನು ಮುಂದಿರಿಸಿ, ಪಾಪ ಅಥವಾ ಪಾಪ ವಿಚಾರ ಉಂಟಾಗುವ ಮಾರ್ಗಗಳನ್ನೆಲ್ಲಾ ಮುಚ್ಚಲು ಪರ್ಯಾಪ್ತವಾದ ನಿರ್ದೇಶನಗಳನ್ನು ಇಸ್ಲಾಂ ನೀಡಿರುತ್ತದೆ. ಆದರೆ, ಲೋಕಕ್ಕೆ ಇಸ್ಲಾಂ ಹಲವು ವಿಧ ಒಳಿತುಗಳನ್ನು ನೀಡಿದ್ದರೂ ಆ ಬಗ್ಗೆ ಲೋಕದ ಬಾಧ್ಯತೆಗಳನ್ನು ಇನ್ನೂ ಹೆಚ್ಚಿಸಲು ಮನೋತತ್ವಶಾಸ್ತ್ರಕ್ಕನುಸಾರವಾಗಿರುವ ಈ ನಿರ್ದೇಶಗಳು ಜನರ ಆಕ್ಷೇಪಗಳಿಗೂ ಟೀಕೆಗಳಿಗೂ ಗುರಿಯಾಗಿವೆಯೆಂಬುದು ಆಶ್ಚರ್ಯಕರವಾಗಿದೆ. ಮಾತ್ರವಲ್ಲ ಸತ್ಯಾನ್ವೇಷಣ ತೃಷ್ಣೆಯೂ ತತ್ವಜ್ಞಾನ ತತ್ಪರತೆಯೂ ಉಳ್ಳವರು ಸಹ ಈ ನಿರ್ದೇಶಗಳ ನಿಜಾಂಶವನ್ನು ಗ್ರಹಿಸಲಿಲ್ಲವೆಂಬುದು ಇನ್ನೂ ವಿಸ್ಮಯಕರವಾಗಿದೆ. ಪಾಪಪ್ರೇರಕವಾದ ಮಾರ್ಗಗಳನ್ನು ತಡೆಯಲಿಕ್ಕೆ ಇಸ್ಲಾಂ ನಿರ್ದೇಶಿಸಿದ ಸಂಗತಿಗಳನ್ನೆಲ್ಲಾ ಇಲ್ಲಿ ವಿವರಿಸುವುದು ಕಷ್ಟಕರವಾದುದರಿಂದ ನಾನು ಕೆಲವನ್ನು ಮಾತ್ರ ಇಲ್ಲಿ ಉದಾಹರಿಸುವೆನು.

ಈ ನಿರ್ದೇಶಗಳಲ್ಲಿ ಪ್ರಥಮವಾಗಿ ಚಾರಿತ್ರ್ಯ ಸಂರಕ್ಷಣೆಗೆ ಸಂಬಂಧಿಸಿದ ಶಾಸನಗಳ ಕುರಿತು ವಿವರಿಸುವೆನು. ಇಸ್ಲಾಂ ಇತರ ಧರ್ಮಗಳಂತೆ "ವ್ಯಭಿಚರಿಸಬಾರದು" ಎಂದು ಮಾತ್ರವಲ್ಲ ಹೇಳುವುದು. ವ್ಯಭಿಚಾರ ನಿಂದನೀಯ ಪಾಪ ಕರ್ಮವೆಂಬ ಸಂಗತಿಯನ್ನು ಮಾತ್ರ ತಿಳಿಸುವುದಲ್ಲ ನಮ್ಮ ಅವಶ್ಯಕತೆ. ನಾವು ಈ ಪಾಪದಿಂದ ಸಂರಕ್ಷಕಣೆಯನ್ನು ಪಡೆಯುವುದು ಹೇಗೆಂದು ತಿಳಿಯಬೇಕಾಗಿದೆ. ಈ ಪ್ರಶ್ನೆಗೆ ಇಸ್ಲಾಂ ನೀಡುವ ಪರಿಹಾರ, ಈ ವಿಪತ್ತಿನ ಪ್ರವೇಶ ಮಾರ್ಗಗಳನ್ನು ಅಂದರೆ ನೋಟ, ಶ್ರವಣ ಮತ್ತು ಸ್ಪರ್ಶದ ಮಾರ್ಗಗಳನ್ನು ನಿರೋಧಿಸುವುದರ ಮೂಲಕ ಅದರಿಂದ ರಕ್ಷಣೆಯನ್ನು ಪಡೆಯಬಹುದೆಂದಾಗಿದೆ. ಏಕೆಂದರೆ, ವ್ಯಭಿಚಾರಕ್ಕೆ ಪ್ರೇರಣೆ ಈ ಮಾರ್ಗಗಳ ಮೂಲಕ ಉಂಟಾಗುತ್ತದೆ. ಒಬ್ಬನು ಸೌಂದರ್ಯವನ್ನು ನೋಡಿದಾಗ, ಅದರ ವರ್ಣನೆಯನ್ನು ಕೇಳಿದಾಗ ಅಥವಾ ಕರ್ಣ ಮಧುರವಾದ ರಾಗವನ್ನು ಶ್ರವಿಸಿದಾಗ ಯಾ ಮೃದುಲ ಕೋಮಲವಾದ ಶರೀರವನ್ನು ಸ್ಪರ್ಶಿಸಿದಾಗ, ಆ ಸೌಂದರ್ಯಕಾಂತಿಯಾಗಲಿ, ಅದರ ವರ್ಣನೆಯಾಗಲಿ, ಶಬ್ದ ಮಾಧುರ್ಯವಾಗಲಿ, ಶರೀರ ಮಾರ್ದವವಾಗಲಿ ಅವನಿಗೆ ಇಷ್ಟವೆಂದಾದರೆ ಅವನು ಆಕರ್ಷಿತನಾಗುತ್ತಾನೆ. ಅದರ ಫಲ ಸಮುದಾಯಕ್ಕೂ ಸದಾಚಾರ ಕರ್ಮಕ್ಕೂ ನಾಶಹೇತುಕವೆಂದು ಲೋಕವೆಲ್ಲಾ ಒಮ್ಮತವಾಗಿ ಆಕ್ಷೇಪಿಸುವ ವಿಚಾರವಾಗಿದೆ. ಆದ್ದರಿಂದ ಈ ಪಾಪದ ಪ್ರವೇಶ ಮಾರ್ಗಗಳನ್ನೆಲ್ಲಾ ತಡೆಯಲಿಕ್ಕೆ ಇಸ್ಲಾಂ ನಿರ್ದೇಶಿಸಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

*ಸತ್ಯವಿಶ್ವಾಸಿಗಳೊಡನೆ ಹೇಳು – ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ (ಕೆಳಮುಖವಾಗಿರಿಸಲಿ); ಗುಪ್ತಾಂಗಗಳನ್ನು ಕಾಪಾಡಿಕೊಳ್ಳಲಿ. (ದುಷ್ಟ ವಿಚಾರಗಳು ಪ್ರವೇಶಿಸಲು ಎಡೆಯಿರುವ ಮಾರ್ಗಗಳನ್ನೆಲ್ಲ ಭದ್ರಪಡಿಸಲಿ.) ಇದು (ಅವರ ಒಳಿತಿಗೆ ಕಾರಣವಾಗುವ) ಪರಿಶುದ್ಧ ಮಾರ್ಗವಾಗಿದೆ. ಅವರ ಕೃತ್ಯಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ. ಅದೇ ಪ್ರಕಾರ ಸತ್ಯವಿಶ್ವಾಸಿನಿಯರೊಡನೆ ಹೇಳು –*

ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ (ಕೆಳಮುಖ ವಾಗಿರಿಸಲಿ); ಗುಪ್ತಾಂಗಗಳನ್ನು ಕಾಪಾಡಲಿ. (ಪಾಪ ವಿಚಾರಗಳು ಬಂದು ಸೇರುವ ಸಕಲ ಮಾರ್ಗಗಳನ್ನು ಭದ್ರಪಡಿಸಲಿ.) ಅವರು ತಮ್ಮ ಸೌಂದರ್ಯವನ್ನು ತೋರ್ಪಡಿಸದಿರಲಿ – ತನ್ನಿಂತಾನೆ ಪ್ರಕಟ ಗೊಳ್ಳುವುದರ ಹೊರತು. ಅವರು ತಮ್ಮ ಶಿರೋವಸ್ತ್ರದಿಂದ ತಮ್ಮ ಎದೆಯನ್ನು ಮುಚ್ಚಲಿ. ಅವರು ತಮ್ಮ ಪತಿ, ಪಿತ, ಪತಿಯ ಪಿತ, ಪುತ್ರರು, ಪತಿಯ ಪುತ್ರರು, ಸಹೋದರರು, ಸಹೋದರರ ಪುತ್ರರು, ಸಹೋದರಿಯರ ಪುತ್ರರು, ತಮ್ಮಂತಹ ಸ್ತ್ರೀಯರು, ತಮ್ಮ ಅಧೀನ ದಲ್ಲಿರುವವರು (ದಾಸಿಯರು), ಪುರುಷರ ಪೈಕಿ ಲೈಂಗಿಕಾಭಿಲಾಷೆಯಿಲ್ಲದ (ವೃದ್ಧ) ಪರಿಚಾರಕರು, ಸ್ತ್ರೀಯರ ಲೈಂಗಿಕ ರಹಸ್ಯಗಳ ಅರಿವಿಲ್ಲದ ಬಾಲಕರು – ಇವರಿಗೆ ಹೊರತು ತಮ್ಮ ಸೌಂದರ್ಯವನ್ನು ತೋರ್ಪಡಿಸ ಬಾರದು. ಅವರು ತಮ್ಮ ಮುಚ್ಚಿಟ್ಟ ಸೌಂದರ್ಯವನ್ನು ಬಹಿರಂಗ ಪಡಿಸಲಿಕ್ಕಾಗಿ ತಮ್ಮ ಕಾಲುಗಳನ್ನು ನೆಲಕ್ಕೆ ಅಪ್ಪಳಿಸಿ ನಡೆಯಬಾರದು. ಎಲೈ ಸತ್ಯವಿಶ್ವಾಸಿಗಳೇ, ನೀವು ಯಶಸ್ಸುಗಳಿಸಲಿಕ್ಕೋಸ್ಕರ ಎಲ್ಲರೂ ಅಲ್ಲಾಹನ ಕಡೆಗೆ ಮರಳಿರಿ. (ಅಧ್ಯಾಯ : 24, ವಚನ : 31, 32)

ಈ ಪವಿತ್ರ ವಾಕ್ಯಗಳಲ್ಲಿ, ಪಾಪಕರ ವಿಚಾರಗಳು ಹೃದಯವನ್ನು ಪ್ರವೇಶಿಸಲು ಎಡೆಕೊಡುವ ಸಕಲ ಮಾರ್ಗಗಳನ್ನು ಸ್ತ್ರೀ–ಪುರುಷರು ಮುಚ್ಚಬೇಕೆಂದು ಆಜ್ಞಾಪಿಸಲಾಗಿದೆ. ಕಣ್ಣು ಆ ಮಾರ್ಗಗಳ ಪೈಕಿ ಒಂದಾದುದರಿಂದ ವಿಶ್ವಾಸಿಗಳು ಅವರ ನೋಟಗಳನ್ನು ಕೆಳಮುಖ ವಾಗಿರಿಸಲಿಕ್ಕೆ ವಿಧಿಸಲಾಗಿದೆ. ಇನ್ನೊಂದು ಮಾರ್ಗ ಕರ್ಣೇಂದ್ರಿಯ ವಾದುದರಿಂದ, ಸ್ತ್ರೀಯರು ಪುರುಷರ ಹಾಗೂ ಪುರುಷರು ಸ್ತ್ರೀಯರ ಮಧುರಗಾನ ಗಳನ್ನೂ ರಾಗ ವಿಶೇಷಗಳನ್ನೂ ಗಮನಿಸದಿರಲಿಕ್ಕೂ ಪರಸ್ಪರ ಶೃಂಗಾರ ಕಥೆಗಳನ್ನು ಶ್ರವಿಸದಿರಲಿಕ್ಕೂ ವಿಧಿಸಲಾಗಿದೆ. ಪಾಪ ಪ್ರೇರಣೆಗೆ ಮೂರನೆಯ ಮಾರ್ಗ ಸ್ಪರ್ಶವಾದುದರಿಂದ ನ್ಯಾಯೋಚಿತ ಅಗತ್ಯ ಮತ್ತು ಕಾರಣದ ಹೊರತು ಸ್ತ್ರೀಪುರುಷರು ಪರಸ್ಪರ ಸ್ಪರ್ಶಿಸಬಾರದೆಂದು ವಿರೋಧಿಸಲಾಗಿದೆ. ಸ್ತ್ರೀ ಪುರುಷರು ಆವಶ್ಯಾರ್ಥ ಒಟ್ಟುಗೂಡುವ ರಸ್ತೆ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ನೋಟವನ್ನು ಕೆಳಮುಖ ವಾಗಿರಿಸುವುದು ಕಷ್ಟಕರವಾದುದರಿಂದ, ಸ್ತ್ರೀಯರೊಡನೆ ಅವರು ಹೊರಗೆ ಇಳಿಯುವಾಗ ಎದೆಯನ್ನೂ ಮುಖವನ್ನೂ, ಅಂದರೆ ಅವರ ಕುತ್ತಿಗೆಯನ್ನೂ ತಲೆಯನ್ನೂ ಅವರಿಗೆ ನೋಡಲಿಕ್ಕೆ ಮತ್ತು ಉಸಿರಾಡಲಿಕ್ಕೆ ಅಗತ್ಯವಿರುವ ಭಾಗ ಹೊರತು ಮುಖದ ಬಾಕಿ ಭಾಗವನ್ನೂ ಮರೆಯಾಗಿರಿಸಬೇಕೆಂದು ಸಹ ವಿಧಿಸಲಾಗಿದೆ.

ಅತ್ಯಂತ ವಿವೇಕಯುತವಾದ ಈ ನಿರ್ದೇಶಗಳ ಕುರಿತು ನಿಷ್ಪಕ್ಷವಾಗಿಯೂ ಸ್ವತಂತ್ರವಾಗಿಯೂ ಚಿಂತನೆ ಮಾಡುವ ಯಾರಿಗೂ ಅವುಗಳ ಮಹತ್ವವನ್ನು ಒಪ್ಪದಿರಲಿಕ್ಕೆ ನಿರ್ವಾಹವಿಲ್ಲ. ಏಕೆಂದರೆ, ಅವು ಲೈಂಗಿಕವಾದ ಸಕಲ ದುರ್ವಿಕಾರಗಳನ್ನೂ ಪಾಪಗಳನ್ನೂ ನಿವಾರಿಸಲು ಪರ್ಯಾಪ್ತವಾಗಿವೆ.

ಸ್ತ್ರೀಯರು ಮನೆಯೊಳಗೆ ನಾಲ್ಕು ಗೋಡೆಗಳ ಮಧ್ಯೆ ಅಡಗಿರ ಬೇಕೆಂದು ಇಸ್ಲಾಂ ಉಪದೇಶಿಸುವುದಿಲ್ಲ. ಇಸ್ಲಾಂ ಧರ್ಮದ ಪ್ರಾರಂಭ ದಲ್ಲಿ ಮುಸ್ಲಿಂ ಸ್ತ್ರೀಯರು ಹಾಗೆ ವರ್ತಿಸಲಿಲ್ಲ. ಅವರು ಪುರುಷರೊಂದಿಗೆ ಯುದ್ಧಕಣಕ್ಕೆ ಹೋಗುತ್ತಿದ್ದರು. ಗಾಯಗೊಂಡವರಿಗೂ ರೋಗಿಗಳಿಗೂ ಶುಶ್ರೂಷೆ ಮಾಡುತ್ತಿದ್ದರು. ಸವಾರಿ ಮಾಡುತ್ತಿದ್ದರು. ಪುರುಷರಿಂದ ಕಲೆ, ವಿಜ್ಞಾನಗಳನ್ನು ಕಲಿಯುತ್ತಿದ್ದರು; ಇತರ ಪುರುಷರಿಗೆ ಅದನ್ನು ಕಲಿಸುತ್ತಿದ್ದರು. ಸಂಕ್ಷಿಪ್ತವಾಗಿ, ಅವರಿಗೆ ಪ್ರವೃತ್ತಿಯಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸಲು ಸಾಧ್ಯವಾಗಿತ್ತು. ಅವರಿಗೆ ಇದ್ದ ಆಜ್ಞೆ, ಪಾಪವಿಚಾರಗಳು ಬಂದು ಸೇರಲು ಎಡೆಕೊಡುವ ಎಲ್ಲಾ ದಾರಿಗಳನ್ನು ನಿರೋಧಿಸಲಿಕ್ಕಾಗಿ ಅವರು ಹೊರಗಿಳಿಯುವಾಗ ಅವರ ಕುತ್ತಿಗೆಯನ್ನೂ ತಲೆಯನ್ನೂ ಮುಖವನ್ನೂ ಮರೆಯಾಗಿರಬೇಕು ಅಥವಾ ಮುಸುಕು ಧರಿಸಬೇಕೆಂದಾಗಿತ್ತು. ಹಾಗಲ್ಲದೆ, ಅವರು ಮನೆಯೊಳಗೆ ಅಡಗಿರಬೇಕೆಂದೋ ವೈಜ್ಞಾನಿಕ ಕಾರ್ಯಗಳಿಂದೆಲ್ಲಾ ದೂರವಿರ ಬೇಕೆಂದೋ ಇಸ್ಲಾಂ ಉಪದೇಶಿಸುವುದಿಲ್ಲ. ಅಂತಹ ಸಂಪ್ರದಾಯ ಉತ್ತರಕಾಲದಲ್ಲಿ ರಾಜಕೀಯ ಕಾರಣಗಳನ್ನು ಆಧಾರವಾಗಿರಿಸಿ ಆಚರಿಸಿಕೊಂಡು ಬಂದದ್ದಾಗಿದೆ. ಕೆಲವು ರಾಜ್ಯಗಳಲ್ಲಿ ಸ್ತ್ರೀಯರ ಚಾರಿತ್ರ್ಯದ ಬೆಲೆ ಕೆಲವೇ ನಾಣ್ಯಗಳಿಂದ ಗಣಿಸಲ್ಪಟ್ಟಿತ್ತೆಂಬುದು ಸ್ತ್ರೀತ್ವದೊಡನೆ ತೋರಿಸಿದ ದೊಡ್ಡ ಧಿಕ್ಕಾರವೂ ನಿಂದೆಯೂ ಆಗಿರುವುದರಿಂದ, ಅಂತಹ ರಾಜ್ಯಗಳಲ್ಲಿ ಮುಸ್ಲಿಮರು ಸ್ತ್ರೀಯರ ಮಾನವನ್ನೂ ಚಾರಿತ್ರ್ಯವನ್ನೂ ಸಂರಕ್ಷಿಸಲಿಕ್ಕೆ ಇಂತಹ ನಿಬಂಧನೆಗಳನ್ನು ಸ್ವಯಂ ಸ್ವೀಕರಿಸಿದರು. ಆದರೆ ಈ ಪದ್ಧತಿಯನ್ನು ಧರ್ಮ ನಿರ್ದೇಶಿಸಲಿಲ್ಲ.

ಚಾರಿತ್ರ್ಯ ಸಂರಕ್ಷಣೆಗೆ ಸಂಬಂಧಿಸಿದ ಈ ನಿರ್ದೇಶಗಳು ಸ್ತ್ರೀಯರಿಗೆ ಅಪಮಾನಕರವೆಂದು ಕೆಲವರು ತಿಳಿದುಕೊಳ್ಳುವುದರ ಕುರಿತು ನನಗೆ ಆಶ್ಚರ್ಯವಾಗುತ್ತದೆ. ಸ್ತ್ರೀಯರು ತಲೆಯನ್ನೂ ಮುಖವನ್ನೂ ಮರೆಯಾಗಿರಬೇಕೆಂದು ಇರುವುದೇಕೆಂದರೆ, ಇದು ಜನನಿಬಿಡವಾದ ಸ್ಥಳಗಳಲ್ಲಿಯೂ ರಾಜಬೀದಿಗಳಲ್ಲಿಯೂ ಪುರುಷರು ನೋಟವನ್ನು ಕೆಳಭಾಗಕ್ಕೆ ಮಾಡುವ ಆವಶ್ಯಕತೆಯನ್ನು ಪರಿಹರಿಸುವ ಒಂದು ಏರ್ಪಾಡಾಗಿದೆ. ಪ್ರಥಮವೂ ಪ್ರಧಾನವೂ ಆದ ಆಜ್ಞೆ ನೋಟವನ್ನು ಕೆಳಮುಖ ಮಾಡುವುದಾಗಿದೆ. ಇದು ಸ್ತ್ರೀಪುರುಷರಿಗೆ ಒಂದೇ ರೀತಿಯಲ್ಲಿ ಅನ್ವಯಿಸುತ್ತದೆ. ಈ ಆಜ್ಞೆ ಅಪಮಾನಕರವೆಂದಾದರೆ, ಅದು ಸ್ತ್ರೀಯರಿಗೆ ಮಾತ್ರವಲ್ಲ, ಪುರುಷರಿಗೂ ಅಪಮಾನಕರವಾಗಿರಬೇಕಾಗುತ್ತದೆ. ಆದರೆ ಸ್ತ್ರೀಯರೊಡನೆ ಮುಖವನ್ನು ಮರೆಯಾಗಿರಿಸಲು ಹೇಳಿ ಪುರುಷರೊಡನೆ ಹಾಗೆ ಹೇಳದಿರಲಿಕ್ಕೆ ಕಾರಣವೇನೆಂದು ಇಲ್ಲಿ ಪ್ರಶ್ನೆಯೇಳಬಹುದು. ಅದಕ್ಕೆ ಉತ್ತರ ಈ ರೀತಿಯಾಗಿದೆ: ಇಸ್ಲಾಂ ಧರ್ಮ ಸ್ತ್ರೀಯರ ಮತ್ತು ಪುರುಷರ ಕಾರ್ಯಕ್ಷೇತ್ರಗಳು ಬೇರೆ ಬೇರೆಯೆಂದು ಕಲಿಸುತ್ತದೆ. ಸ್ತ್ರೀಯರ ಪ್ರಥಮ ಹಾಗೂ ಪ್ರಧಾನ ಕರ್ತವ್ಯ ಮುಂದಿನ ಪೀಳಿಗೆಯ ಪಾಲನೆ ಪೋಷಣೆ ಮತ್ತು ಶಿಕ್ಷಣಗಳನ್ನು ಸರಿಯಾದ ರೀತಿಯಲ್ಲಿ ನಡೆಸುವುದಾಗಿದೆ. ಆದರೆ, ಅವರಿಗೆ ಜೀವನೋಪಾಯಗಳನ್ನು ಒದಗಿಸಿಕೊಡುವುದು ಪುರುಷರ ಧರ್ಮ. ಪುರುಷರಿಗೆ ಈ ಧರ್ಮನಿರ್ವಹಣೆಗಾಗಿ ತಮ್ಮ ಹೆಚ್ಚಿನ ಸಮಯವನ್ನು ಮನೆಯಿಂದ ಹೊರಗೆ ಕಳೆಯಬೇಕಾಗಿದೆ. ಹಾಗೆ ಪುರುಷರ ಕಾರ್ಯಕ್ಷೇತ್ರ ರಸ್ತೆಗಳೂ ಸಾರ್ವಜನಿಕ ಸ್ಥಳಗಳೂ ಆಗಿರುವಾಗ ಸ್ತ್ರೀಯರದು ಸ್ವಂತ ಮನೆಯಾಗಿದೆ. ಇಸ್ಲಾಂ ಧರ್ಮ ಪ್ರತಿಯೋರ್ವರಿಗೆ ಅವರವರ ಕಾರ್ಯಕ್ಷೇತ್ರಗಳಲ್ಲಿ ಸ್ವಾತಂತ್ರ್ಯ ನೀಡಿ, ಇತರರ ಕಾರ್ಯಕ್ಷೇತ್ರಗಳಲ್ಲಿ ಆ ಸ್ವಾತಂತ್ರ್ಯಕ್ಕೆ ಒಂದು ಪರಿಮಿತಿಯನ್ನು ನಿಶ್ಚಯಿಸಿದೆ. ಪುರುಷರು ಅನ್ಯಗೃಹವನ್ನು ಪ್ರವೇಶಿಸುವಾಗ ಆ ಮನೆಯವರೊಡನೆ ಪ್ರಥಮವಾಗಿ ಒಪ್ಪಿಗೆಯನ್ನು ಪಡೆಯಬೇಕೆಂದು ವಿಧಿಸಿದೆ. ಏಕೆಂದರೆ ಅದು ಸ್ತ್ರೀಯರ ಸ್ವಾತಂತ್ರ್ಯರಂಗವಾಗಿದೆ. ಆದರೆ ಸ್ತ್ರೀಯರು ಹೊರಗೆ ಸಂಚರಿಸಲು ಪುರುಷರ ಒಪ್ಪಿಗೆಯನ್ನು ಪಡೆಯಬೇಕೆಂಬ ನಿಬಂಧನೆ ಇಲ್ಲ. ಆದರೂ ಮೇಲೆ ಪ್ರಸ್ತಾಪಿಸಿದ ರೀತಿಯ ಮುಂಜಾಗ್ರತೆಯನ್ನು ಕೈಗೊಳ್ಳಲು ವಿಧಿಸಿದೆ. ಸ್ತ್ರೀಯರಿಗೆ ರಸ್ತೆಗಳಲ್ಲೂ ಸಾರ್ವನಿಕ ಸ್ಥಳಗಳಲ್ಲೂ ನ್ಯಾಯೋಚಿತ ಆವಶ್ಯಕತೆ ಇರಬಹುದು. ಆದುದರಿಂದ ಪುರುಷರ ಸಮ್ಮತಿ ಇಲ್ಲದೆ ಅವರು ಹೊರಗೆ ಸಂಚರಿಸಬಹುದಾಗಿದೆ. ಆದರೆ ಪುರುಷರಿಗೆ ಅನ್ಯಗೃಹದೊಳಗೆ, ಒಳಗಿರುವವರ ಅನುಮತಿ ಇಲ್ಲದೆ ನ್ಯಾಯೋಚಿತವಾದ ಒಂದು ಆವಶ್ಯಕತೆ ಉಂಟಾಗಬಾರದುದರಿಂದ, ಅವರ ಸಮ್ಮತಿ ಪಡೆಯದೆ ಒಳಗೆ ಪ್ರವೇಶಿಸಬಾರದೆಂಬ ಒಂದು ನಿಬಂಧನೆಯನ್ನು ಇಸ್ಲಾಂ ನಿರ್ದೇಶಿಸಿರುತ್ತದೆ. ಒಟ್ಟಾರೆ, ಪರದಾ ಸಂಪ್ರದಾಯಕ್ಕೆ ಸಂಬಂಧಿಸಿದ ಈ ನಿಬಂಧನೆ ಸ್ತ್ರೀಗಾಗಲೀ ಪುರುಷನಿಗಾಗಲೀ ಅಪಮಾನಕರವೆಂಬ ಪ್ರಶ್ನೆಗೆ ಅವಕಾಶವೆಲ್ಲ. ಈ ಪರದಾ ಸಂಪ್ರದಾಯವಾದರೋ ಸದಾಚಾರ ಪರವಾದ ಸುಧಾರಣೆಗಿರುವ ಒಂದು ಪರಿಪೂರ್ಣ ಪದ್ಧತಿಯಾಗಿದೆ. ■

# ಬುರ್ಖಾ ಧರಿಸಿ ಆಕ್ಸ್‌ಫರ್ಡ್‌ನಲ್ಲಿ

– ಡಾ॥ ಅಮತುಲ್ ಮುಜೀಬ್, ಡಿ.ಫಿಲ್. (ಆಕ್ಸನ್)

ನಾನು ನನ್ನ ವಿದ್ಯಾಭ್ಯಾಸ ಕಾಲವನ್ನು ಪಾಕಿಸ್ತಾನದಲ್ಲೂ ಹೊರಗೂ ಇಸ್ಲಾಮೀ ಪರ್ದಾ ಧರಿಸಿಕೊಂಡೇ ಪೂರ್ತಿಗೊಳಿಸಿರುವೆನು. ಪಾಕಿಸ್ತಾನದಲ್ಲಿ ಮನೆಯಿಂದ ಹೊರಗೆ ಹೋಗುವಾಗಲೂ ಲಾಬೊರಟರಿಯಲ್ಲಿ ಪ್ರಾಕ್ಟಿಕಲ್ ಮಾಡುವಾಗಲೂ ಬುರ್ಖಾ ಧರಿಸುವುದರಲ್ಲಿ ನನಗೆ ಪ್ರಯಾಸವೇನೂ ಉಂಟಾಗಲಿಲ್ಲ. ಆದರೆ ಎಂ.ಎಸ್.ಸಿ.ಯ ನಂತರದ ನನ್ನ ವ್ಯಾಸಂಗದಲ್ಲಿ ಆರಂಭದಿಂದಲೇ ಗೋಷಾ ಪದ್ಧತಿಯನ್ನು ಆಚರಿಸಬೇಕೆಂಬ ನನ್ನ ನಿಷ್ಕರ್ಷೆ ನನಗೆ ಸ್ವಲ್ಪ ತೊಡಕುಂಟುಮಾಡಿತು. ವಿದೇಶಕ್ಕೆ ಹೋಗಲಿಕ್ಕೆ ಸ್ಕಾಲರ್‌ಶಿಪ್‌ಗಾಗಿ ಅರ್ಜಿ ಸಲ್ಲಿಸಿದಾಗ ದೇವಾನುಗ್ರಹದಿಂದ ಯೋಗ್ಯತಾನುಸಾರ ನಾನುಆಯ್ಕೆಗೊಂಡೆನಾದರೂ ಇಂಟರ್‌ವ್ಯೂ ವೇಳೆಯಲ್ಲಿ ಸೆಲೆಕ್ಷನ್ ಕಮಿಟಿಯ ವಿದೇಶಿ ಕಾರ್ಯದರ್ಶಿ ಗೋಷಾದ ಬಗ್ಗೆ ನನ್ನ ನಿಷ್ಠೆ ಪರದೇಶದಲ್ಲಿ ತೊಂದರೆಯುಂಟುಮಾಡೀತೆಂದು ಹೇಳಿ ನನ್ನ ಅಪೇಕ್ಷೆಯನ್ನು ತಳ್ಳಿಹಾಕಿದರು. ವ್ಯಾಸಂಗ ವೇತನ ಸಿಗದುದರಿಂದ ಸ್ವಾಭಾವಿಕವಾಗಿ ನನಗೆ ದುಃಖವುಂಟಾದರೂ ಅಲ್ಲಾಹನು ಇಷ್ಟಪಡದ ರೀತಿಯಲ್ಲಿ ವಿದ್ಯಾಬ್ಯಾಸ ಮಾಡಿ ಏನು ಪ್ರಯೋಜನವೆಂದು ನಾನು ಯೋಚಿಸಿದೆ. ಅಲ್ಲಾಹನಿಗೆ ಸಹಸ್ರ ಸಹಸ್ರ ನಮನಗಳು! ಅವನು ಕೆಲವೇ ಮಾಸಗಳೊಳಗೆ ಬೇರೊಂದು ಸ್ಕಾಲರ್‌ಶಿಪ್‌ನ ದಾರಿಯನ್ನು ನನಗೆ ತೆರೆದುಕೊಟ್ಟನು.

ಇಂಗ್ಲೆಂಡಿಗೆ ಹೋದ ನಂತರ ಮೊದಲ ಒಂದು ವರ್ಷ ಕಾಲ ಪರ್ದಾದ ಬಗ್ಗೆ ನನಗೆ ತೊಂದರೆಗಳು ಎದುರಾದುವು. ಅಲ್ಲಿ ಬುರ್ಖಾ ಬಿಡಿ, ಚಾದರ್ (ಮೇಲುಹೊದಿಕೆ) ಧರಿಸಿದ ಸ್ತ್ರೀಯರನ್ನು ಅಪೂರ್ವವಾಗಿ ಕಾಣಬಹುದು. ಆ ರಾಜ್ಯದವರಿಗೆ ಬುರ್ಖಾ ಒಂದು ಅದ್ಭುತವಾಗಿತ್ತು. ಬುರ್ಖಾದ ಕಪ್ಪು ಬಣ್ಣವನ್ನು ಕಂಡು ಕೆಲವರು ನನ್ನನ್ನು ವಿಧವೆಯೆಂದು ತಿಳಿದುಕೊಂಡರು. ರಸ್ತೆಗಳಲ್ಲಿ ನಡೆಯುವಾಗ ಹಲವರ ಪರಿಹಾಸ್ಯ ಮಾತುಗಳಿಗೆ ನಾನು ಗುರಿಯಾದೆನು. ಅಪಹಾಸ್ಯ ಮಾಡುವವರ ಪೈಕಿ ಆಂಗ್ಲೇಯರು ಕಮ್ಮಿ ಮತ್ತು ಏಶ್ಯಾದವರು ಹೆಚ್ಚು.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸದಸ್ಯರು ವಿದ್ಯಾರ್ಥಿಗಳಾದರೂ ಪ್ರಾಧ್ಯಾಪಕರಾದರೂ ಬೇರೆ ಯಾವುದಾದರೂ ಕಾಲೇಜಿನೊಂದಿಗೆ ಸಂಬಂಧವಿರಿಸಬೇಕಾದುದು ಅಗತ್ಯ. (ಕಾಂಬ್ರಿಜ್ ವಿಶ್ವವಿದ್ಯಾಲಯದಲ್ಲೂ ಇದೇ ನಿಯಮವಿದೆ.) ಆದರೆ ಪಾಠಪ್ರವಚನಗಳನ್ನು ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಒಂದೇ ಸ್ಥಳದಲ್ಲಿ ನಡೆಸಲಾಗುತ್ತದೆ. ಹಾಗೆಯೇ ಸಂಶೋಧನೆ ನಡೆಸುವುದು ವಿದ್ಯಾರ್ಥಿಗಳೂ ಪ್ರೊಫೆಸರುಗಳೂ ನಿರ್ದಿಷ್ಟ ಡಿಪಾರ್ಟ್‌ಮೆಂಟುಗಳಲ್ಲಾಗಿದೆ. ನಾನು ಒಂದು ವನಿತಾ ಕಾಲೇಜಿಗೆ ಸೇರಿದವಳು. ಮೂರು ವರ್ಷಗಳ ಕಾಲ ಅಲ್ಲಿ ನಾನು ವ್ಯಾಸಂಗ ಮಾಡಿದೆ. ಲೆಕ್ಚರ್ ಕೇಳಲಿಕ್ಕೂ ರಿಸರ್ಚ್ ಮಾಡಲಿಕ್ಕೂ ನಾನು ಬುರ್ಖಾ ಧರಿಸಿಕೊಂಡೇ ಹೋಗುತ್ತಿದ್ದೆ. ನನ್ನ ಈ ರೀತಿಯನ್ನು ವಿದ್ಯಾರ್ಥಿಗಳೂ ಪ್ರೊಫೆಸರ್‌ಗಳೂ ಬಹಳ ಆಶ್ಚರ್ಯದಿಂದಲೂ 'ಅನುಕಂಪ'ದಿಂದಲೂ ವೀಕ್ಷಿಸುತ್ತಿದ್ದರು. ಇತರರು ಏನು ಬೇಕಾದರೂ ಭಾವಿಸಲಿ. ನಾನು ನನ್ನ ದೇವರನ್ನು ಸಂಪ್ರೀತಗೊಳಿಸಬೇಕೆಂದು ದೃಢಚಿತ್ತನಾಗಿದ್ದೆ.

ಸುಮಾರು ಒಂದು ವರ್ಷದ ಬಳಿಕ ಅವರಲ್ಲಿ ಬದಲಾವಣೆಯುಂಟಾಯಿತು. ನನ್ನನ್ನು ನಿಂದಾದೃಷ್ಟಿಯಿಂದ ವೀಕ್ಷಿಸುತ್ತಿದ್ದವರು ಗೌರವದಿಂದ ಕಾಣಲು ತೊಡಗಿದರು. ನಾನು ನಿಂದಿಸಲ್ಪಟ್ಟಾಗ ಮತ್ತು ಪರಿಹಾಸ್ಯಕ್ಕೆ ಈಡಾದಾಗ ನನಗಿಂತ ಹೆಚ್ಚು ದುಗುಡವೂ ನೋವೂ ನನ್ನ ಸಹಪಾಠಿಗಳಿಗೂ ಅಧ್ಯಾಪಕರಿಗೂ ಉಂಟಾಗುತ್ತಿತ್ತು. ನಾನು ಒಂದು ಘಟನೆಯನ್ನು ವಿವರಿಸುತ್ತೇನೆ:

ಒಂದು ದಿನ ಸಂಜೆ ನಾನೂ ಸಿಂಗಾಪುರದ ನನ್ನ ಚೀನೀ ಸಹಪಾಠಿಯೂ ಹಾಸ್ಟೆಲಿಗೆ ಮರಳುತ್ತಿದ್ದೆವು. ದಾರಿಯಲ್ಲಿ ಒಂದು ಶರಾಬು ಅಂಗಡಿಯ ಬಳಿ ಕೆಲವು ಅರಬಿ ಯುವಕರು ನಿಂತುಕೊಂಡಿದ್ದರು. ಅವರು ನನ್ನ ಬುರ್ಖಾದ ಕುರಿತು ಅಪಹಾಸ್ಯ ಮಾಡತೊಡಗಿದರು. ನಾನು ವಾಡಿಕೆಯಂತೆ ಅದೇನೂ ಕೇಳದ ಮಟ್ಟಿನಲ್ಲಿ ದಾಟಿ ಹೋಗುತ್ತಿದ್ದೆ. ಆದರೆ ನನ್ನ ಸಹಪಾಠಿ ತುಂಬಾ ಕೋಪಗೊಂಡು ಅಲ್ಲೇ ನಿಂತುಬಿಟ್ಟಳು. ಅವರಿಗೆ ಬುದ್ಧಿಕಲಿಸಿ ಬರುತ್ತೇನೆಂದು ಆಕೆ ಹೇಳಿದಳು. ಆಕೆಯನ್ನು ಅಲ್ಲಿಂದ ಕದಲಿಸಲಿಕ್ಕೆ ನಾನು ಪ್ರಯಾಸಪಡಬೇಕಾಯಿತು. ನನ್ನನ್ನೇಕೆ ತಡೆದೆ ಎಂದು ಕೇಳಿ ಆಕೆ ಆಮೇಲೆ ನನ್ನೊಡನೆ ತರಾಟೆಗಿಳಿದಳು. ನನ್ನನ್ನು ಯಾರಾದರೂ ಅಪಹಾಸ್ಯ ಮಾಡಿದರೆ ನನಗೇನೂ ತಟ್ಟುವುದಿಲ್ಲ. ನಾನು ಅದಕ್ಕೆಲ್ಲಾ ಲಕ್ಷ್ಯಕೊಡುವುದಿಲ್ಲವೆಂದು ನಾನು ಆಕೆಯನ್ನು ಸಮಾಧಾನಪಡಿಸಿದೆ. "ಮುಸ್ಲಿಮರೆಂದು ಹೇಳುವ ನೀವು ಶರಾಬು ಅಂಗಡಿಯಲ್ಲಿ ಕಾಲಕಳೆಯುತ್ತೀರಿ. ಇಸ್ಲಾಮೀ ಸಂಪ್ರದಾಯವನ್ನು ಪಾಲಿಸುವ ಈ ಹೆಣ್ಮಗಳನ್ನು ನೀವು ಅಪಹಾಸ್ಯ ಮಾಡುತ್ತೀರಿ; ನಿಮಗೆ ನಾಚಿಕೆಯಾಗುವುದಿಲ್ಲವೇ?" ಹೀಗೆ ತಾನು ಅವರೊಡನೆ ಕೇಳಲು ಉದ್ದೇಶಿಸಿದ್ದೆ ಎಂದಾಕೆ ಹೇಳಿದಳು.

ಡಾಕ್ಟರೇಟ್‌ನ ಎರಡನೇ ವರ್ಷ ಒಂದು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲಿಕ್ಕೆ ನಾನು ಸ್ಕಾಟ್‌ಲಾಂಡಿಗೆ ಹೋಗಿದ್ದೆ. ಅಲ್ಲಾಹನ ಅನುಗ್ರಹದಿಂದ ಅಲ್ಲಿ ಸಮ್ಮೇಳಿಸಿದ್ದ ಬ್ರಿಟಿಷ್ ಯೂನಿವರ್ಸಿಟಿಗಳ ವಿದ್ಯಾರ್ಥಿಗಳಾದ ರಿಸರ್ಚ್ ಸ್ಕಾಲರ್‌ಗಳಲ್ಲಿ ನನ್ನ ಪ್ರಬಂಧ ಮಾತ್ರ ಆಯ್ಕೆಗೊಂಡಿತು. ಅದರ ಕುರಿತು ವಿಶದೀಕರಿಸಿ ಭಾಷಣ ಮಾಡಲು ನನ್ನೊಡನೆ ಕೇಳಿಕೊಳ್ಳಲಾಯಿತು. ಸಮ್ಮೇಳನದಲ್ಲಿ ಭಾಗವಹಿಸಲಿಕ್ಕೆ ಬಂದವರಿಗೆ ಊರೆಲ್ಲಾ ತಿರುಗಾಡಿಕೊಂಡು ಬರಲಿಕ್ಕೆ ಏರ್ಪಾಡುಗಳನ್ನು ಮಾಡಲಾಗಿತ್ತು. ಒಂದು ಆದಿತ್ಯವಾರದಂದು ದಕ್ಷಿಣ ದಿಕ್ಕಿನಲ್ಲಿರುವ ಬಲ್ಲಾಟರ್ (Ballater) ಎಂಬಗ್ರಾಮದಲ್ಲಿ ಸಾವಿರಾರು ಅಡಿ ಎತ್ತರದ ಒಂದು ಪರ್ವತ ಶಿಖರಕ್ಕೇರುವ ಕಾರ್ಯಕ್ರಮವಿತ್ತು. ಪರ್ವತಾರೋಹಣದಲ್ಲಿ ಆಸಕ್ತಿಯಿಲ್ಲದವರಿಗೆ, ಮುಖ್ಯವಾಗಿ ಸ್ತ್ರೀಯರಿಗೆ ಸ್ಕಾಟ್‌ಲಾಂಡಿನ ರಾಜಧಾನಿ ಎಡಿನ್‌ಬರ್ಗ್ ಸಂದರ್ಶಿಸುವ ಕಾರ್ಯಕ್ರಮವಿತ್ತು. ನಾನು ಪರ್ವತಾರೋಹಣವನ್ನು ಆಯ್ಕೆ ಮಾಡಿದೆ. ಹಲವರು ಅದು ನನ್ನ ಮಟ್ಟಿಗೆ ಯೋಗ್ಯ ಆಯ್ಕೆಯಲ್ಲವೆಂದು ಭಾವಿಸಿದರು. ನಾನು ಯೋಚಿಸಿದೆ: ದೇವರು ಸುಂದರವಾದ ನಿಸರ್ಗ ಸಂಪತ್ತನ್ನು ಸೃಷ್ಟಿಸಿರುವನು. ಅದನ್ನು ನೋಡುವುದಕ್ಕೆ ತಡೆಯೇನೂ ಇಲ್ಲ. ಪಟ್ಟಣವನ್ನು ಬೇರೊಂದು ಸಂದರ್ಭದಲ್ಲಿ ಒಬ್ಬಂಟಿಯಾಗಿಯೂ ಸಂದರ್ಶಿಸಬಹುದು. ಆದರೆ ಒಂಟಿಯಾಗಿ ಪರ್ವತವನ್ನೇರುವುದು ಪ್ರಯಾಸಕರ. ಹಾಗೆ ಪರ್ವತಾರೋಹಣ ಕಾರ್ಯಕ್ರಮದಲ್ಲಿ ನಾನು ಸಹ ಪಾಲ್ಗೊಂಡೆನು. ಕೊನೆಗೆ ಕಾರ್ಯಕ್ರಮ ಮುಗಿದು ಜೊತೆಗಾರರೊಂದಿಗೆ ಹಿಂತೆರಳಿದಾಗ ಕಾನ್ಫರೆನ್ಸ್ ಡೈರೆಕ್ಟರ್ ನನ್ನನ್ನು ತುಂಬಾ ಪ್ರಶಂಸೆ ಮಾಡಿ ನನ್ನ ವಿಶೇಷ ತರದ ಪೋಷಾಕಿನಿಂದ ಏನೂ ಮಾಡಲು ಸಾಧ್ಯವಿದೆಯೆಂದು ನಾನು ಸಾಬೀತುಪಡಿಸಿರುವೆನೆಂದು ಹೇಳಿದರು.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಇಲ್ಲಿನ ಇತರ ಕಾಲೇಜುಗಳಲ್ಲಿರುವಂತೆ ಯೂನಿಫಾರ್ಮ್ ಇಲ್ಲ. ಆದ್ದರಿಂದ ನಾನು ಬುರ್ಖಾ ಧರಿಸುವುದು ಇಲ್ಲಿ ಆಕ್ಷೇಪಾರ್ಹವಾಗಿರಲಿಲ್ಲ. ಆದರೆ ಪರೀಕ್ಷಾ ವೇಳೆಯಲ್ಲೂ ಘಟಿಕೋತ್ಸವ ಸಂದರ್ಭದಲ್ಲೂ ವಿಶೇಷ ಉಡುಪು ಧರಿಸುವುದು ಅಗತ್ಯವಾಗಿತ್ತು. ಮಹಿಳೆಯರು ಬಿಳಿ ರವಿಕೆ, ಕಪ್ಪು

ಲಂಗ ಮತ್ತು ಮೇಲೆ ಕಪ್ಪು ಗೌನು ಧರಿಸಬೇಕಾಗಿತ್ತು. ವಾಚಾ ಪರೀಕ್ಷೆಯ (Viva) ಸಮಯದಲ್ಲೂ ಇದೇ ರೀತಿಯ ಉಡುಪನ್ನು ಧರಿಸಬೇಕಾಗಿತ್ತು. ನಾನು ಕಳವಳಗೊಂಡು ಬಹಳ ಪ್ರಾರ್ಥನೆ ಮಾಡಿದೆ: "ಅಲ್ಲಾಹನೆ, ನಿನ್ನ ಅನುಗ್ರಹದಿಂದ ಮೂರು ವರ್ಷಕಾಲ ಗೋಷಾ ಸಹಿತ ನನ್ನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿದೆ. ಕೊನೆಯ ಘಟ್ಟದಲ್ಲಿ ಸ್ಕರ್ಟ್ ಮತ್ತು ಬ್ಲೌಸ್ ಧರಿಸಿ ಡಿಪಾರ್ಟ್‌ಮೆಂಟಿಗೆ ಹೋಗುವುದಾದರೆ, ಪರ್ದಾ ನನ್ನ ಪ್ರಗತಿಗೆ ತಡೆಯಾಗುತ್ತದೆಂಬ ಆರೋಪ ಸರಿಯೆಂದು ಸಾಬೀತಾದೀತು. ಆದ್ದರಿಂದ ಒಂದು ಮಾರ್ಗವನ್ನು ನನಗೆ ತೋರಿಸು." ನಾನು ಯೂನಿವರ್ಸಿಟಿಯ ನಿಯಮಾವಳಿಯನ್ನು ಓದಿದೆ. ಆ ವಿಶ್ವವಿದ್ಯಾಲಯದಂತೆ ನಿಯಮಸಂಹಿತೆಯೂ ಸುಮಾರು 750 ವರ್ಷ ಹಿಂದಿನದಾಗಿದೆ. ಅದರಲ್ಲಿ ಬದಲಾವಣೆ ಮಾಡಲು ಯಾರಿಗೂ ಅಧಿಕಾರವಿಲ್ಲ. ನಿಯಮಾವಳಿಯ ಒಂದು ಕಡೆಯಲ್ಲಿ, ಅಗತ್ಯ ಬಿದ್ದರೆ ಯಾರಿಗಾದರೂ ಹಿಂದಿನ ಯೂನಿವರ್ಸಿಟಿಯ ಯೂನಿಫಾರ್ಮ್ ಧರಿಸಬಹುದೆಂದು ಬರೆದುದಾಗಿ ನಾನು ಕಂಡೆ. ಪಂಜಾಬ್ (ಪಾಕಿಸ್ತಾನ್) ಯೂನಿವರ್ಸಿಟಿಯಲ್ಲಿ ಪ್ರತ್ಯೇಕ ಸಮವಸ್ತ್ರ ನಿರ್ಬಂಧಕರವಾಗಿರಲಿಲ್ಲ. ಪದವೀದಾನ ಸಮಾರಂಭದಲ್ಲಿ ವನಿತಾ ಲೆಕ್ಚರರುಗಳು ಸಾಮಾನ್ಯವಾಗಿ ಬಿಳಿ ಸೀರೆ ಧರಿಸುತ್ತಿದ್ದರು. ನಾನು ಬಿಳಿ ಸೀರೆಗೆ ಬದಲು ಬಿಳಿ ಬುರ್ಖಾ ಮತ್ತು ಮೇಲೆ ಕಪ್ಪು ನಿಲುವಂಗಿ ಧರಿಸಲು ನಿರ್ಧರಿಸಿದೆ. ಹಾಗೆ ಮಾಡಿದರೆ ಬಿಳಿ ಮತ್ತು ಕಪ್ಪು ಪೋಷಾಕು ಧರಿಸಬೇಕೆಂಬ ನಿಬಂಧನೆ ಪಾಲಿಸಿದಂತಾಗುತ್ತದೆ. ಹಾಗೆ ಬಿಳಿ ಬುರ್ಖಾ ಮತ್ತು ಕಪ್ಪು ನಿಲುವಂಗಿ ಧರಿಸಿ ವಾಚಾ ಪರೀಕ್ಷೆಗಾಗಿ ಕೋಣೆಯನ್ನು ಪ್ರವೇಶಿಸಿದಾಗ ಪರೀಕ್ಷೆ ನಡೆಸುವ ಪ್ರೊಫೆಸರ್ ಮೊದಲು ನನ್ನೊಡನೆ ಕೇಳಿದ ಪ್ರಶ್ನೆ ಒಂದು ವೇಳೆ ನಿಮ್ಮನ್ನೂ ಚಕಿತಗೊಳಿಸೀತು. ಅವರು ಕೇಳಿದರು – "ನಿಮಗೆ ಗೊತ್ತಿದೆಯೇ, ನಾವಿಲ್ಲಿ ಅರ್ಧ ತಾಸು ಕಾಲ ಯಾವ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದೆವೆಂದು?" ನಾನು ಗಾಬರಿಗೊಂಡೆ. ನನ್ನ ಸಂಶೋಧನಾ ಪ್ರಬಂಧದಲ್ಲಿ ಕುಂದೇನಾದರೂ ಇದ್ದಿರಬಹುದೆಂದೂ ಅದರ ಬಗ್ಗೆ ಅವರಿಗೆ ಭಿನ್ನಾಭಿಪ್ರಾಯವಿರಬಹು ದೆಂದೂ ನಾನು ಊಹಿಸಿದೆ. ಅವರು ಹೇಳಿದರು: "ಯಾವ ಡ್ರೆಸ್ಸಿನಲ್ಲಿ ಇಂದು ನೀವು ಇಲ್ಲಿಗೆ ಬರಬಹುದೆಂದಾಗಿತ್ತು ನಮ್ಮ ಚರ್ಚಾ ವಿಷಯ. ಆದರೆ ನಿಮ್ಮ ಉಡುಪು ನಿಮ್ಮ ವಿದ್ಯಾಭ್ಯಾಸಕ್ಕೆ ತಡೆಯಾಗುವುದಿಲ್ಲವೆಂದು ನಮಗೆ ಮನವರಿಕೆಯಾಯಿತು.: ಇದೇ ರೀತಿ ಪದವೀದಾನ ಸಮಾರಂಭ ದಲ್ಲೂ ನಾನು ಬಿಳಿ ಬುರ್ಖಾ ಮತ್ತು ಕಪ್ಪು ಗೌನು ಧರಿಸಿದೆನು. ಅಲ್ಲಿಯ ಸಂಪ್ರದಾಯದ ಪ್ರಕಾರ ವೈಸ್ ಚಾನ್ಸಲರಿಗೆ ನಾನು ಹಸ್ತಲಾಘವ ವನ್ನೂ ಮಾಡಲಿಲ್ಲ. ಆಗ ನನ್ನ ಕಾಲೇಜ್ ಸೆಕ್ರೆಟರಿ (ಅವರನ್ನು ನಾವು ಪಾಕಿಸ್ತಾನದಲ್ಲಿ ವೈಸ್ ಪ್ರಿನ್ಸಿಪಾಲ್ ಎಂದು ಕರೆಯುತ್ತೇವೆ) ನನ್ನೊಡನೆ ಹೇಳಿದರು – ಈ ವಿಶ್ವವಿದ್ಯಾಲಯದ ನೂರಾರು ವರ್ಷಗಳ ದೀರ್ಘಕಾಲ ಚರಿತ್ರೆಯಲ್ಲಿ ನಾನು ಹೊಸ ಒಂದು ಕ್ರಮವನ್ನು ಸೃಷ್ಟಿಸಿರುವೆನೆಂದು.

ದೇವಾನುಗ್ರಹದಿಂದ ವಾಚಾಪರೀಕ್ಷೆಯಲ್ಲಿ ನನ್ನ ಉನ್ನತ ಶ್ರೇಣಿಯ ಯಶಸ್ಸು ಮತ್ತು ಡಾಕ್ಟರೇಟಿಗಾಗಿ ಸಿದ್ಧಪಡಿಸಿದ ಏಳು ಸಂಶೋಧಕ ಪ್ರಬಂಧಗಳಿಗೆ ಲಭಿಸಿದ ಮನ್ನಣೆಯ ಪರಿಣಾಮವಾಗಿ ನನ್ನ ಅಧ್ಯಾಪಿಕೆಯರು ನನ್ನನ್ನು ಬಹಳವಾಗಿ ಶ್ಲಾಘಿಸಿದರು. ನನ್ನ ಕಾಲೇಜ್ ಪ್ರಿನ್ಸಿಪಾಲ್ ನನ್ನ ಹಾಸ್ಟೆಲ್ ಕೋಣೆಗೆ ಬಂದು ನನ್ನನ್ನು ಪ್ರಶಂಸಿದಾಗ ನಾನು ಚಕಿತಗೊಂಡೆ. ನಾನು ಲಜ್ಜಿತಳಾಗಿ, ನನ್ನನ್ನು ನಿಮ್ಮಲ್ಲಿಗೆ ಕರೆಯ ಬಹುದಿತ್ತಲ್ಲವೇ ಎಂದು ಹೇಳಿದಾಗ ಅವರು, "ಅಲ್ಲ, ನಿಮ್ಮಂಥ ಪ್ರತಿಭೆಯುಳ್ಳ, ಆದರ್ಶ ಸ್ಥೈರ್ಯವುಳ್ಳ ವಿದ್ಯಾರ್ಥಿಗಳನ್ನು ಯಾವಾಗಲೂ ಕಾಣುವುದು ದುರ್ಲಭ. ಸಂರೋಲ್ ಕಾಲೇಜಿಗೆ (ನನ್ನ ಕಾಲೇಜಿನ ಹೆಸರು) ನಿಮ್ಮ ಮೇಲೆ ಅಭಿಮಾನವಿದೆ" ಎಂದು ಹೇಳಿದರು. ಈ ವಿಷಯವನ್ನು ನಾನು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ಅಹ್ಮದಿಯಾ ಜಮಾಅತಿನ ಚತುರ್ಥ ಸರ್ವೋನ್ನತ ನಾಯಕ) ಅವರಿಗೆ ಬರೆದು ತಿಳಿಸಿದಾಗ, ಖಲೀಫರು ಅವರ ಸ್ವಂತ ಕೈ ಬರಹದಲ್ಲಿ ಉತ್ತರ ಬರೆದರು: "ಒಂದು ಸಂರೋಲ್ ಕಾಲೇಜೇನು, ದೂರದೃಷ್ಟಿಯಿದ್ದರೆ ಮುಸ್ಲಿಂ ಜಗತ್ತೇ ನಿಮ್ಮ ಬಗ್ಗೆ ಅಭಿಮಾನಪಡಬೇಕಾಗಿದೆ."

ಅಲ್ಲಾಹನ ಅನುಗ್ರಹದಿಂದ ಬುರ್ಖಾ ಧರಿಸಿಕೊಂಡೇ ನಾನು ಉನ್ನತ ವಿದ್ಯಾಭ್ಯಾಸವನ್ನು ಗಳಿಸಿ ಹಲವು ರಾಜ್ಯಗಳನ್ನು ಸಂದರ್ಶಿಸಿದೆನು. ದಿವಂಗತ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ –ಅಹ್ಮದಿಯಾ ಜಮಾಅತಿನ ಮೂರನೇ ಖಲೀಫ – (ಅವರ ಪ್ರೋತ್ಸಾಹ ಮತ್ತು ಪ್ರಾರ್ಥನೆಯ ಫಲವಾಗಿಯೂ ಅವರ ನಿರ್ದೇಶನ ಪ್ರಕಾರವೂ ನಾನು ಆಕ್ಸ್‌ಫರ್ಡಿಗೆ ಹೋಗಿದ್ದೆ) ನಾನು ಹೋಗುವ ಸಂದರ್ಭದಲ್ಲಿ ನನಗೆ, "ಕಲಿಯುವುದು ಮಾತ್ರವಲ್ಲ, ಯುರೋಪಿನ ಪರ್ಯಟನೆ ಸಹ ಮಾಡಬೇಕು" ಎಂದು ಉಪದೇಶಿಸಿದ್ದರು.

ಅಲ್ಲಾಹನ ಅನುಗ್ರಹದಿಂದ ನಾನು ಕಲಿತೆ. ಯುರೋಪ್ ದೇಶಗಳ ಪ್ರವಾಸವನ್ನೂ ಮಾಡಿದೆ. ಆಕ್ಸ್‌ಫರ್ಡ್‌ನಲ್ಲಿ ಡಾಕ್ಟರೇಟ್ ಪೂರ್ಣ ಗೊಳಿಸಿದ ನಂತರ ಪೋಸ್ಟ್ ಡಾಕ್ಟರೇಟ್ ರಿಸರ್ಚ್ ಸಹ ಮುಗಿಸಿದೆ. ಆ ಮಧ್ಯೆ ರಜೆಯ ಮೇಲೆ ನಾನು ಸ್ವಿಟ್ಝರ್ಲೆಂಡಿಗೆ ಹೋಗಿದ್ದೆ. ಅಲ್ಲಿ ನನಗೆ ಒಬ್ಬ ಅಮೇರಿಕನ್ ಏರ್‌ಫೋರ್ಸ್ ಆಫೀಸರ್ ಮತ್ತು ಅವರ ಪತ್ನಿಯೊಂದಿಗೆ ಮಾತನಾಡುವ ಅವಕಾಶ ಸಿಕ್ಕಿತು. ನೀವು ಮುಸ್ಲಿಮೋ ಎಂದು ಅವರು ನನ್ನೊಡನೆ ಪ್ರಶ್ನಿಸಿದರು. ನಾನು ಹೌದೆಂದು ಹೇಳಿದಾಗ, ಅವರು ಇಸ್ಲಾಮಿನ ಕುರಿತು ಮತ್ತು ಇಸ್ಲಾಂ ಧರ್ಮದಲ್ಲಿ ಸ್ತ್ರೀಯರಿಗಿರುವ ಹಕ್ಕುಗಳ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದರು. ಕೊನೆಗೆ ಅವರು, "ನಿಮ್ಮ ವೈಯಕ್ತಿಕ ವಿಷಯದ ಕುರಿತು ಒಂದು ಪ್ರಶ್ನೆ – ನೀವು ಎಷ್ಟು ಕಲಿತಿದ್ದೀರಿ?" ಎಂದು ಕೇಳಿದರು. ಪೋಸ್ಟ್ ಡಾಕ್ಟರೇಟ್ ರಿಸರ್ಚ್ ಮಾಡುತ್ತಿದ್ದೇನೆಂದು ನಾನು ಹೇಳಿದೆ. ಇದು ಕೇಳಿದಾಗ ಅವರಿಬ್ಬರೂ ಚಕಿತರಾಗಿ ಹೇಳಿದರು: "ಮುಸ್ಲಿಮರು ತಮ್ಮ ಹೆಣ್ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಿಲ್ಲವೆಂದು ನಾವು ತಿಳಿದುಕೊಂಡಿದ್ದೆವು. ಆದರೆ ನಮ್ಮ ಗಂಡು ಮಕ್ಕಳು ಕೂಡ ತಲುಪದ ಸ್ಥಾನಕ್ಕೆ ನೀವು ತಲುಪಿದ್ದೀರಿ." ನಾನು ತುಂಬಾ ಹೊತ್ತು ಅಲ್ಲಾಹನ ಸ್ತುತಿಗಾನ ಮಾಡುತ್ತಾ ಇದ್ದೆ.

☆

("ಮಿಸ್ಬಾಹ್", ರಬ್ವ : ಡಿಸೆಂಬರ್ 1983)

**"LOVE FOR ALL
HATRED FOR NONE"**

**"ಎಲ್ಲರೊಡನೆ ಸ್ನೇಹ
ಯಾರೊಡನೆಯೂ ದ್ವೇಷವಿಲ್ಲ"**

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಅಝಾನ್

ನಮಾಝ್ ಮಾಡುವ ಸಮಯ ಆದಾಗ ಮಸ್‌ಜಿದ್‌ಗಳಲ್ಲಿ ಉಚ್ಚ ಸ್ವರದಿಂದ ನಮಾಝ್‌ಗೆ ಜನರನ್ನು ಬರಲು ಐದು ಹೊತ್ತುಗಳಲ್ಲೂ ಕರೆ ನೀಡುವುದು ಸಂಪ್ರದಾಯವಾಗಿದೆ. ಇದೇ ಅಝಾನ್ ಕರೆ. ಅಝಾನ್ ಕರೆ ನೀಡುವ ಮುಅಝ್ಝಿನ್ ಖಿಬ್ಲದ ಕಡೆಗೆ ಅಭಿಮುಖೀಕರಿಸಿ ಕಿವಿಗಳಿಗೆ ತೋರುಬೆರಳುಗಳನ್ನು ತುರುಕಿಸಿ ಹೀಗೆ ಅಝಾನ್ ಕರೆ ನೀಡಬೇಕು:

اَللّٰهُ اَكْبَرُ اَللّٰهُ اَكْبَرُ-اَللّٰهُ اَكْبَرُ اَللّٰهُ اَكْبَرُ-اَشْهَدُ اَنْ لَّآ اِلٰهَ
اِلَّا اللّٰهُ اَشْهَدُ اَنْ لَّآ اِلٰهَ اِلَّا اللّٰهُ-اَشْهَدُ اَنَّ مُحَمَّدًا رَّسُوْلُ اللّٰهِ.
اَشْهَدُ اَنَّ مُحَمَّدًا رَّسُوْلُ اللّٰهِ-حَيَّ عَلَى الصَّلٰوةِ حَيَّ عَلَى الصَّلٰوةِ-حَيَّ
عَلَى الْفَلَاحِ حَيَّ عَلَى الْفَلَاحِ-اَللّٰهُ اَكْبَرُ اَللّٰهُ اَكْبَرُ لَآ اِلٰهَ اِلَّا اللّٰهُ-

**ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್.**
**ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್, ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್.**
**ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್, ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್.**
**ಹಯ್ಯ ಅಲಸ್ಸಲಾತ್, ಹಯ್ಯ ಅಲಸ್ಸಲಾತ್. ಹಯ್ಯ ಅಲಲ್ ಫಲಾಹ್, ಹಯ್ಯ ಅಲಲ್ ಫಲಾಹ್.**
**ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್. ಲಾ ಇಲಾಹ ಇಲ್ಲಲ್ಲಾಹ್.**

**ಅರ್ಥ** : ಅಲ್ಲಾಹು ಎಲ್ಲರಿಗಿಂತಲೂ ದೊಡ್ಡವನು (4 ಸಲ). ಅಲ್ಲಾಹನ ಹೊರತು ಆರಾಧನೆಗೆ ಬೇರೆ ಯಾರೂ ಅರ್ಹರಲ್ಲ ಎಂದು ನಾನು ಸಾಕ್ಷ್ಯ ನೀಡುತ್ತೇನೆ (2 ಸಲ). ಮುಹಮ್ಮದ್ ಅಲ್ಲಾಹನ ಸಂದೇಶವಾಹಕರೆಂದು ನಾನು ಸಾಕ್ಷ್ಯನೀಡುತ್ತೇನೆ (2 ಸಲ). ನೀವು ನಮಾಝ್‌ಗಾಗಿ ಬನ್ನಿರಿ (2 ಸಲ). ನೀವು ವಿಜಯಕ್ಕಾಗಿ ಬನ್ನಿರಿ (2 ಸಲ). ಅಲ್ಲಾಹು ಎಲ್ಲರಿಗಿಂತಲೂ ದೊಡ್ಡವನು (2 ಸಲ). ಆರಾಧನೆಗೆ ಅಲ್ಲಾಹನ ಹೊರತು ಬೇರೆ ಯಾರೂ ಅರ್ಹರಲ್ಲ (1 ಸಲ).

"ಹಯ್ಯ ಅಲಸ್ಸಲಾತ್" ಎಂದು ಹೇಳುವಾಗ ಬಲಭಾಗಕ್ಕೂ "ಹಯ್ಯ ಅಲಲ್‌ಫಲಾಹ್" ಎಂದು ಹೇಳುವಾಗ ಎಡಭಾಗಕ್ಕೂ ಮುಖವನ್ನು ತಿರುಗಿಸಬೇಕು. ಫಜ್‌ರ್ (ಸೂರ್ಯೋದಯದ ಮುಂಚಿನ) ನಮಾಝ್‌ಗೆ ಅಝಾನ್ ಕರೆ ನೀಡುವಾಗ "ಹಯ್ಯ ಅಲಲ್ ಫಲಾಹ್" ಎಂದು ಎರಡು ಸಾರಿ ಹೇಳಿದ ನಂತರ,

اَلصَّلٰوةُ خَيْرٌ مِّنَ النَّوْمِ **ಅಸ್ಸಲಾತು ಖೈರುಮ್ಮಿನನ್ನೌಮ್ (ನಮಾಝ್ ನಿದ್ರೆಗಿಂತ ಉತ್ತಮ)**

ಎಂದು ಎರಡು ಸಲ ಹೇಳಬೇಕು. ಅಝಾನ್ ಕರೆ ನೀಡುವ ವ್ಯಕ್ತಿ ಅದರ ಮೊದಲು ವುಝು ಮಾಡಬೇಕು. ಅಝಾನ್ ಕರೆಯನ್ನು ಆಲಿಸುವ ವ್ಯಕ್ತಿ ಹಾಗೆಯೇ ಉಚ್ಚರಿಸುತ್ತಾ ಹೋಗಬೇಕು. ಆದರೆ "ಹಯ್ಯ ಅಲಸ್ಸಲಾತ್, ಹಯ್ಯ ಅಲಲ್‌ಫಲಾಹ್" ಎಂದು ಮುಅಝ್ಝಿನ್ ಹೇಳುವಾಗ,

لَا حَوْلَ وَلَا قُوَّةَ اِلَّا بِاللّٰهِ "ಲಾ ಹೌಲ ವಲಾ ಖುವ್ವತ ಇಲ್ಲಾ ಬಿಲ್ಲಾಹ್" ಎಂದು ಹೇಳಬೇಕು.

**ಅರ್ಥ**: ಕೆಟ್ಟದ್ದನ್ನು ತ್ಯಜಿಸುವ ಮತ್ತು ಒಳಿತನ್ನು ಗಳಿಸುವ ಶಕ್ತಿ ಅಲ್ಲಾಹನ ಸಹಾಯದಿಂದ ಮಾತ್ರ ಲಭಿಸುತ್ತದೆ.

## ಅಝಾನ್ ನಂತರದ ದುಆ

ಅಝಾನ್ ಕರೆ ನೀಡಿದ ನಂತರ ಅದನ್ನು ನೀಡಿದ ವ್ಯಕ್ತಿ ಮತ್ತು ಆಲಿಸಿದ ವ್ಯಕ್ತಿ ಈ ಕೆಳಗಿನ ದುಆ ಮಾಡಬೇಕು:

اَللّٰهُمَّ رَبَّ هٰذِهِ الدَّعْوَةِ التَّامَّةِ وَالصَّلٰوةِ

الْقَائِمَةِ اٰتِ مُحَمَّدَ ِۨالْوَسِيْلَةَ وَالْفَضِيْلَةَ

وَالدَّرَجَةَ الرَّفِيْعَةَ وَابْعَثْهُ مَقَامًا مَّحْمُوْدَ

ِۨالَّذِيْ وَعَدْتَّهٗ اِنَّكَ لَا تُخْلِفُ الْمِيْعَادَ ○

ಅಲ್ಲಾಹುಮ್ಮ ರಬ್ಬ ಹಾಧಿಹಿದ್ದಅ್‌ವತಿತ್ತಾಮತಿ ವಸ್ಸಲಾತಿಲ್ ಖಾಇಮತಿ ಆತಿ ಮುಹಮ್ಮದನಿಲ್ ವಸೀಲತ ವಲ್ ಫಳೀಲತ ವದ್ದರಜತರ್ರಫೀಅತ ವಬ್‌ಅಸ್‌ಹು ಮಖಾಮನ್ ಮಹ್ಮೂದನಿಲ್ಲಧೀ ವಅತ್ತಹೂ ಇನ್ನಕ ಲಾ ತುಖ್‌ಲಿಫುಲ್ ಮೀಆದ್.

ಅರ್ಥ: ಓ ಅಲ್ಲಾಹ್, ಈ ಪರಿಪೂರ್ಣವಾದ ಕರೆಯ ಮತ್ತು ಪ್ರಾರಂಭವಾಗಲಿರುವ ನಮಾಝಿನ ಒಡೆಯಾ, ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ವಸೀಲ ಮತ್ತು ಫಳೀಲ ಎಂಬೀ ವಿಶಿಷ್ಟ ಸ್ಥಾನಗಳನ್ನೂ ಉನ್ನತವಾದ ಪದವಿಯನ್ನೂ ನೀಡು. ಅವರಿಗೆ ನೀನು ವಾಗ್ದಾನ ಮಾಡಿರುವ "ಸ್ತುತಿಸಲ್ಪಡಲು ಅರ್ಹವಾದ ಮಹತ್ವಪೂರ್ಣ ಸ್ಥಾನ"ಕ್ಕೆ ಅವರನ್ನು ಏರಿಸು. ನೀನು ನಿಶ್ಚಯವಾಗಿಯೂ ವಾಗ್ದಾನವನ್ನು ಉಲ್ಲಂಘಿಸುವವನಲ್ಲ.

## ಇಖಾಮತ್

ನಮಾಝ್ ಆರಂಭವಾಗಲಿದೆ ಎಂದು ತಿಳಿಸುವ ಕರೆಗೆ ಇಖಾಮತ್ ಎಂದು ಹೆಸರು. ನಮಾಝ್‌ನ ನೇತೃತ್ವ ವಹಿಸುವ ಇಮಾಮ್ ನಮಾಝ್ ಮಾಡುವ ಸ್ಥಳಕ್ಕೆ ಬಂದು ನಿಂತಾಗ ನಮಾಝ್‌ಗೆ ನಿಂತವರ ಸಾಲುಗಳನ್ನು ನೇರವಾಗಿ ಮಾಡುವುದು ಅತ್ಯಾವಶ್ಯಕವಾಗಿದೆ. ಅದು ನಮಾಝನ್ನು ಪರಿಪೂರ್ಣಗೊಳಿಸಲು ಆವಶ್ಯಕವಾಗಿದೆ. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝಿಗೆ ನಿಂತವರ ಸಾಲುಗಳನ್ನು ಸರಿಪಡಿಸುವುದರ ಕುರಿತು ಬಹಳ ಒತ್ತಿ ಹೇಳಿರುವರು. ಸಾಲುಗಳನ್ನು ಸರಿಪಡಿಸಿದ ನಂತರ ಅಝಾನ್ ನೀಡಿದ ವ್ಯಕ್ತಿಯೇ ಇಖಾಮತ್ ಕರೆ ನೀಡಬೇಕು. ಅಝಾನ್ ಕರೆ ನೀಡಿದ ವ್ಯಕ್ತಿಯ ಸಮ್ಮತಿ ಪಡೆದು ಬೇರೊಬ್ಬ ವ್ಯಕ್ತಿ ಇಖಾಮತ್ ಕರೆ ನೀಡಬಹುದು.

ಇಖಾಮತ್ ಕರೆ ನೀಡುವುದು ಹೀಗೆ:

اَللّٰهُ اَكْبَرُ اَللّٰهُ اَكْبَرُ ○

اَشْهَدُ اَنْ لَّا اِلٰهَ اِلَّا اللّٰهُ ○

اَشْهَدُ اَنَّ مُحَمَّدًا رَّسُوْلُ اللّٰهِ ○

حَيَّ عَلَى الصَّلٰوةِ ○ حَيَّ عَلَى الْفَلَاحِ ○

قَدْ قَامَتِ الصَّلٰوةُ ○ قَدْ قَامَتِ الصَّلٰوةُ ○

اَللّٰهُ اَكْبَرُ اَللّٰهُ اَكْبَرُ ○ لَا اِلٰهَ اِلَّا اللّٰهُ ○

ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್.
ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್.
ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್.
ಹಯ್ಯ ಅಲಸ್ಸಲಾತ್, ಹಯ್ಯ ಅಲಲ್ ಫಲಾಹ್.
ಖದ್ ಖಾಮತಿಸ್ಸಲಾತ್, ಖದ್ ಖಾಮತಿಸ್ಸಲಾತ್.
ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್. ಲಾ ಇಲಾಹ ಇಲ್ಲಲ್ಲಾಹ್.

ಅರ್ಥ: ಅಲ್ಲಾಹನು ಎಲ್ಲರಿಗಿಂತಲೂ ದೊಡ್ಡವನು. ಅಲ್ಲಾಹನು ಎಲ್ಲರಿಗಿಂತಲೂ ದೊಡ್ಡವನು.
ಅಲ್ಲಾಹನ ಹೊರತು ಆರಾಧನೆಗೆ ಬೇರೆ ಯಾರೂ ಅರ್ಹರಲ್ಲ ಎಂದು ನಾನು ಸಾಕ್ಷ್ಯ ನೀಡುತ್ತೇನೆ.
ಮುಹಮ್ಮದ್ ಅಲ್ಲಾಹನ ಸಂದೇಶವಾಹಕರೆಂದು ನಾನು ಸಾಕ್ಷ್ಯ ನೀಡುತ್ತೇನೆ.
ಪ್ರಾರ್ಥನೆಗಾಗಿ ಬನ್ನಿರಿ, ವಿಜಯಕ್ಕಾಗಿ ಬನ್ನಿರಿ.
ನಮಾಝ್ ಪ್ರಾರಂಭವಾಗಲಿದೆ, ನಮಾಝ್ ಪ್ರಾರಂಭವಾಗಲಿದೆ.
ಅಲ್ಲಾಹನು ಎಲ್ಲರಿಗಿಂತಲೂ ದೊಡ್ಡವನು. ಅಲ್ಲಾಹನು ಎಲ್ಲರಿಗಿಂತಲೂ ದೊಡ್ಡವನು.
ಅಲ್ಲಾಹನ ಹೊರತು ಬೇರೆ ಯಾರೂ ಆರಾಧನೆಗೆ ಅರ್ಹರಲ್ಲ.

## ಪ್ರಾರ್ಥನೆಯ ಸಮಯಗಳು

**1. ಫಜ್‌ರ್ (ಸುಬ್‌ಹ್)** : ನಸುಕಿನಿಂದ ಸೂರ್ಯೋದಯದ ತನಕ.

2. ಝುಹ್‌ರ್ : ಸೂರ್ಯನು ಮಧ್ಯಾಹ್ನದ ಸಮಯವನ್ನು ದಾಟಿದ ನಂತರ ಒಂದು ವಸ್ತುವಿನ ನೆರಳು ಅದರ ಅಳತೆಯಷ್ಟೇ ಆಗುವ ತನಕ. ಮಧ್ಯಾಹ್ನದ ಸಮಯದಲ್ಲಿ ಆ ವಸ್ತುವಿಗೆ ಇರುವ ನೆರಳಿಗೆ ಹೊರತಾಗಿ ಈ ಅಳತೆ ಮಾಡಲಾಗುತ್ತಿದೆ.

3. ಅಸ್‌ರ್ : ಝುಹ್‌ರ್ ಸಮಯ ಕೊನೆಗೊಂಡ ನಂತರ ಸೂರ್ಯನಿಗೆ ಹಳದಿ ಬಣ್ಣ ಉಂಟಾಗುವ ತನಕ.

4. ಮಗ್‌ರಿಬ್ : ಸೂರ್ಯನು ಅಸ್ತಮಿಸಿದ ನಂತರ ಪಶ್ಚಿಮ ದಿಗಂತದಿಂದ ಕಡುಕೆಂಪು ಬಣ್ಣ ಅಪ್ರತ್ಯಕ್ಷವಾಗುವ ತನಕ.

5. ಇಶಾಅ್ : ಕಡುಕೆಂಪು ಬಣ್ಣ ಅಪ್ರತ್ಯಕ್ಷವಾದ ನಂತರದ ಸಮಯದಿಂದ ಮಧ್ಯರಾತ್ರಿಯ ತನಕ.

ನಿದ್ರೆಯ ಕಾರಣದಿಂದ ಅಥವಾ ಮರೆತುಬಿಟ್ಟ ಕಾರಣದಿಂದ ನಮಾಝ್ ನಿರ್ವಹಿಸಲು ಸಾಧ್ಯವಾಗದಿದ್ದರೆ ನಿದ್ರೆಯಿಂದ ಎಚ್ಚೆತ್ತ ಕೂಡಲೇ ಅಥವಾ ನೆನಪು ಬಂದ ಕೂಡಲೇ ನಮಾಝ್ ಮಾಡಬೇಕು.

## ನಮಾಝ್ ಮಾಡಬಾರದ ಸಮಯಗಳು

ಸೂರ್ಯನು ಉದಿಸುತ್ತಿರುವಾಗಲೂ ಅಸ್ತಮಿಸುತ್ತಾ ಇರುವಾಗಲೂ ನಡು ಮಧ್ಯಾಹ್ನದ ಸಮಯದಲ್ಲಿಯೂ (ಸೂರ್ಯನು ನಡು ನೆತ್ತಿಯಿಂದ ಪಶ್ಚಿಮ ದಿಕ್ಕಿಗೆ ಚಲಿಸುವುದಕ್ಕೆ ಮೊದಲು) ನಮಾಝ್ ಮಾಡಬಾರದು. ಅಸ್‌ರ್ ನಮಾಝ್‌ನ ನಂತರ ಸೂರ್ಯಾಸ್ತಮಾನದ ತನಕ ಯಾವುದೇ ನಮಾಝ್ ಮಾಡಬಾರದು. ಫಜ್‌ರ್ ನಮಾಝ್ ನಂತರ ಸೂರ್ಯೋದಯದ ತನಕ ಸಹ ಯಾವುದೇ ನಮಾಝ್ ಮಾಡಬಾರದು.

## ನಮಾಝಿನ ರಕ್‌ಅತ್‌ಗಳು

**ಫರ್ಝ್ ರಕ್‌ಅತ್‌ಗಳು :**

ಸುಬ್‌ಹ್ – 2 ಝುಹ್‌ರ್ – 4 ಅಸ್‌ರ್ – 4 ಮಗರಿಬ್ – 3 ಇಶಾಅ್ – 4

**ಸುನ್ನತ್ ರಕ್‌ಅತ್‌ಗಳು :**

ಸುಬ್‌ಹ್ ನಮಾಝಿಗೆ ಮೊದಲು 2 .

ಝುಹ್‌ರ್ ನಮಾಝಿಗೆ ಮೊದಲು 2 ಅಥವಾ 4. ನಮಾಝಿನ ನಂತರ 2 ಅಥವಾ 4.

ಮಗರಿಬ್ ನಮಾಝಿನ ನಂತರ 2. ಇಶಾಅ್ ನಮಾಝಿನ ನಂತರ 2.

ಅಸ್‌ರ್ ನಮಾಝಿನ ಮೊದಲು ಅಥವಾ ನಂತರ ಸುನ್ನತ್ ನಮಾಝ್‌ಗಳಿಲ್ಲ.

ಇಶಾಅ್ ನಮಾಝ್ ಫರ್ಝ್ 4, ಸುನ್ನತ್ 2 ರಕ್‌ಅತ್ ಅನುಷ್ಠಿಸಿದ ನಂತರ 3 ರಕ್‌ಅತ್ ವಿತ್‌ರ್ ನಮಾಝ್ ಮಾಡಬೇಕು. ಆದರೆ ತಹಜ್ಜುದ್ ನಮಾಝ್ ಮಾಡುವವರು ತಹಜ್ಜುದ್ ನಮಾಝ್ ಮಾಡಿದ ನಂತರ ವಿತ್‌ರ್ ನಮಾಝ್ ಮಾಡುವುದು ಉತ್ತಮವಾಗಿದೆ.

## ನಫ್‌ಲ್ ನಮಾಝ್‌ಗಳು

1. ಪ್ರತಿ ಅಝಾನ್ ಮತ್ತು ಇಖಾಮತ್ ಮಧ್ಯೆ ಎರಡು ರಕ್‌ಅತ್ ನಫ್‌ಲ್ ನಮಾಝ್ ಮಾಡಬಹುದು.
2. ತಹಜ್ಜುದ್ ನಮಾಝ್ ಕನಿಷ್ಠ 2 ರಕ್‌ಅತ್, ಗರಿಷ್ಠ 8 ರಕ್‌ಅತ್.
3. ವಿತ್‌ರ್ ನಮಾಝ್ ನಂತರ ಕುಳಿತು ಎರಡು ರಕ್‌ಅತ್.
4. ಇಶ್‌ರಾಖ್ ನಮಾಝ್ – ಇದು ಸೂರ್ಯೋದಯದ ನಂತರ ಸೂರ್ಯ ಸ್ವಲ್ಪ ಮೇಲೇರುವ ತನಕ 2 ರಿಂದ 12 ರಕ್‌ಅತ್.
5. ಝುಹಾ ನಮಾಝ್ – ಇದು ಇಶ್‌ರಾಖ್ ನಮಾಝ್ ಮಾಡುವ ಸಮಯ ದಾಟಿದ ನಂತರ 4 ರಿಂದ 8 ರಕ್‌ಅತ್.

## ಮಸ್‌ಜಿದ್‌ಗೆ ಪ್ರವೇಶಿಸುವಾಗ ಮಾಡುವ ದುಆ

بِسْمِ اللهِ الصَّلٰوةُ وَالسَّلَامُ عَلٰى رَسُوْلِ
اللهِ اَللّٰهُمَّ اغْفِرْلِىْ ذُنُوْبِىْ وَافْتَحْ
لِىْ اَبْوَابَ رَحْمَتِكَ

ಬಿಸ್ಮಿಲ್ಲಾಹಿಸ್ಸಲಾತು ವಸ್ಸಲಾಮು ಅಲಾ ರಸೂಲಿಲ್ಲಾಹಿ. ಅಲ್ಲಾಹುಮ್ಮಗ್‌ಫಿರ್‌ಲೀ ಧುನೂಬೀ ವಫ್‌ತಹ್ ಲೀ ಅಬ್‌ವಾಬ ರಹ್ಮತಿಕ.

**ಅರ್ಥ** : ನಾನು ಅಲ್ಲಾಹನ ನಾಮದಿಂದ ಪ್ರವೇಶಿಸುತ್ತೇನೆ. ಅಲ್ಲಾಹನ ಅಶೀರ್ವಾದ ಮತ್ತು ಶಾಂತಿ ಹಝ್‌ರತ್ ಮುಹಮ್ಮದ್

ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಸುರಿಸಲ್ಪಡಲಿ. ಓ ಅಲ್ಲಾಹ್, ನನ್ನ ಪಾಪಗಳನ್ನು ಕ್ಷಮಿಸು. ನಿನ್ನ ಕರುಣೆಯ ಬಾಗಿಲುಗಳನ್ನು ನನಗಾಗಿ ತೆರೆದುಕೊಡು.

## ಮಸ್‌ಜಿದ್‌ನಿಂದ ಹೊರಡುವಾಗ ಮಾಡುವ ದುಆ

بِسْمِ اللهِ الصَّلٰوةُ وَالسَّلَامُ عَلٰى رَسُوْلِ
اللهِ اَللّٰهُمَّ اغْفِرْلِىْ ذُنُوْبِىْ وَافْتَحْ
لِىْ اَبْوَابَ فَضْلِكَ

**ಬಿಸ್ಮಿಲ್ಲಾಹಿ ವಸ್ಸಲಾತು ವಸ್ಸಲಾಮು ಅಲಾ ರಸೂಲಿಲ್ಲಾಹಿ. ಅಲ್ಲಾಹುಮ್ಮಗ್‌ಫಿರ್‌ಲೀ ಧುನೂಬೀ ವಫ್ತಹ್ ಲೀ ಅಬ್‌ವಾಬ ಫಝ್ಲಿಕ.**

**ಅರ್ಥ** : ನಾನು ಅಲ್ಲಾಹನ ನಾಮದಿಂದ ಹೊರಗೆ ಹೋಗುತ್ತೇನೆ. ಅಲ್ಲಾಹನ ಆಶೀರ್ವಾದ ಮತ್ತು ಶಾಂತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಸುರಿಸಲ್ಪಡಲಿ. ಓ ಅಲ್ಲಾಹ್, ನನ್ನ ಪಾಪಗಳನ್ನು ಕ್ಷಮಿಸು. ನಿನ್ನ ಅನುಗ್ರಹದ ಬಾಗಿಲುಗಳನ್ನು ನನಗಾಗಿ ತೆರೆದುಕೊಡು.

## ಅತ್ಯಾವಶ್ಯಕ ಸೂಚನೆಗಳು

1. ನಮಾಝ್ ಮಾಡುವವ ಪ್ರತಿಯೊಂದು ನಮಾಝನ್ನು, ಅದನ್ನು ಮಾಡಬೇಕಾದ ಸರಿಯಾದ ಸಮಯದಲ್ಲಿ ಬಹಳ ಸಾವಧಾನವಾಗಿ ಮಾಡಬೇಕು.
2. ನಮಾಝ್ ಮಾಡುವಾಗ ಓದುವ ಪವಿತ್ರ ಖುರ್‌ಆನಿನ ವಚನಗಳನ್ನು ಮತ್ತು ದುಆಗಳನ್ನು ನಿಧಾನವಾಗಿ ಅರ್ಥ ತಿಳಿಯುವಂತೆ ಓದಬೇಕು.
3. ನಮಾಝ್ ಮಾಡುವಾಗ ಕಣ್ಣನ್ನು ತೆರೆದಿಡಬೇಕು ಮತ್ತು ಸಾಷ್ಟಾಂಗ ಪ್ರಣಾಮ (ಸುಜೂದ್) ಮಾಡುವ ಕಡೆಗೆ ದೃಷ್ಟಿ ಇರಿಸಬೇಕು. ಅತ್ತಿತ್ತ ಕಣ್ಣು ಹಾಯಿಸಬಾರದು.
4. ನಮಾಝ್ ಮಾಡುವಾಗ ಗೋಡೆಗೆ ಒರಗಬಾರದು ಮತ್ತು ಒಂದು ಕಾಲಿನ ಮೇಲೆ ನಿಲ್ಲಬಾರದು. ಆದರೆ ರೋಗಿಗಳೂ ಅಂಗವಿಕಲರೂ ಹೀಗೆ ಮಾಡಬಹುದು.
5. ರುಕೂ ಮತ್ತು ಸುಜೂದ್‌ಗಳಲ್ಲಿ ಪವಿತ್ರ ಖುರ್‌ಆನಿನ ವಚನಗಳನ್ನು ಓದಬಾರದು.
6. ನಮಾಝ್‌ನಲ್ಲಿ ವಿಶಿಷ್ಟವಾಗಿ ಸುಜೂದ್‌ನಲ್ಲಿ ತನ್ನ ಸ್ವಂತ ಭಾಷೆಯಲ್ಲಿ ಅಲ್ಲಾಹನ ಸನ್ನಿಧಿಯಲ್ಲಿ ಮೊರೆ ಇಡುವುದು ಅತ್ಯಂತ ಸೂಕ್ತವಾಗಿದೆ.
7. ರೋಗ ಅಥವಾ ಬಲಹೀನತೆ ಇರುವಾಗ ಕುಳಿತು, ಮಲಗಿ ಅಥವಾ ಬರೇ ತಲೆಯ ಸಂಜ್ಞೆಗಳಿಂದ ನಮಾಝ್ ಮಾಡಬಹುದು. ಆದರೆ ನಮಾಝ್ ಬಿಟ್ಟು ಬಿಡುವುದು ಅನುಮತಿಸಲ್ಪಟ್ಟಿಲ್ಲ.
8. ಮಸ್‌ಜಿದ್‌ಗಳಲ್ಲಿ ನಮಾಝ್‌ಗಾಗಿ ಕಾಯುತ್ತಿರುವಾಗ ಅಲ್ಲಾಹನ ನಾಮಸ್ಮರಣೆ ಮಾಡುತ್ತಾ ಇರಿ. ನಿರರ್ಥಕವಾದ ಮಾತುಕತೆಗಳಲ್ಲಿ ಮಗ್ನರಾಗಬೇಡಿರಿ.
9. ನಮಾಝ್ ಮಾಡುವವನ ಮುಂದಿನಿಂದ ದಾಟಿ ಹೋಗಬಾರದು.
10. ನಮಾಝ್ ಪ್ರಾರಂಭವಾಗಿದ್ದರೆ ಕೂಡಲೇ ನಮಾಝ್ ಮಾಡುವವರ ಜೊತೆ ಸೇರಬೇಕು. ನಮಾಝ್ ಮುಗಿದ ಕೂಡಲೇ, ಹೊಸದಾಗಿ ನಮಾಝ್‌ಗೆ ಸೇರಿದವನು ಎದ್ದು ನಿಂತು, ಬಿಟ್ಟು ಹೋದ ರಕ್‌ಅತ್‌ಗಳನ್ನು ಪೂರ್ತಿಗೊಳಿಸಬೇಕು. ಫರ್ಝ್ ನಮಾಝಿಗೆ ಮೊದಲಿನ ಸುನ್ನತ್‌ಗಳನ್ನು ಅನಂತರ ಅನುಷ್ಠಿಸಬಹುದು.
11. ಇಮಾಮ್ ರುಕೂನಲ್ಲಿದ್ದರೆ ರುಕೂನಲ್ಲಿ ಸೇರಿದವನು ಆ ರಕ್‌ಅತನ್ನು ಪುನರಾವರ್ತಿಸಬೇಕಾಗಿಲ್ಲ.
12. ಇಮಾಮ್ ಫಜ್‌ರ್ ನಮಾಝ್‌ನಲ್ಲಿ ಎರಡು ಫರ್ಝ್ ರಕ್‌ಅತ್‌ಗಳಲ್ಲಿ ಜಹ್‌ರನ್ (ಉಚ್ಚ ಸ್ವರದಲ್ಲಿ) ಮತ್ತು ಝುಹ್‌ರ್, ಅಸ್‌ರ್ ನಮಾಝ್‌ಗಳಲ್ಲಿ ಸಿರ್‍ರನ್ (ತಗ್ಗಿದ ಧ್ವನಿಯಲ್ಲಿ) ಪವಿತ್ರ ಖುರ್‌ಆನ್ ವಚನಗಳನ್ನು ಓದಬೇಕು. ಮಗ್‌ರಿಬ್, ಇಶಾಅ್ ನಮಾಝ್‌ಗಳಲ್ಲಿ ಪ್ರಥಮ ಎರಡು ರಕ್‌ಅತ್‌ಗಳಲ್ಲಿ ಖುರ್‌ಆನ್ ವಚನಗಳನ್ನು ಉಚ್ಚಸ್ವರದಲ್ಲಿ ಓದಬೇಕು. ಮೂರನೆಯ ಮತ್ತು ನಾಲ್ಕನೆಯ ರಕ್‌ಅತ್‌ಗಳಲ್ಲಿಸೂರತುಲ್ ಫಾತಿಹ ಮಾತ್ರ ತಗ್ಗಿದ ಧ್ವನಿಯಲ್ಲಿ ಓದಿದರೆ ಸಾಕು.

13. ರುಕೂ ಮಾಡುವಾಗ ಕೈಗಳನ್ನು ಮೊಣಕಾಲುಗಳ ಮೇಲೆ ಭದ್ರವಾಗಿ ಇರಿಸಿ ಕಾಲುಗಳು ಹಿಂದಕ್ಕೆ ಬಾಗುವಂತಿರಬೇಕು. ತಲೆಯನ್ನು ಮೇಲೆಯೂ ಕೆಳಗೆಯೂ ಮಾಡದೆ ಬೆನ್ನಿಗೆ ನೇರವಾಗಿ ಇರಿಸಬೇಕು.

14. ನಮಾಝ್ ಮಾಡುವವನು ಸುಜೂದ್ ಮಾಡುವಾಗ ಕಾಲಿನ ಬೆರಳುಗಳು ಮುಂದಕ್ಕೆ ಬಗ್ಗುವಂತೆ ಇರಿಸಬೇಕು. ಕಾಲುಗಳನ್ನು ಮೇಲೆಕ್ಕೆತ್ತಬಾರದು.

15. ಇಮಾಮ್‌ರ ಹಿಂದುಗಡೆ ನಮಾಝ್ ಮಾಡುವ ಮುಖ್ತದಿ (ಹಿಂಬಾಲಕ) ರುಕೂ, ಸುಜೂದ್ ಮೊದಲಾದವುಗಳನ್ನು ಇಮಾಮ್‌ರಿಗಿಂತ ಮುಂಚಿತವಾಗಿ ಮಾಡಬಾರದು.

16. ಮುಅಝ್ಝಿನ್ ಇಖಾಮತ್ ಹೇಳುವಾಗ ಸಾಲುಗಳನ್ನು ಸರಿಪಡಿಸತಕ್ಕದ್ದು. ಭುಜಕ್ಕೆ ಭುಜ ತಗಲುವಂತೆ ನಿಲ್ಲಬೇಕು.

17. ಇಮಾಮ್ ಹಿಂದುಗಡೆ ಮುಖ್ತದಿ ಒಬ್ಬನೇ ಆಗಿದ್ದರೆ ಆತ ಇಮಾಮ್‌ರ ಬಲಭಾಗದಲ್ಲಿ ಅವರಿಗೆ ಹತ್ತಿರವಾಗಿ ನಿಲ್ಲಬೇಕು. ಅನಂತರ ಹೊಸದಾಗಿ ಒಬ್ಬ ಮುಖ್ತದಿ ಬಂದರೆ ಇಬ್ಬರೂ ಇಮಾಮ್‌ರ ಹಿಂದೆ ನಿಂತುಕೊಳ್ಳಬೇಕು.

18. ಇಮಾಮ್ ನಮಾಝ್‌ನಲ್ಲಿ ಪವಿತ್ರ ಖುರ್‌ಆನಿನ ಯಾವುದಾದರೂ ವಚನ ಮರೆತು ಅಥವಾ ತಪ್ಪಾಗಿ ಓದಿದರೆ ಮುಖ್ತದಿ ಅದನ್ನು ಉಚ್ಚ ಸ್ವರದಲ್ಲಿ ಸರಿಪಡಿಸಿ ಓದಿ ಹೇಳಬೇಕು. ಬೇರೆ ಯಾವುದಾದರೂ ಸಂಗತಿ ಇಮಾಮ್ ಮರೆತು ಬಿಟ್ಟರೆ ಬರೇ "ಸುಬ್‌ಹಾನಲ್ಲಾಹ್" ಎಂದು ಉಚ್ಚಸ್ವರದಲ್ಲಿ ಹೇಳಿದರೆ ಸಾಕು.

19. ನಮಾಝಿನ ಪ್ರಥಮ ಸಾಲಿನಲ್ಲಿ ನಿಲ್ಲುವವರಿಗೆ ಹೆಚ್ಚಿನ ಅನುಗ್ರಹ ಲಭಿಸುವುದು. ವೃದ್ಧರೂ ಜ್ಞಾನ ಸಂಪನ್ನರೂ ಮುಂದಿನ ಸಾಲಿನಲ್ಲಿ ನಿಲ್ಲಬೇಕು. ಹುಡುಗರು ಹಿಂದಿನ ಸಾಲಿನಲ್ಲಿ ನಿಲ್ಲಬೇಕು. ಸ್ತ್ರೀಯರು ಎಲ್ಲರಿಗಿಂತಲೂ ಹಿಂದೆ ನಿಲ್ಲಬೇಕು.

20. ಇಮಾಮ್ ಪವಿತ್ರ ಖುರ್‌ಆನ್ ವಚನಗಳನ್ನು ಓದುವಾಗ ಮುಖ್ತದಿ ಸುಮ್ಮನೆ ನಿಂತು ಆಲಿಸಿದರೆ ಸಾಕು. ಆದರೆ ಸನಾ ಮತ್ತು ಅಊಧು ಹೇಳಿದ ನಂತರ ಸೂರತುಲ್ ಫಾತಿಹ ಓದಲೇಬೇಕು.

21. ಮಸ್‌ಜಿದ್‌ಗಳಲ್ಲಿ ಜಮಾಅತ್‌ನೊಂದಿಗೆ ನಮಾಝ್ ಮಾಡುವವರಿಗೆ ಒಬ್ಬಂಟಿಗನಾಗಿ ನಮಾಝ್ ಮಾಡುವವನಿಗಿಂತ 27 ಪಟ್ಟು ಹೆಚ್ಚು ಅನುಗ್ರಹ ದೊರಕುತ್ತದೆ.

22. ಪುರುಷರು ಫರ್ಝ್ ನಮಾಝ್‌ಗಳನ್ನು ಮಸ್‌ಜಿದ್‌ಗಳಲ್ಲೇ ಮಾಡಬೇಕು. ಇತರ ನಮಾಝ್‌ಗಳನ್ನು ಸಹ ಮಸ್‌ಜಿದ್‌ಗಳಲ್ಲಿ ಮಾಡಬಹುದು. ಆದರೆ ಫರ್ಝ್ ಅಲ್ಲದ ನಮಾಝ್ ಮನೆಗಳಲ್ಲಿ ಮಾಡುವುದು ಉತ್ತಮವಾಗಿದೆ.

23. ಪ್ರಥಮ ಸಾಲು ಪೂರ್ಣಗೊಳಿಸಿದ ನಂತರವೇ ಎರಡನೆಯ ಸಾಲಿನಲ್ಲಿ ಜನರನ್ನು ನಿಲ್ಲಿಸಬೇಕು.

24. ಇಮಾಮ್ ನಮಾಝನ್ನು ಪ್ರಾರಂಭಿಸಿದ್ದರೆ ಓಡಿ ಹೋಗಿ ನಮಾಝನ್ನು ಸೇರಬಾರದು. ಸಾಮಾನ್ಯವಾಗಿ ನಡೆಯುವ ರೀತಿಯಲ್ಲಿ ನಡೆದು ಪ್ರಾರ್ಥನೆಗೆ ಸೇರಬೇಕು.

......*(19ನೇ ಪುಟದಿಂದ)*

*"ಅವರು ನಿನ್ನೊಡನೆ ಮದ್ಯ ಮತ್ತು ಜೂಜಾಟದ ಬಗ್ಗೆ ಕೇಳುತ್ತಾರೆ. ಹೇಳು: 'ಅವರೆಡರಲ್ಲೂ ದೊಡ್ಡ ಪಾಪ (ದೋಷ)ವೂ ಜನರಿಗೆ (ಕೆಲವು) ಪ್ರಯೋಜನಗಳೂ ಇವೆ. ಆದರೆ ಅವುಗಳ ದೋಷವು ಗುಣಕ್ಕಿಂತ ಬಲು ಹೆಚ್ಚು.'"* *(2 : 220)*

*"ಓ ಸತ್ಯವಿಶ್ವಾಸಿಗಳೇ, ನಿಸ್ಸಂಶಯವಾಗಿಯೂ ಮದ್ಯಪಾನ, ಜೂಜಾಟ, ಮೂರ್ತಿಪೂಜೆ, ಬಾಣವೆಸೆದು ಶಕುನ ನೋಡುವುದು ಇವೆಲ್ಲ ಹೇಯವಾದ ಪೈಶಾಚಿಕ ಕೃತ್ಯಗಳಾಗಿವೆ. ಆದುದರಿಂದ ನೀವು ಏಳಿಗೆ ಹೊಂದಲಿಕ್ಕಾಗಿ ಅವುಗಳಿಂದ ದೂರವಿರಿ.*

*"ಮದ್ಯಪಾನ ಮತ್ತು ಜೂಜು ಮೂಲಕ ನಿಮ್ಮೊಳಗೆ ವೈರತ್ವವೂ ದ್ವೇಷಭಾವನೆಯೂ ಉಂಟಾಗಬೇಕೆಂದೂ ಅಲ್ಲಾಹನ ಸ್ಮರಣೆ ಮತ್ತು ನಮಾಝ್‌ನಿಂದ ನಿಮ್ಮನ್ನು ತಡೆಯಬೇಕೆಂದೂ ಶೈತಾನನು ಖಂಡಿತವಾಗಿಯೂ ಬಯಸುತ್ತಾನೆ. ಹಾಗಿರುವಾಗ ನೀವು ಪರಾಙ್ಮುಖರಾಗುವುದಿಲ್ಲವೇನು?"* *(5 : 91, 92)*

ಪವಿತ್ರ ಖುರ್‌ಆನಿನ ಈ ವಚನಗಳಲ್ಲಿ ಮದ್ಯವನ್ನೂ ಇತರ ಮಾದಕ ಪದಾರ್ಥಗಳನ್ನೂ ನಿಷಿದ್ಧಗೊಳಿಸಲಾಗಿದೆ. ಇದಕ್ಕೆ ಕಾರಣವನ್ನೂ ಕೊಡಲಾಗಿದೆ. ಈ ದ್ರವ್ಯಗಳ ಕೆಲವು ಉಪಯೋಗಗಳನ್ನು ಅಂಗೀಕರಿಸಲಾಗಿದೆ. ಆದರೆ ಅವುಗಳಿಂದ ಉಂಟಾಗುವ ಹಾನಿಯು ಅವುಗಳಿಂದ ದೊರಕುವ ಲಾಭಕ್ಕಿಂತ ಹೆಚ್ಚೆಂದು ಸ್ಪಷ್ಟಗೊಳಿಸಲಾಗಿದೆ. ಇದರೊಂದಿಗೆ ಜೂಜಾಟವನ್ನು ನಿಷಿದ್ಧಗೊಳಿಸಲಾಗಿದೆ: ಅದು ಸಹ ಜನರಿಗೆ ಹಾನಿಕರವಾದುದಾಗಿದೆ. ಪವಿತ್ರ ಖುರ್‌ಆನ್ ಪ್ರತಿಪಾದಿಸುವ ತತ್ವವೇನೆಂದರೆ, ಹಾನಿಯನ್ನು ತಡೆಗಟ್ಟುವುದಕ್ಕೆ ಆದ್ಯತೆ ನೀಡಬೇಕು.

### ಉಪಸಂಹಾರ

ಮನುಷ್ಯರ ಆಹಾರ ಕ್ರಮದ ಬಗ್ಗೆ ಪವಿತ್ರ ಖುರ್‌ಆನ್ ನೀಡಿರುವ ಮಾರ್ಗದರ್ಶನಗಳು ಸೃಷ್ಟಿಕರ್ತನಿಂದ ಅವತೀರ್ಣಗೊಂಡವುಗಳಾಗಿವೆ. ಮನುಷ್ಯ ಶರೀರವೆಂಬ ಯಂತ್ರದ ನಿರ್ಮಾಪಕನು ಸೃಷ್ಟಿಕರ್ತನಾದ ದೇವನಾಗಿದ್ದಾನೆ. ಎಲ್ಲಾ ರೀತಿಯ ಶುದ್ಧವಾದ ನೀರು, ಹಾಲು, ಜೇನು, ತರಕಾರಿ, ಹಣ್ಣು, ಧಾನ್ಯ, ಮೀನು ಮತ್ತಿತರ ಸಮುದ್ರೋತ್ಪನ್ನಗಳು, ಅನುಮತಿಸಲಾದ ಪಶು-ಪಕ್ಷಿಗಳ ಮಾಂಸವನ್ನು ಸೇವಿಸಲು ದೇವನು ಮಾರ್ಗದರ್ಶನ ನೀಡಿದ್ದಾನೆ. ಅವನು ಎಲ್ಲಾ ವಸ್ತುಗಳನ್ನು ಮಾನವರ ಉಪಯೋಗಕ್ಕಾಗಿ ಸೃಷ್ಟಿಸಿರುವನು. ಮಾದಕ ದ್ರವ್ಯಗಳನ್ನು, ಮದ್ಯವನ್ನು, ಮಲೀನ ದ್ರವಪದಾರ್ಥಗಳನ್ನು, ಕೊಳಕು ತಿಂಡಿಗಳನ್ನು, ಸತ್ತ ಪ್ರಾಣಿಗಳ ಮಾಂಸವನ್ನು, ರಕ್ತವನ್ನು, ಹಂದಿಮಾಂಸವನ್ನು, ಅಲ್ಲಾಹೇತರರಿಗೆ ಅರ್ಪಿತವಾಗಿ ಬಲಿಕೊಟ್ಟದ್ದನ್ನು ನಿಷಿದ್ಧಗೊಳಿಸಲಾಗಿದೆ. ತಿನ್ನುವುದು ಮತ್ತು ಕುಡಿಯುವುದು ಮಾನವರ ದೇಹದ ಮೇಲೆ ಪ್ರಭಾವ ಬೀರುವ ಹಾಗೆಯೇ ಅವು ಮಾನವರ ಆತ್ಮದ ಮೇಲೆ ಸಹ ಪ್ರಭಾವ ಬೀರುತ್ತವೆ ಎಂಬ ಅಂಶವನ್ನು ಪವಿತ್ರ ಖುರ್‌ಆನ್ ಒತ್ತಿ ಹೇಳುತ್ತದೆ.

ಪ್ರವಾಸ ಕಥನ

# ನಮ್ಮ ಉಮ್ರಃ ಪುಣ್ಯಯಾತ್ರೆ

☆ ಮುಹಮ್ಮದ್ ಯೂಸುಫ್

ಪಿತ್ರಾರ್ಜಿತವಾಗಿ ನನ್ನ ಪಾಲಿಗೆ ಬಂದ ಸೊತ್ತನ್ನು ಮಾರಲು ನಾನು ನಿರ್ಧರಿಸಿದ್ದೆ. ಕೆಲವೇ ತಿಂಗಳಲ್ಲಿ ನನ್ನ ಕೈಗೆ ಹಣ ಬರಲಿಕ್ಕಿತ್ತು. ಅಷ್ಟರಲ್ಲಿ ಕೇರಳದ ಕೂಡಾಳಿಯಿಂದ ನನ್ನ ದ್ವಿತೀಯ ಪುತ್ರಿ ಖಾನಿತಳ ಫೋನ್: "ಹಣ ಸಿಕ್ಕಿದರೆ ತಂದೆಯವರ ಯೋಜನೆ ಏನು?" "ನಾನೇನೂ ನಿಶ್ಚಯಿಸಿಲ್ಲ." ನಾನು ಉತ್ತರಿಸಿದೆ. "ತಂದೆಯವರು ಉಮ್ರಃಕ್ಕೆ ಹೋಗುವುದಿಲ್ಲವೇ?" ಹೌದು, ಉಮ್ರಃಕ್ಕೆ ಹೋಗುವುದು ಉಚಿತವೆಂದು ನಾನು ಮನಸ್ಸಿನಲ್ಲಿ ನಿರ್ಧರಿಸಿದೆ. ಅಲ್ಲಾಹನ ಅಪಾರವಾದ ಅನುಗ್ರಹದಿಂದ ಉಮ್ರಃ ಯಾತ್ರೆ ಮಾಡುವ ಆ ಬಯಕೆ ಬೇಗನೆ ಈಡೇರಿತು.

26-07-2009 ಆದಿತ್ಯವಾರದಂದು ನಾನು, ನನ್ನ ಪತ್ನಿ ತಾಹಿರ ಸಿದ್ದೀಖ, ನನ್ನ ಅಕ್ಕ ತಾಹಿರಾಬಿ ಮತ್ತು ನನ್ನ ಅಳಿಯ ಅನಸ್ ಅಹ್ಮದ್ (ಖಾನಿತಳ ಪತಿ) ಉಮ್ರಃ ಪುಣ್ಯಯಾತ್ರೆಗೆ ಹೊರಟೆವು. ಕಣ್ಣೂರಿನ "ಸ್ಟಾರ್ ಓಫ್ ಏಶ್ಯಾ" ಟ್ರಾವಲ್ ಏಜೆನ್ಸಿ ನಮ್ಮ ಪ್ರಯಾಣದ ವ್ಯವಸ್ಥೆ ಮಾಡಿತ್ತು.

ಬೆಳಿಗ್ಗೆ 6 ಗಂಟೆಗೆ ನಾನು ಮತ್ತು ಪತ್ನಿ ಮಂಗಳೂರಿನಿಂದ ಹೊರಟೆವು. ಅಕ್ಕ ಮತ್ತು ಅನಸ್ ಕಣ್ಣೂರಿನಿಂದ ನಮ್ಮ ಜೊತೆ ಸೇರಿದರು. ಸಾಯಂಕಾಲ 6.50ಕ್ಕೆ ಕಲ್ಲಿಕೋಟೆಯಿಂದ ನಮ್ಮ ವಿಮಾನ ಜಿದ್ದಃಕ್ಕೆ ಹೊರಟಿತು. ಸುಮಾರು 5 ಗಂಟೆಗಳ ಕಾಲದ ಹಾರಾಟದ ನಂತರ ಅದು ಜಿದ್ದಃ ತಲಪಿತು. ವಿಮಾನ ಭೂಸ್ಪರ್ಶ ಮಾಡುವಾಗ ದೃಶ್ಯ ಬಹಳ ಮನೋರಂಜಕವಾಗಿತ್ತು. ವಿದ್ಯುತ್ ದೀಪಗಳಿಂದ ಬೆಳಗುತ್ತಿದ್ದ ಜಿದ್ದಃ ಪಟ್ಟಣ ಅತ್ಯಂತ ನಯನಾನಂದಕರವಾಗಿತ್ತು. ಕಟ್ಟಡಗಳು, ರಸ್ತೆಗಳು, ಅವುಗಳ ಮಧ್ಯದಿಂದ ಸಾಗುತ್ತಿದ್ದ ವಾಹನಗಳು ನೋಡುಗನ ಸ್ಮೃತಿ ಪಟಲದಲ್ಲಿ ಅವಿಸ್ಮರಣೀಯವಾಗಿ ಬಾಕಿಯುಳಿಯುವಂಥದ್ದಾಗಿದ್ದವು.

ಕಾರಣಾಂತರದಿಂದ ನಮಗೆ ಕಲ್ಲಿಕೋಟೆಯಲ್ಲಿ ವಿಮಾನವೇರುವ ಮೊದಲು ಇಹ್ರಾಮ್ ವಸ್ತ್ರಧಾರಣೆ ಸಾಧ್ಯವಾಗಿರಲಿಲ್ಲ. ಇಹ್ರಾಮ್ ಮಾಡದೆ ಮಕ್ಕದ ಪುಣ್ಯಕ್ಷೇತ್ರ ಹರಮ್ ಪ್ರವೇಶಿಸಿದರೆ ಒಬ್ಬೊಬ್ಬರು ಒಂದೊಂದು ಆಡನ್ನು ಫಿದ್‌ಯ ಆಗಿ ಖುರ್ಬಾನಿ ಕೊಡಬೇಕಾಗುತ್ತದೆ. ಜಿದ್ದಃಕ್ಕೆ ಸಮೀಪವಿರುವ ಮೀಕಾತ್ ಸುಮಾರು 150 ಕಿಲೋಮೀಟರ್ ದೂರವಿರುವ ಜಿಹ್‌ಫ ಎಂಬ ಸ್ಥಳವಾಗಿದೆ. ನಾವು ಕಾರಿನಲ್ಲಿ ಅಲ್ಲಿರುವ ಮಸೀದಿಗೆ ಹೋಗಿ ಸ್ನಾನ ಮಾಡಿ ಇಹ್ರಾಮ್ ವಸ್ತ್ರ ಧರಿಸಿ ಎರಡು ರಕ್‌ಅತ್ ನಮಾಝ್ ಮಾಡಿದೆವು. (ಈಜಿಪ್ಟ್, ಶಾಮ್, ಮೊರೊಕ್ಕೊ ಮೊದಲಾದ ಕಡೆಗಳಿಂದ ಮತ್ತು ಸೌದಿ ಅರೇಬಿಯಾದ ತಬೂಕ್ ಕಡೆಯಿಂದ ಬರುವವರು ಇಲ್ಲಿ ಇಹ್ರಾಮ್ ಮಾಡಿಕೊಳ್ಳುತ್ತಾರೆ.) ನಾವು ಅಲ್ಲಿಂದ ಆಗಲೇ ಹೊರಟು ಮಕ್ಕದಲ್ಲಿರುವ ನಮ್ಮ ವಸತಿ ಗೃಹ "ಝುಹ್ರಲ್ ಮದನಿ" ತಲಪುವಾಗ ಬೆಳಿಗ್ಗೆ 5.30 ಆಗಿತ್ತು. ಸ್ಥಳೀಯ ಸಮಯ ಬೆಳಿಗ್ಗೆ 3 ಗಂಟೆ. ನಮ್ಮ ಕೋಣೆ ಕ್ರಮಾಂಕ 1001 ನಾಲ್ಕು ಹಾಸಿಗೆಗಳದ್ದು. ರೂಮಿನೊಳಗೆ ಎ.ಸಿ., ಟಿ.ವಿ., ಫ್ರಿಜ್, ಫೋನ್ ಮೊದಲಾದವು ಎಲ್ಲವೂ ಇವೆ. ರೂಮಿಗೆ ತಾಗಿಕೊಂಡೇ ಒಂದು ಕಡೆ ಶೌಚಾಲಯ, ಸ್ನಾನಗೃಹ. ಮತ್ತೊಂದು ಕಡೆ ಅಡುಗೆ ಮನೆ.

ನಮ್ಮ ವಸತಿ ಗೃಹದಿಂದ "ಮಸ್ಜಿದುಲ್ ಹರಾಮ್"ಗೆ ಸುಮಾರು ಅರ್ಧ ಕಿಲೋ ಮೀಟರ್ ದೂರವಿತ್ತು. ಮಸ್ಜಿದುಲ್ ಹರಾಮ್ ಬಹಳ ವಿಶಾಲವಾಗಿದ್ದು ಅದಕ್ಕೆ 94 ಬಾಗಿಲು (ಗೇಟ್)ಗಳಿವೆ. ನಮ್ಮ ವಸತಿಗೃಹದಿಂದ ನೇರವಾಗಿ ಹೋದರೆ ಒಂದನೇ ಗೇಟ್ ಸಿಗುತ್ತದೆ. ನಾವು ಸಾಮಾನ್ಯವಾಗಿ ಅದೇ ಗೇಟಿನಿಂದ ಮಸೀದಿ ಪ್ರವೇಶಿಸುತ್ತಿದ್ದೆವು.

ನಾವು ಸೋಮವಾರ ಬೆಳಿಗ್ಗೆ ಪ್ರಕೃತಿ ಸಹಜವಾಗಿಯೇ ನಳ್ಳಿಯಲ್ಲಿ ಬರುವ ಬಿಸಿನೀರಿನಲ್ಲಿ ಸ್ನಾನಮಾಡಿ ಮಸ್ಜಿದುಲ್ ಹರಾಮ್‌ಗೆ ಹೋಗಿ ಮೊದಲು ಎರಡು ರಕ್‌ಅತ್ ತಹಿಯ್ಯತ್ ನಮಾಝ್ ಮಾಡಿದೆವು. ಅನಂತರ ಕಅ್‌ಬಾ ತವಾಫ್ ಮಾಡಲು ಪ್ರಾರಂಭಿಸಿದೆವು. ಆಗ ಸುಮಾರು 11 ಗಂಟೆ ಸಮಯವಾಗಿತ್ತು. ನಮ್ಮ ತಲೆಯ ಮೇಲೆ $46^0$ ಸೆಲ್ಸಿಯಸ್ ಮೈ ಸುಡುವ ರಣ ಬಿಸಿಲಿತ್ತು. ಆದರೆ ಕಅ್‌ಬದ ಸುತ್ತಲೂ ಹಾಸಿದ್ದ ಬಿಳಿ ಮಾರ್ಬಲ್ ತಣ್ಣಗಾಗಿತ್ತು. ಬರಿಗಾಲುಗಳಲ್ಲಿ ಪ್ರದಕ್ಷಿಣೆ ಮಾಡುತ್ತಿದ್ದ ನಮ್ಮ ಪಾದಗಳಿಗೆ ಏನೂ ಬಿಸಿ ಇಲ್ಲ! ಸ್ತ್ರೀಯರೂ ಪುರುಷರೂ ಆಬಾಲ ವೃದ್ಧರೂ ವರ್ಣ–ವರ್ಗ, ಧನಿಕ–ದರಿದ್ರ, ಬಡವ–ಬಲ್ಲಿದ, ಮೇಲು–ಕೀಳು ಎಂಬ ಭೇದ ಭಾವವಿಲ್ಲದೆ ಒಂದು ಕ್ಷಣವೂ ತಪ್ಪದೆ ಮಾಡುವ ಕಅ್‌ಬ ಪ್ರದಕ್ಷಿಣೆ ಒಂದು ವಿಶೇಷವಾದ ದೇವಾರಾಧನೆಯಾಗಿದೆ. ಅದು ಇಸ್ಲಾಂ ಧರ್ಮದಲ್ಲಿರುವ ಮನುಷ್ಯ ಸಮತ್ವವನ್ನು ಸಾರುತ್ತದೆ. ಐದು ಹೊತ್ತಿನ ಫರ್ಝ್ ನಮಾಝ್ ಸಮಯದಲ್ಲಿ ಪ್ರದಕ್ಷಿಣೆ ನಿಶ್ಚಲವಾದರೂ ಆ ನಮಾಝ್‌ಗಳು ಸಹ ಕಅ್‌ಬದ ಸುತ್ತಲೂ ಮಾಡಲ್ಪಡುವುದರಿಂದ ದೇವಾರಾಧನೆ ಸ್ಥಗಿತಗೊಳ್ಳುವುದಿಲ್ಲ. ಇಂತಹ ಒಂದು ದೃಶ್ಯ ಬೇರೆಲ್ಲೂ ಕಾಣಲು ಅಸಾಧ್ಯ.

ತವಾಫ್ ಕಅ್‌ಬದ ಒಂದು ಮೂಲೆಯಲ್ಲಿರುವ ಹಜರುಲ್ ಅಸ್ವದ್ ಎಂಬ ಕಲ್ಲಿರುವ ಕಡೆಯಿಂದ ಪ್ರಾರಂಭವಾಗುತ್ತದೆ. ಕೆಲವು ಜನರು ಹಜರುಲ್ ಅಸ್ವದನ್ನು ಮುಟ್ಟಲಿಕ್ಕೂ ಮುದ್ದಿಸಲಿಕ್ಕೂ ಹೆಣಗಾಡುತ್ತಾರೆ. ಆದರೆ ಹಾಗೆ ಹೆಣಗಾಡುವ ಅಗತ್ಯವಿಲ್ಲ. ದೂರದಿಂದ ಕೈಯಿಂದ ಸಂಜ್ಞೆಮಾಡಿದರೆ ಸಾಕಾಗುತ್ತದೆ. ಏಳು ಸಲ ಪ್ರದಕ್ಷಿಣೆ ಮಾಡಿದ ನಂತರ ಅಲ್ಲೇ ಸುಡುಬಿಸಿಲಿನಲ್ಲಿ ಎರಡು ರಕ್‌ಅತ್ ನಮಾಝ್ ಮಾಡಿದೆವು.

ಕಅ್‌ಬ ತವಾಫ್ ಕುರಿತು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ) ಹೇಳಿದ ತತ್ವ ಈ ಸಂದರ್ಭದಲ್ಲಿ ಸ್ಮರಣಾರ್ಹ. ಅವರು ಹೇಳಿದರು:

"ಇದು ಬಹಳ ಸೂಕ್ಷ್ಮವಾದ ತತ್ವವಾಗಿದೆ. ಬಾಹ್ಯವಾದ ಬೈತುಲ್ಲಾದಂತೆ ಅದಕ್ಕೆ ಮಿಗಿಲಾಗಿ ಒಂದು ಉನ್ನತ ಸ್ಥಾನವಿದೆ. ಎಷ್ಟರ ವರೆಗೆ ಉಪರಿ ಲೋಕದಲ್ಲಿರುವ ಆ ಸ್ಥಾನವನ್ನು ಹೃತ್ಪೂರ್ವಕವಾಗಿ ತವಾಫ್ ಮಾಡುವುದಿಲ್ಲವೋ ಅಷ್ಟರವರೆಗೆ ಈ ತವಾಫ್ ಪ್ರಯೋಜನಕರ ಅಥವಾ ಫಲಪ್ರದವಾಗುವುದಿಲ್ಲ. ಬಾಹ್ಯವಾದ ರೀತಿಯಲ್ಲಿ ತವಾಫ್ ಮಾಡುವವರು ಕಡಿಮೆ ವಸ್ತ್ರಧಾರಣೆ ಮಾಡುತ್ತಾರೆ. ಅದೇ ಪ್ರಕಾರ ಭೌತಿಕ ಬಂಧಗಳೆಂಬ ವಸ್ತ್ರಗಳನ್ನು ತ್ಯಜಿಸಿ ದೇವಪ್ರೀತಿ, ದೇವಾನುರಕ್ತಿ ಮತ್ತು ಭಯ ಭಕ್ತಿಯ ವಸ್ತ್ರಗಳನ್ನು ಧರಿಸಿಕೊಂಡು ಊರ್ಧ್ವಲೋಕದಲ್ಲಿರುವ ಬೈತುಲ್ಲಾದ ತವಾಫ್ ಮಾಡಬೇಕಾಗಿದೆ. ತವಾಫ್ ದೇವಾನುರಕ್ತಿಯ ಚಿಹ್ನೆಯಾಗಿದೆ. ಇದರ ಅರ್ಥ ದೇವಪ್ರೀತಿಗೆ ಸುತ್ತಲೂ ಪ್ರದಕ್ಷಿಣೆ ಮಾಡುವುದಾಗಿದೆ. ಅಲ್ಲಿ ಬೇರೆ ಯಾವ ಉದ್ದೇಶವೂ ಇರುವುದಿಲ್ಲ."

(ಮಲ್‌ಫೂಝಾತ್ ಸಂಪುಟ 9, ಪುಟ 123, 124)



ಲೇಖಕ ಮತ್ತು ಅನಸ್ ಅಹ್ಮದ್ ಮಸ್ಜಿದುಲ್ ಹರಾಮ್‌ನಲ್ಲಿ

ತವಾಫ್ ಮತ್ತು ಸುನ್ನತ್ ನಮಾಝ್ ನಿರ್ವಹಿಸಿದ ಬಳಿಕ ನಾವು ಝಂಝಂ ನೀರು ಕುಡಿದೆವು. (ಶೀತಲೀಕರಿಸಿದ ಮತ್ತು ಶೀತಲೀಕರಿಸದ ಝಂಝಂ ನೀರು ತುಂಬಿಸಿದ ಡ್ರಮ್‌ಗಳನ್ನು ಮಸ್ಜಿದುಲ್ ಹರಾಮ್‌ನ ಮೂಲೆ ಮೂಲೆಗಳಲ್ಲಿ ಆಗಿಂದಾಗ್ಗೆ ಇರಿಸುವ ವಿಶೇಷ ಏರ್ಪಾಡು ಇದೆ.) ಅನಂತರ ಸಅ್‌ಯ್ ಮಾಡಲು ಹೋದೆವು. ಸಫಾ ಮತ್ತು ಮರ್ವಾ ಬೆಟ್ಟಗಳ ಮಧ್ಯೆ ಏಳು ಸಲ ನಡೆದಾಡುವುದನ್ನು ಅಥವಾ ಓಡಾಡುವುದನ್ನು ಸಅ್‌ಯ್ ಎಂದು ಹೇಳಲಾಗುತ್ತದೆ.

ಪೂರ್ವಕಾಲದಲ್ಲಿ ಪ್ರವಾದಿ ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಅಲ್ಲಾಹನ ಸತ್ವಪರೀಕ್ಷೆಗೊಳಗಾಗಿ, ದೇವಾಜ್ಞೆಯಂತೆ ಪತ್ನಿ ಹಾಜಿರ ಮತ್ತು ಶಿಶು ಇಸ್ಮಾಈಲ್ – ಇವರಿಬ್ಬರನ್ನು ಮಕ್ಕದ ನಿರ್ಜನ ಮರುಭೂಮಿಯಲ್ಲಿ ತ್ಯಜಿಸಿ ಹೋಗಿದ್ದರು. ಕೈವಶದಲ್ಲಿದ್ದ ನೀರು ಮುಗಿದ ನಂತರ, ಶಿಶು ಇಸ್ಮಾಈಲ್ ಬಾಯಾರಿಕೆಯಿಂದ ಬಳಲಿ ಚಡಪಡಿಸುತ್ತಿದ್ದಾಗ, ಹಝ್ರತ್ ಹಾಜಿರ(ರ) ನೀರಿಗೋಸ್ಕರ ಸಫಾ ಮತ್ತು ಮರ್ವಾ ಬೆಟ್ಟಗಳ ಮಧ್ಯೆ ಏಳು ಸಲ ಅತ್ತಿಂದಿತ್ತ ಓಡಾಡಿದ್ದರು. (ಆ ಸಂದರ್ಭದಲ್ಲಿ ಶಿಶು ಇಸ್ಮಾಈಲ್ ಕಾಲುಗಳನ್ನು ಬಡಿದ ಸ್ಥಳದಲ್ಲಿ ಹೊರಹೊಮ್ಮಿದ ನೀರ ಬುಗ್ಗೆಯೇ ಝಂಝಂ.) ಹಝ್ರತ್ ಹಾಜಿರರ ಸ್ಮರಣಾರ್ಥ ಸಅ್‌ಯ್ ಎಂಬ ಈ ಓಡಾಟ ಮಾಡಲಾಗುತ್ತದೆ.

ಈ ಎರಡು ಬೆಟ್ಟಗಳ ಮಧ್ಯೆ ಸುಮಾರು ಒಂದು ಫರ್ಲಾಂಗ್ ದೂರವಿದೆ. ಬೆಟ್ಟಗಳ ಕುರುಹಾಗಿ ಸ್ವಲ್ಪ ಅಂಶವನ್ನು ಬಾಕಿಯಿರಿಸಲಾಗಿದೆ. ಇವೆಲ್ಲ ಈಗ ಮಸೀದಿಯ ವಿಸ್ತೃತ ಭಾಗದಲ್ಲಿ ಒಳಗೊಂಡಿರುತ್ತವೆ.

ಝುಹ್‌ರ್ ಮತ್ತು ಅಸ್‌ರ್ ನಮಾಝ್‌ಗಳನ್ನು ಸಅ್‌ಯ್ ಮಾಡುವ ಮಧ್ಯದಲ್ಲೇ ನಿರ್ವಹಿಸಿದೆವು. ಸಅ್‌ಯ್ ಮುಗಿಯುವಾಗ ಸಾಯಂಕಾಲ 6 ಗಂಟೆಯಾಗಿತ್ತು. ನಂತರ ನಾನು ಮತ್ತು ಅನಸ್ ಬಾರ್ಬರ್ ಅಂಗಡಿಗೆ ಹೋಗಿ ತಲೆ ಕೂದಲು ನಿವಾರಿಸಿದೆವು. ಐದು ನಿಮಿಷದೊಳಗೆ ತಲೆಗೆ ಸಾಬೂನು ಹಾಕಿ ತಲೆ ಬೋಳಿಸಿದುದಕ್ಕೆ 10 ರಿಯಾಲ್ ಚಾರ್ಜ್! (ಕಲ್ಲಿಕೋಟೆ ವಿಮಾನ ನಿಲ್ದಾಣದಲ್ಲಿ ನಾವು ಕೊಟ್ಟ ವಿನಿಮಯ ದರ 1 ರಿಯಾಲ್‌ಗೆ ರೂ. 16.60)

29ರಂದು ಬುಧವಾರ ಬೆಳಿಗ್ಗೆ ನಾವು "ಬದಲಿ ಉಮ್ರಃ" ನಿರ್ವಹಿಸಲು ಹೊರಟೆವು. ಮೃತರಾದ ತಂದೆ, ತಾಯಿ, ಬಂಧುಬಳಗ, ಗುರುವರ್ಯರುಗಳ ಪರವಾಗಿ ಬದಲಿ ಉಮ್ರಃ ನಿರ್ವಹಿಸಬಹುದಾಗಿದೆ. ನಾನು ನನ್ನ ತಂದೆಗೋಸ್ಕರ, ನನ್ನ ಪತ್ನಿ ತನ್ನ ತಾಯಿಗೋಸ್ಕರ, ನನ್ನ ಅಕ್ಕ ತಾಯಿಗೋಸ್ಕರ ಮತ್ತು ಅನಸ್ ತನ್ನ ತಂದೆಗೋಸ್ಕರ ಬದಲಿ ಉಮ್ರಃ ಮಾಡುವ ನಿಯ್ಯತ್ ಮಾಡಿದ್ದೆವು. "ತನ್‌ಈಮ್" ಎಂಬಲ್ಲಿರುವ "ಮಸ್ಜಿದ್ ಆಯಿಶಾ"ಕ್ಕೆ ಹೋಗಲು ನಾವು ಟ್ಯಾಕ್ಸಿ ಹಿಡಿದೆವು. ಸುಮಾರು 10 ಕಿಲೋಮೀಟರ್ ದೂರವಿರುವ ತನ್‌ಈಮ್‌ಗೆ ಹೋಗಲು 20 ರಿಯಾಲ್ ಬಾಡಿಗೆ ನಿಶ್ಚಯಿಸಲಾಯಿತು. ಹಾಗೆ ಕಾರಿನಲ್ಲಿ ಹೋಗುತ್ತಿರುವಾಗ, ಇಲ್ಲೆಲ್ಲಾ ಸುತ್ತಾಡಿಸುತ್ತೇನೆ, 100 ರಿಯಾಲ್ ಹೆಚ್ಚು ಬಾಡಿಗೆ ಕೊಡಬೇಕೆಂದು ಆ ಬಂಗಾಳಿ ಡ್ರೈವರ್ ಹೇಳಿದನು. ನಾವು ಅದಕ್ಕೆ ಒಪ್ಪಿದಾಗ ಅವನು ನಮಗೆ ಗಾರೆ ಹಿರಾ (ಹಿರಾ ಗುಹೆ), ಗಾರೆ ಸೌರ್ (ಸೌರ್ ಗುಹೆ), ಅರಫಾ, ಮುಝ್ದಲಿಫ, ಮಿನ, ಜಂರ ಮೊದಲಾದ ಸ್ಥಳಗಳನ್ನು ದೂರದಿಂದ ತೋರಿಸಿದನು. ಜಬಲ್ ರಹ್ಮತ್ ಹತ್ತಿರ ಕಾರು ನಿಲ್ಲಿಸಿದನು. ನಾವು ಜಬಲ್ ರಹ್ಮತ್ ಬೆಟ್ಟದ ಮೇಲೆ ಹತ್ತಿ ರಣಬಿಸಿಲಿನಲ್ಲಿ ಎರಡು ರಕ್‌ಅತ್ ನಮಾಝ್ ನಿರ್ವಹಿಸಿದೆವು. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಹಜ್ಜತುಲ್ ವಿದಾಅ್ ಎಂಬ ತನ್ನ ಕೊನೆಯ ಹಜ್ಜ್ ಪ್ರವಚನ ಮಾಡಿದ್ದು ಈ ಬೆಟ್ಟದ ಸಮೀಪವಾಗಿತ್ತು.


ಅಲ್ಲಿಂದ ನಾವು ತನ್‌ಈಮ್‌ಗೆ ಬಂದು ಸ್ನಾನ ಮಾಡಿ ಇಹ್ರಾಮ್ ವಸ್ತ್ರಧಾರಣೆ ಮಾಡಿದೆವು. "ಮಸ್ಜಿದ್ ಆಯಿಶಾ"ದಲ್ಲಿ 2 ರಕ್‌ಅತ್ ನಮಾಝ್ ಮಾಡಿ ಅಲ್ಲಿಂದ ಬಸ್ಸಿನಲ್ಲಿ ಮಸ್ಜಿದುಲ್ ಹರಾಮ್‌ಗೆ ಬಂದೆವು. ಬಸ್ ಟಿಕೆಟ್ – ಒಬ್ಬ ವ್ಯಕ್ತಿಗೆ 2 ರಿಯಾಲ್.

ಮಗ್‌ರಿಬ್ ನಮಾಝ್ ನಂತರ ಬದಲಿ ಉಮ್ರಃ ಮಾಡಲು ನಾವು ಬಯಸಿದ್ದೆವು. ನನ್ನ ಅಕ್ಕ ಮತ್ತು ಪತ್ನಿಗೆ ಮಂಡಿ ನೋವು ಇರುವುದರಿಂದ ನಮ್ಮ ವಸತಿಗೃಹದಿಂದ ನಾವು ಗಾಲಿಕುರ್ಚಿ ತಂದಿದ್ದೆವು. ಗಾಲಿಕುರ್ಚಿ ಇದ್ದ ಕಾರಣ ಇಶಾ ನಮಾಝ್‌ಗೆ ಮೊದಲು ಕಅ್‌ಬ ತವಾಫ್ ಮಾಡಲು ನಮಗೆ ಅನುಮತಿ ಸಿಗಲಿಲ್ಲ. ಇಶಾ ನಮಾಝ್ ಬಳಿಕ ನಾವು ಕಅ್‌ಬ ತವಾಫ್ ಮತ್ತು ಸಅ್‌ಯ್ ನಿರ್ವಹಿಸಿ ರಾತ್ರೆ ಸುಮಾರು 12.30ಕ್ಕೆ ನಮ್ಮ ಬದಲಿ ಉಮ್ರಃ ಪೂರ್ಣಗೊಂಡಿತು. ಅನಂತರ ನಾವು ಮಸೀದಿಯಲ್ಲೇ ಸ್ವಲ್ಪ ಹೊತ್ತು ನಿದ್ರಿಸಿ ತಹಜ್ಜುದ್ ನಮಾಝ್ ಮಾಡಿದೆವು.

ಗುರುವಾರ ದಮ್ಮಾಮ್‌ನಿಂದ ನನ್ನ ಅಕ್ಕನ ಮಗ ಮುಹಮ್ಮದ್ ರಫೀಕ್, ಪತ್ನಿ ಮತ್ತು ಮಗ ಉಮ್ರಃಕ್ಕೆ ಬಂದಿದ್ದರು. ರಿಯಾದ್‌ನಿಂದ ಸಲೀಂ ಸಾಹೇಬ್, ಪತ್ನಿ ಮತ್ತು ಮಕ್ಕಳು ಸಹ ಉಮ್ರಃಕ್ಕೆ ಬಂದಿದ್ದರು. ಗುರುವಾರ ಸಂಜೆ, ಸಲೀಂ ಸಾಹೇಬರ ಕಾರಿನಲ್ಲಿ ಹೋಗಿ ನಾವು ಜನ್ನತುಲ್‌ಮುಹಲ್ಲದಲ್ಲಿರುವ ಹಝ್ರತ್ ಖದೀಜ(ರ) ಅವರ ಸಮಾಧಿ ಸ್ಥಳವನ್ನು ಸಂದರ್ಶಿಸಿ ದುಆ ಮಾಡಿದೆವು.

1-8-2009 ಶನಿವಾರ ಬೆಳಿಗ್ಗೆ 7 ಗಂಟೆಗೆ ನಾವು ಮದೀನಕ್ಕೆ ಹೋಗಲು ಬಸ್ ಹತ್ತಿದೆವು. 7.30ಕ್ಕೆ ಬಸ್ ಮಕ್ಕದಿಂದ ಹೊರಟಿತು. ಮಧ್ಯಾಹ್ನ 1.30ಕ್ಕೆ ಬಸ್ ಮದೀನ ಮುನವ್ವರ ತಲಪಿತು. ಇಲ್ಲಿ ಸಹ ನಮ್ಮ ವಸತಿ ಗೃಹ "ಅಲ್ ಮುಹ್‌ತಾರ ಪ್ಯಾಲೆಸ್ ನಂ.2" ಮಸ್ಜಿದ್ ನಬವಿಯಿಂದ ಸುಮಾರು ಅರ್ಧ ಕಿ.ಮೀ ಮಾತ್ರ ದೂರದಲ್ಲಿ ಮಸ್ಜಿದ್ ಇಜಾಬಾದ ಸಮೀಪದಲ್ಲಿತ್ತು. ಇಲ್ಲಿ ನಾವು ತಂಗಿದ್ದ ಕೋಣೆ ಕ್ರಮಾಂಕ 111 ನಾಲ್ಕು ಬೆಡ್‌ಗಳನ್ನು ಹೊಂದಿದ್ದು, ಅಟಾಚ್ಡ್ ಬಾತ್‌ರೂಮ್, ಎ.ಸಿ., ಟಿ.ವಿ., ಫ್ರಿಜ್, ಫೋನ್, ಕಿಚನ್ ಮೊದಲಾದ ಎಲ್ಲಾ ಸೌಕರ್ಯಗಳನ್ನು ಹೊಂದಿತ್ತು. ಪ್ರಕೃತಿ ಸಹಜವಾಗಿಯೇ ನಳ್ಳಿಯಲ್ಲಿ ಬರುವ ಬಿಸಿ ನೀರಿನಲ್ಲಿ ನಾವು ಸ್ನಾನ ಮಾಡಿದೆವು. ಅನಂತರ "ಮಸ್ಜಿದುನ್ನುಬವಿ" (ಪ್ರವಾದಿಯವರ ಮಸೀದಿ)ಗೆ ಹೋಗಿ ತಹಿಯ್ಯತ್, ಮಗ್‌ರಿಬ್, ಇಶಾ ನಮಾಝ್ ಮಾಡಿದೆವು. ಮಸ್ಜಿದುನ್ನಬವಿ ಬಹಳ ವಿಶಾಲವಾದ ಮಸೀದಿಯಾಗಿದ್ದು ನಾವು ಸಾಮಾನ್ಯವಾಗಿ 11ನೇ ಗೇಟ್‌ನಿಂದ ಮಸೀದಿಯೊಳಗೆ ಪ್ರವೇಶಿಸುತ್ತಿದ್ದೆವು.

ಮರುದಿನ ಆದಿತ್ಯವಾರ ಬೆಳಿಗ್ಗೆ 8 ಗಂಟೆಗೆ ಮದೀನದ ವಿವಿಧ



ಮಸ್ಜಿದುನ್ನಬವಿ

ಸ್ಥಳಗಳನ್ನು ಸಂದರ್ಶಿಸಲು ನಾವು ಹೊರಟೆವು. 50 ರಿಯಾಲ್‌ಗೆ ಬಾಡಿಗೆ ನಿಶ್ಚಯಿಸಿ ಕಾರು ಹಿಡಿದೆವು. ಮೊದಲಿಗೆ ಜಬಲ್ ಉಹುದ್‌ಗೆ ಹೋದೆವು. ಅಲ್ಲಿ ಹಝ್ರತ್ ಪೈಗಂಬರರ(ಸ) ಮಾವ ಹಝ್ರತ್ ಹಂಝ(ರ) ಮತ್ತು ಉಹುದ್ ಯುದ್ಧದಲ್ಲಿ ಹುತಾತ್ಮರಾದ 70 ಮಂದಿಯ ಸಮಾಧಿಗಳಿವೆ. ನಾವು ಅಲ್ಲಿ ದುಆ ಮಾಡಿದೆವು. ಅನಂತರ ನಾವು ಮಸ್ಜಿದ್ ಖುಬಾ ಸಂದರ್ಶಿಸಿ ನಮಾಝ್ ಮಾಡಿದೆವು. (ಹಝ್ರತ್ ಪೈಗಂಬರರು(ಸ) ಮಕ್ಕದಿಂದ ವಲಸೆ ಹೋಗಿ ಮದೀನ ಪ್ರವೇಶಿಸುವುದಕ್ಕೆ ಮುಂಚೆ 10 ದಿನಗಳ ಕಾಲ ಖುಬಾ ಗ್ರಾಮದಲ್ಲಿ ತಂಗಿದ್ದರು.) ಆ ಬಳಿಕ ನಾವು ಮಸ್ಜಿದ್ ಉಮರ್, ಮಸ್ಜಿದ್ ಫತಹ್ ಮತ್ತು ಮಸ್ಜಿದ್ ಸಲ್ಮಾನುಲ್ ಫಾರಿಸಿ ಸಂದರ್ಶಿಸಿ ಎರಡೆರಡು ರಕ್‌ಅತ್ ನಮಾಝ್ ಮಾಡಿದೆವು. ಮಸ್ಜಿದ್ ಫತಹ್ ಮತ್ತು ಮಸ್ಜಿದ್ ಸಲ್ಮಾನುಲ್ ಫಾರಿಸಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರಾನಿಗಳು ಕಂಡು ಬರುತ್ತಾರೆ. ಮಸ್ಜಿದ್ ಫತಹ್‌ನಲ್ಲಿ ನನ್ನ ಕನ್ನಡಕ ಕಾಣೆಯಾಗಿತ್ತು. ನಾನು ಆತಂಕಿತನಾಗಿ ಕನ್ನಡಕ ಹುಡುಕುತ್ತಿದ್ದಾಗ, ಓರ್ವ ಇರಾನಿ ಸ್ತ್ರೀ ನನ್ನನ್ನು ಕರೆದು, "ಏನು ನೀವು ಕನ್ನಡಕ ಹುಡುಕುತ್ತಿದ್ದೀರಾ?" ಎಂದು ಕೇಳಿ ಕನ್ನಡಕವನ್ನು ತೋರಿಸಿಕೊಟ್ಟಳು. ಇಲ್ಲಿರುವ ಮಸ್ಜಿದ್ ಸಲ್ಮಾನುಲ್ ಫಾರಿಸಿ ಮತ್ತು ಮಸ್ಜಿದ್ ಫತಹ್ ಮಾತ್ರ ಪುರಾತನ ಮಾದರಿಯಲ್ಲಿವೆ. ಶತ್ರುಗಳ ಆಕ್ರಮಣದಿಂದ ಸುರಕ್ಷಿತರಾಗಲು ಹಝ್ರತ್ ಸಲ್ಮಾನುಲ್ ಫಾರಿಸಿ(ರ) ಅವರ ಸಲಹೆಯ ಪ್ರಕಾರ ಈ ಪ್ರದೇಶದಲ್ಲಿ ಕಂದಕವನ್ನು ತೋಡಲಾಗಿತ್ತು. ಅಲ್ಲಿಂದ ಹೊರಟು ನಾವು ಮಸ್ಜಿದ್ ಖಿಬಿಲತೈನ್ ಸಂದರ್ಶಿಸಿ ನಮಾಝ್ ಮಾಡಿ, ಮಸ್ಜಿದುನ್ನಬವಿಗೆ ಒಂದು ಝುಹ್‌ರ್, ಅಸ್‌ರ್ ನಮಾಝ್ ಮಾಡಿದೆವು. ಆ ಬಳಿಕ ನಾವು ರೌಳ ಶರೀಫ್ (ಹಝ್ರತ್ ಪೈಗಂಬರರ ಸಮಾಧಿ) ಸಂದರ್ಶಿಸಲು ಹೋದೆವು. ಜನರ ನೂಕುನುಗ್ಗಲು ಇದ್ದ ಕಾರಣ ರೌಳ ಶರೀಫಿನ ಒಳಗೆ ಸರಿಯಾಗಿ ನೋಡಲು ಸಾಧ್ಯವಾಗಲಿಲ್ಲ. ಅದರ ಪಕ್ಕದಲ್ಲೇ ಖಲೀಫ ಹಝ್ರತ್ ಅಬೂಬಕರ್(ರ) ಮತ್ತು ಖಲೀಫ ಹಝ್ರತ್ ಉಮರ್(ರ) ಅವರ ಸಮಾಧಿಗಳಿವೆ. ರೌಳ ಶರೀಫಿನ ಎದುರು ಕಡೆ ಇರುವ ಸ್ಥಳದಲ್ಲಿ ನಾನು ಮತ್ತು ಅನಸ್ ನಮಾಝ್ ಮಾಡಿ ದುಆ ಮಾಡಿದೆವು.

3ನೇ ತಾರೀಕು ಸೋಮವಾರ ಬೆಳಿಗ್ಗೆ ನಾವೆಲ್ಲರೂ ಪುನಃ ರೌಳ ಶರೀಫ್ ನೋಡಲು ಹೊರಟೆವು. ನೂಕು ನುಗ್ಗಲು ಇಲ್ಲದ ಕಾರಣ ನಮಗೆ ರೌಳ ಶರೀಫ್ ಸರಿಯಾಗಿ ನೋಡಲು ಸಾಧ್ಯವಾಯಿತು. ಅಲ್‌ಹಮ್ದುಲಿಲ್ಲಾಹ್. ನನ್ನ ಪತ್ನಿ ಮತ್ತು ಅಕ್ಕ ಸಹ ಸ್ತ್ರೀಯರ ವಿಭಾಗದಲ್ಲಿ ಹೋಗಿ ರೌಳ ಶರೀಫ್ ಸಂದರ್ಶಿಸಿದರು. ಮಕ್ಕದಲ್ಲಿರುವ ಮಸ್ಜಿದುಲ್ ಹರಾಮ್‌ನಲ್ಲಿ ಪುರುಷರೂ ಸ್ತ್ರೀಯರೂ ಒಟ್ಟಿಗೆ ಮಸೀದಿ ಪ್ರವೇಶಿಸಬಹುದಾಗಿದೆ. ಆದರೆ ಮದೀನದ ಮಸ್ಜಿದುನ್ನಬವಿಯಲ್ಲಿ ಪುರುಷರಿಗೆ ಮತ್ತು ಸ್ತ್ರೀಯರಿಗೆ ಮಸೀದಿ ಪ್ರವೇಶಿಸಲು ಬೇರೆ ಬೇರೆ ಬಾಗಿಲುಗಳಿವೆ. ಮಸೀದಿಯ ಒಳಗೆ ಎಲ್ಲೂ ಪುರುಷರು ಮತ್ತು ಸ್ತ್ರೀಯರು ಒಟ್ಟಿಗೆ ಸೇರುವ ಅವಕಾಶವಿಲ್ಲ.

4ನೇ ತಾರೀಕು ಮಂಗಳವಾರ ರಾತ್ರೆ ನಾವು ಜನ್ನತುಲ್ ಬಖೀ ಸಂದರ್ಶಿಸಿ ದುಆ ಮಾಡಿದೆವು. ಅಲ್ಲಿ ಸುಮಾರು 10 ಸಾವಿರ ಸಹಾಬಿಗಳನ್ನು ದಫನ ಮಾಡಲಾಗಿದೆ.

6ನೇ ತಾರೀಕು ಗುರುವಾರ ನಾವು ಬಸ್ಸಿನಲ್ಲಿ ಮದೀನದ ವಿವಿಧ ಸ್ಥಳಗಳ ಸಂದರ್ಶನಕ್ಕೆ ಹೊರಟೆವು. ಬಸ್ ಬೆಳಿಗ್ಗೆ 7 ಗಂಟೆಗೆ ಹೊರಟಿತು. ಒಬ್ಬ ವ್ಯಕ್ತಿಗೆ 15 ರಿಯಾಲ್ ಚಾರ್ಜ್. ಪ್ರಥಮವಾಗಿ ಬಸ್ ಗೈಡ್ ನಮಗೆ ಹಝ್ರತ್ ಅಬೂ ಅಯ್ಯೂಬ್ ಅನ್ಸಾರಿ(ರ) ಅವರ ಮನೆಯಿದ್ದ ಸ್ಥಳವನ್ನು ತೋರಿಸಿದನು. ಹಝ್ರತ್ ಪೈಗಂಬರರು(ಸ) ಮಕ್ಕದಿಂದ ಬಂದು ಮೊತ್ತ ಮೊದಲಾಗಿ ಅಲ್ಲಿದ್ದ ಮನೆಯಲ್ಲಿ ವಾಸ ಮಾಡಿದ್ದರು. ಈಗ ಅಲ್ಲಿ ಮಸೀದಿ ಇದೆ. ಅನಂತರ ನಮ್ಮ ಗೈಡ್ ನಮಗೆ ಮಸ್ಜಿದ್ ಅಬ್ದುಲ್ಲಾ ಬುಖಾರಿ, ಮಸ್ಜಿದ್ ಅಬೂದರ್ರ್, ಹಝ್ರತ್ ಪೈಗಂಬರರು(ಸ) ಕ್ರೈಸ್ತರೊಡನೆ ಮುಬಾಹಲ ಮಾಡಲು ನಿಶ್ಚಯಿಸಿದ್ದ ಮಸ್ಜಿದ್ ಮುಬಾಹಲ, ಮಸ್ಜಿದ್ ಗಮಾಮ, ಮಸ್ಜಿದ್ ಜುಮಾ (ಪ್ರಥಮ ಜುಮಾ ನಡೆದ ಮಸೀದಿ), ಮಸ್ಜಿದ್ ಅಬೂಬಕರ್, ಮಸ್ಜಿದ್ ಉಮರ್, ಮಸ್ಜಿದ್ ಉಸ್ಮಾನ್, ಮಸ್ಜಿದ್ ಅಲಿ, ಮಸ್ಜಿದ್ ಬಿಲಾಲ್, ಮಸ್ಜಿದ್ ಫತಹ್, ಮಸ್ಜಿದ್ ಸಲ್ಮಾನ್ ಫಾರಿಸಿ, ಮಸ್ಜಿದ್ ಖುಬಾ, ಮಸ್ಜಿದ್ ಖಿಬಿಲತೈನ್, ಮಸ್ಜಿದ್ ಮಿನಾರತೈನ್, ಮಸ್ಜಿದ್ ಇಜಾಬ ಮೊದಲಾದವುಗಳನ್ನು ತೋರಿಸಿದನು. ಸಂದರ್ಭ ಸಿಕ್ಕಿದಾಗಲೆಲ್ಲಾ ಕೆಲವು ಮಸೀದಿಗಳಲ್ಲಿ ನಾವು ಎರಡೆರಡು ರಕ್‌ಅತ್ ನಮಾಝ್ ಮಾಡಿದೆವು.

ಬೀರೆ ಗರ್ಸ್ ಎಂಬಲ್ಲಿ ಹಝ್ರತ್ ಪೈಗಂಬರರು(ಸ) ಬಾವಿ ತೋಡಿದ್ದರು. ಆಗ ಜನರು ಝಂಝಂ ನೀರಿನ ಬದಲು ಈ ಬಾವಿಯಿಂದ ನೀರು ಕೊಂಡೊಯ್ಯಲು ತೊಡಗಿದರಂತೆ. ಆದುದರಿಂದ ಪೈಗಂಬರರು(ಸ) ಆ ಬಾವಿಯನ್ನು ಮುಚ್ಚಿಬಿಟ್ಟರು.

ಹಝ್ರತ್ ಉಸ್ಮಾನ್(ರ) ಅವರ ತೋಟದ ಬಳಿ ನಮ್ಮ ಬಸ್ ನಿಂತಿತು. ಅಲ್ಲಿರುವ ಒಂದು ಬಾವಿ ಒಬ್ಬ ಯಹೂದಿಗೆ ಸೇರಿದ್ದಾಗಿತ್ತಂತೆ. ಹಝ್ರತ್ ಉಸ್ಮಾನ್(ರ) ಆ ಬಾವಿಯನ್ನು ಖರೀದಿಸಲು ಇಚ್ಛಿಸಿದರು. ಆದರೆ ನೀರು ಮಾರುತ್ತಿದ್ದ ಆ ಯಹೂದಿ ಬಾವಿಯನ್ನು ಮಾರಲು ಸಿದ್ಧನಾಗಲಿಲ್ಲ. ಆಗ ಉಸ್ಮಾನ್(ರ) ಅರ್ಧ ಬಾವಿಯನ್ನು ಮಾರಲು ಕೇಳಿಕೊಂಡರು. ಅದು ಹೇಗೆಂದು ಯಹೂದಿ ಕೇಳಿದನು. ಒಂದು ದಿನ ನೀರು ನಿನಗೆ, ಮತ್ತೊಂದು ದಿನ ನೀರು ನನಗೆ ಎಂದು ಹ। ಉಸ್ಮಾನ್(ರ) ಹೇಳಿದರು. ಅದಕ್ಕೆ ಯಹೂದಿ ಒಪ್ಪಿದಾಗ, 12,000 ದಿರ್ಹಮ್‌ಗೆ ಅರ್ಧ ಬಾವಿಯನ್ನು ಹ। ಉಸ್ಮಾನ್(ರ) ಪಡಕೊಂಡರು. ಹ। ಉಸ್ಮಾನ್ ಒಂದು ದಿನದ ಅಂತರದಲ್ಲಿ ಎಲ್ಲ ಮುಸ್ಲಿಮರಿಗೆ ಉಚಿತವಾಗಿ ನೀರು ಕೊಡುತ್ತಿದ್ದರು. ಆದ ಕಾರಣ ಆ ಯಹೂದಿಯಿಂದ ಕ್ರಯ ಕೊಟ್ಟು ಯಾರೂ ನೀರು ಪಡೆಯುತ್ತಿರಲಿಲ್ಲ. ಆಗ ಆ ಯಹೂದಿ ಬಾಕಿ ಅರ್ಧ ಬಾವಿಯನ್ನು ಸಹ ಮಾರಲು ಬಯಸಿದನು. ಹ। ಉಸ್ಮಾನ್(ರ) ಆ ಅರ್ಧ ಬಾವಿಯನ್ನು 25,000 ದಿರ್ಹಮ್ ಕೊಟ್ಟು ಖರೀದಿಸಿದರು. ಯಹೂದಿಗೆ ಆಶ್ಚರ್ಯವಾಯಿತು. 12,000 ದಿರ್ಹಮ್‌ಗೆ ಬದಲು 25,000 ದಿರ್ಹಮ್ ಹ। ಉಸ್ಮಾನ್(ರ) ಕೊಟ್ಟಿದ್ದಾರೆ. ಕಾರಣವೇನೆಂದು ಯಹೂದಿ ಕೇಳಿದಾಗ, ಒಬ್ಬನು ತೊಂದರೆಗೊಳಗಾಗಿರುವ ಸಂದರ್ಭದಲ್ಲಿ ಅದರ ಅನುಚಿತವಾದ ಪ್ರಯೋಜನ ಪಡೆಯುವುದನ್ನು ಇಸ್ಲಾಂ ಒಪ್ಪುವುದಿಲ್ಲವೆಂದು ಹ। ಉಸ್ಮಾನ್(ರ)

ಹೇಳಿದರು. ಈ ತೋಟದ ವರಮಾನವೆಲ್ಲ ಬೈತುಲ್ ಮಾಲ್‌ಗೆ ಸಲ್ಲುತ್ತದೆ.

ನಮ್ಮ ಬಸ್ ಹಝ್ರತ್ ಸಲ್ಮಾನ್ ಫಾರಿಸಿ(ರ) ಅವರ ತೋಟದ ಸಮೀಪ ಹೋಯಿತು. ಸಲ್ಮಾನ್ ಫಾರಿಸಿ(ರ) ಒಬ್ಬ ಯಹೂದಿಯ ಅಧೀನದಲ್ಲಿದ್ದರಂತೆ. ಅವರನ್ನು ಬಿಡುಗಡೆ ಮಾಡಲು ಆ ಯಹೂದಿಯ ಬೇಡಿಕೆಯೇನೆಂದರೆ, 300 ಖರ್ಜೂರದ ಸಸಿಗಳನ್ನು ನೆಟ್ಟು ಅದರಲ್ಲಿ ಫಲ ಬರಬೇಕು ಮತ್ತು $1^{1}/_{4}$ ಕಿಲೋಗ್ರಾಮ್ ಚಿನ್ನ ನೀಡಬೇಕು. ಹಝ್ರತ್ ಪೈಗಂಬರರು(ಸ) 300 ಖರ್ಜೂರದ ಸಸಿಗಳನ್ನು ನೆಟ್ಟರು. ಅದರಲ್ಲಿ ಬೇಗನೇ ಫಲ ಬಂತು. $1^{1}/_{4}$ ಕಿ.ಗ್ರಾ. ಚಿನ್ನವನ್ನು ಸಹ ಸಿದ್ಧಪಡಿಸಿದರು. ಎರಡನ್ನೂ ಯಹೂದಿಗೆ ಒಪ್ಪಿಸಿ ಹ| ಸಲ್ಮಾನ್ ಫಾರಿಸಿ(ರ) ಅವರನ್ನು ಬಿಡುಗಡೆಗೊಳಿಸಿದರು. ಆ ತೋಟದ ಖರ್ಜೂರಕ್ಕೆ "ಅಜ್‌ವ" ಎಂದು ಹೆಸರು. ಇದರಲ್ಲಿ ಔಷಧ ಗುಣವಿದೆಯೆಂದು ಹೇಳಲಾಗುತ್ತದೆ. ಇದು ಕಪ್ಪು ಬಣ್ಣವನ್ನು ಹೊಂದಿದ್ದು ಚಿಕ್ಕ ಗಾತ್ರದಲ್ಲಿದೆ. ಮಕ್ಕ ಮತ್ತು ಮದೀನದಲ್ಲಿ ಹಲವು ತರದ ಖರ್ಜೂರಗಳು ಸಿಗುತ್ತವೆ. ಅಜ್‌ವಕ್ಕೆ ಅತ್ಯಂತ ಹೆಚ್ಚು ಕ್ರಯ. ಜಿದ್ದಃ ವಿಮಾನ ನಿಲ್ದಾಣದಲ್ಲಿ ಅಜ್‌ವದ ಒಂದೂವರೆ ಕಿಲೋ ಗ್ರಾಮಿನ ಪೆಟ್ಟಿಗೆಗೆ 250 ರಿಯಾಲ್ ಬೆಲೆ. (ಸುಮಾರು 4150 ರೂಪಾಯಿಗಳು). ಮಾರುಕಟ್ಟೆಯಲ್ಲಿ ಕಿ.ಲೋ. ಗ್ರಾಂ ಒಂದಕ್ಕೆ 40 ರಿಂದ 100 ರಿಯಾಲ್‌ವರೆಗೆ ಬೆಲೆ ಇದೆ.


11 ಗಂಟೆಗೆ ಬಸ್ ನಮ್ಮ ವಸತಿ ಗೃಹದ ಸಮೀಪಕ್ಕೆ ಬಂದು ನಮ್ಮನ್ನು ಇಳಿಸಿತು. ಆ ಬಳಿಕ ನಾನು ಮಸ್ಜಿದುನ್ನಬವಿಯಲ್ಲಿ ರೌಳ ಶರೀಫ್ ಸಂದರ್ಶಿಸಲು ಹೋದೆನು. ರೌಳ ಸಮೀಪ ತಲಪುವುದಕ್ಕೆ ಮುಂಚೆ ಹಝ್ರತ್ ಪೈಗಂಬರರು(ಸ) ನಮಾಝ್ ಮಾಡುವಾಗ ಇಮಾಮತ್ ನಿಂತ ಮಿಹ್ರಾಬ್ ಇದೆ. ನಾನು ಅಲ್ಲಿ ಸರದಿ ಸಾಲಿನಲ್ಲಿ ನಿಂತು 2 ರಕ್‌ಅತ್ ನಮಾಝ್ ಮಾಡಿದೆ. ತೃಪ್ತಿಯಾಗದೆ ಪುನಃ 2 ರಕ್‌ಅತ್ ನಮಾಝ್ ಮಾಡಿದೆ.

ಮಸ್ಜಿದುನ್ನಬವಿಯ ಹೊರಗೆ ಸುತ್ತಮುತ್ತಲೂ ಬಹಳ ವಿಶಾಲ ವಾದ ಪ್ರಾಂಗಣವಿದೆ. ಅಲ್ಲೆಲ್ಲಾ ಬಹಳ ವಿಶಾಲವಾದ, ಎತ್ತರದ ಬೃಹತ್ ಕೊಡೆಗಳಿವೆ. ಬಿಸಿಲು ಬಂದಾಗ ಅವು ಬಿಡಿಸಿಕೊಳ್ಳುತ್ತವೆ. ಬಿಸಿಲು ಹೋದಾಗ ಮುಚ್ಚಿಕೊಂಡು ಸ್ತಂಭಗಳಂತಾಗುತ್ತವೆ. ಮಸ್ಜಿದುನ್ನಬವಿ, ಮಸ್ಜಿದುಲ್ ಹರಾಮ್ ಮತ್ತು ಈ ಎರಡೂ ಮಸೀದಿಗಳ ನಾಲ್ಕು ದಿಕ್ಕುಗಳಲ್ಲಿರುವ ಪ್ರಾಂಗಣಗಳನ್ನು ದಿನಾಲೂ ಹಲವು ಸಲ ಶುಚಿ ಗೊಳಿಸುವ ವ್ಯವಸ್ಥೆ ಬಹಳ ವಿಶಿಷ್ಟತರದ್ದಾಗಿದೆ.

ಮಸ್ಜಿದುನ್ನಬವಿಯ ಪ್ರಾಂಗಣದ ನೆಲಮಾಳಿಗೆಯಲ್ಲಿ ಕಾರು ಪಾರ್ಕಿಂಗ್ ಮತ್ತು ನೂರಾರು ಶೌಚಾಲಯಗಳಿವೆ.

7ನೇ ತಾರೀಕು ಶುಕ್ರವಾರ ಮದೀನದಲ್ಲಿರುವ ಕಲ್ಲಿಕೋಟೆಯ ಇರ್ಶಾದ್ ನಮ್ಮನ್ನು ತನ್ನ ಕಾರಿನಲ್ಲಿ ಕೆಲವು ಕಡೆಗಳಿಗೆ ಕರಕೊಂಡು ಹೋದರು. ರಾತ್ರಿ ನಾವು ಕೊನೆಯ ಬಾರಿ ಮಸ್ಜಿದುನ್ನಬವಿಯಲ್ಲಿ ನಮಾಝ್ ಮಾಡಿ ರೌಳ ಶರೀಫ್ ಸಂದರ್ಶಿಸಲು ಹೋದೆವು. ಈ ಸಲ ಅನಸ್‌ನಿಗೆ ಪೈಗಂಬರರ(ಸ) ಮಿಹ್ರಾಬ್‌ನಲ್ಲಿ ನಮಾಝ್ ಮಾಡಲು ಅವಕಾಶ ದೊರೆಯಿತು. ಅಲ್ಲಿಂದ ಮರಳಿ ಬರುವಾಗ "ಮಸ್ಜಿದ್ ಇಜಾಬ"ಕ್ಕೆ ಬಂದು 2 ರಕ್‌ಅತ್ ನಮಾಝ್ ಮಾಡಿದೆವು. ಮಳೆಯಿಲ್ಲದೆ ಜನರು ಕಂಗೆಟ್ಟಾಗ ಒಂದು ಶುಕ್ರವಾರ ದಿನದಂದು ಹಝ್ರತ್ ಪೈಗಂಬರರು(ಸ) ಮಳೆಗೋಸ್ಕರ ಈ ಮಸೀದಿಯಲ್ಲಿ ಪ್ರಾರ್ಥಿಸಿದರು. ಒಂದು ವಾರ ಕಾಲ ನಿರಂತರ ಜಡಿಮಳೆ ಬಂದಾಗ, ಜನರ ಅಪೇಕ್ಷೆ ಮೇರೆಗೆ ಪುನಃ ಪೈಗಂಬರರು(ಸ) ಮಳೆ ನಿಲ್ಲಿಸುವಂತೆ ಅಲ್ಲಾಹನನ್ನು ಪ್ರಾರ್ಥಿಸಿದ್ದರು.

ರಾತ್ರಿ 11 ಗಂಟೆಗೆ ನಾವು ಮದೀನದಿಂದ ಬಸ್ಸಿನಲ್ಲಿ ಮಕ್ಕಕ್ಕೆ ಹೊರಟೆವು. ದಾರಿ ಮಧ್ಯೆ ಒಂದು ಮಸೀದಿ ಸಿಕ್ಕಿತು. ಉಮ್ರಃ ಮಾಡಲು ಬಂದ ಪುರುಷರು ಮತ್ತು ಮಹಿಳೆಯರು ಸ್ನಾನ ಮಾಡಿ ಇಹ್ರಾಮ್ ವಸ್ತ್ರಧಾರಣೆ ಮಾಡಿದರು. ಅಲ್ಲಿಂದ ಹೊರಟ ಬಸ್ ಫಜ್‌ರ್ ಸಮಯದಲ್ಲಿ ಮತ್ತೊಂದು ಮಸೀದಿಯ ಸಮೀಪ ನಿಂತಿತು. ನಾವು ಇಳಿದು ಫಜ್‌ರ್ ನಮಾಝ್ ಮಾಡಿದೆವು. ಅಲ್ಲಿ ಸ್ತ್ರೀ–ಪುರುಷರು ಒಂದೇ ಬಾಗಿಲಿನಿಂದ ಮಸೀದಿಯನ್ನು ಪ್ರವೇಶಿಸಿ ನಮಾಝ್ ಮಾಡಿದರು. ಸುಮಾರು 5.30ಕ್ಕೆ ನಾವು ನಮ್ಮ ವಸತಿ ಗೃಹ ತಲಪಿದೆವು. ಮಕ್ಕದಲ್ಲಿ ನಾವು ಮೊದಲು ವಾಸಮಾಡಿದ್ದ ಅದೇ ಕೋಣೆ ನಮಗೆ ಪುನಃ ಸಿಕ್ಕಿದುದರಿಂದ ನಮಗೆ ಸಂತೋಷವಾಯಿತು.




ಹಿರಾ ಗುಹೆಯಿರುವ ಪರ್ವತ (ಜಬಲುನ್ನೂರ್)

8ನೇ ದಿನಾಂಕ ಶನಿವಾರ ಬೆಳಿಗ್ಗೆ ನಾನು ಮತ್ತು ಅನಸ್ ಗಾರೆ ಹಿರಾ (ಹಿರಾ ಗುಹೆ) ನೋಡಲು ಹೊರಟೆವು. ನಾವು ಮದೀನಕ್ಕೆ ಹೋಗುವುದಕ್ಕೆ ಮೊದಲೊಮ್ಮೆ ಅಲ್ಲಿಗೆ ಹೋಗಲು ಬಯಸಿದ್ದೆವು. ಆದರೆ ಕಾರಣಾಂತರದಿಂದ ನನಗೆ ಹೋಗಲಿಕ್ಕೆ ಸಾಧ್ಯವಾಗಿರಲಿಲ್ಲ. ಅನಸ್ ಮಾತ್ರ ಅಲ್ಲಿಗೆ ಹೋಗಿ ಬಂದಿದ್ದನು. ಈ ದಿನ ನಾವಿಬ್ಬರೂ ಹೊರಟೆವು. 30 ರಿಯಾಲ್ ಬಾಡಿಗೆ ಕೊಟ್ಟು ನಾವು ಕಾರಿನಲ್ಲಿ 6.30ಕ್ಕೆ ಸುಮಾರು 5 ಕಿ.ಮೀ. ದೂರವಿರುವ ಜಬಲುನ್ನೂರ್ ಪರ್ವತದ ತಪ್ಪಲಿಗೆ ತಲಪಿದೆವು. ಕಣ್ಣ ಮುಂದೆ ಬಹಳ ಎತ್ತರವಾದ ಪರ್ವತ ಶಿಖರ! ವೇಗವಾಗಿ ಪರ್ವತ ಹತ್ತಲು ಪ್ರಯತ್ನಿಸಿದರೆ ಬೇಗನೇ ದಣಿವಾಗುತ್ತದೆಯೆಂದೂ ಆದುದರಿಂದ ಮೆಲ್ಲಮೆಲ್ಲನೆ ಪರ್ವತ ಏರಬೇಕೆಂದೂ ಅನಸ್ ತನ್ನ ಅನುಭವ ಹೇಳಿದುದರಿಂದ ಮೆಲ್ಲ ಮೆಲ್ಲನೆ ನಾವು ಪರ್ವತ ಹತ್ತಲು ಪ್ರಾರಂಭಿಸಿದೆವು. ವೇಗವಾಗಿ ನಡೆದು ದಣಿದು ಕುಳಿತವರಿಗೆ ನಾವು, ಮೆಲ್ಲ ಮೆಲ್ಲನೆ ನಡೆಯಲು ದಾರಿ ಯುದ್ದಕ್ಕೂ ಸಲಹೆಕೊಡುತ್ತಾ ಹೋದೆವು. ಸುಮಾರು ಅರ್ಧ ದಾರಿ ತುಳಿದ ನಂತರ ಪರ್ವತ ಏರಲು ಕಚ್ಚಾ ಮೆಟ್ಟಿಲುಗಳು ಕಂಡು ಬಂದವು. ದಾರಿ ಮಧ್ಯೆ ಭಿಕ್ಷುಕರಿದ್ದರು. ಕೆಲವರು ಮೆಟ್ಟಿಲುಗಳಿಗೆ ಸ್ವಲ್ಪ



ಹಿರಾ ಗುಹೆ



ಹಿರಾ ಗುಹೆಯ ಒಳಗೆ



ಸೌರ್ ಗುಹೆಯಿರುವ ಪರ್ವತ

ಸಿಮೆಂಟ್ ಮೆತ್ತಿ ಹಣ ಬೇಡುತ್ತಿದ್ದರು. ಕೊನೆಗೆ ನಾವು ಸುಮಾರು 2500 ಅಡಿ ಎತ್ತರವಿರುವ ಪರ್ವತದ ತುತ್ತತುದಿಗೆ ತಲಪಿದೆವು. ಅಲ್ಲಿ ನೀರು, ತಂಪುಪಾನೀಯ, ಚಾ, ಇತ್ಯಾದಿ ಮಾರುವ ಒಂದು ಅಂಗಡಿ ಇದೆ. ನಾವು ಅಲ್ಲಿ ಚಾ ಕುಡಿದು ನೀರಿನ ಬಾಟ್ಲಿ ಖರೀದಿಸಿದೆವು. ಹಿರಾ ಗುಹೆ ತಲಪಲು ಪರ್ವತದ ಇನ್ನೊಂದು ಮಗ್ಗುಲಿಗೆ ಕೆಳಗೆ ಇಳಿಯಬೇಕು. ಹಾಗೆ ಸುಮಾರು 20 ಅಡಿಗಳಷ್ಟು ಇಳಿಯುವಾಗ, ಇಕ್ಕಟ್ಟಾದ ಎರಡು ಬಂಡೆಗಳು. ಅದರ ಮಧ್ಯದಿಂದ ನುಸುಳಿಕೊಂಡು ಮುಂದೆ ಹೋದರೆ ಅಲ್ಲಿ ಹಿರಾಗುಹೆ ಇದೆ. ಇಲ್ಲಿ ಪ್ರಥಮವಾಗಿ ಅಲ್ಲಾಹನಿಂದ ಹಝ್ರತ್ ಪೈಗಂಬರರಿಗೆ(ಸ) ಖುರ್‌ಆನಿನ ವಚನಗಳು ಅವತೀರ್ಣಗೊಂಡಿದ್ದವು. ಆ ಗುಹೆ ಒಳಗೆ ಒಬ್ಬ ವ್ಯಕ್ತಿ ಎದ್ದು ನಿಲ್ಲುವಷ್ಟು ಎತ್ತರವಿದೆ. ಒಬ್ಬನು ಮಲಗುವಷ್ಟು ಉದ್ದವಿದೆ. ಸುಮಾರು ಮೂರು ಅಡಿ ಅಗಲವಿದೆ. ಅಲ್ಲಿ ನಾವು ಸರದಿ ಸಾಲಿನಲ್ಲಿ ನಿಂತು 2 ರಕ್‌ಅತ್ ನಮಾಝ್ ಮಾಡಿದೆವು. ನಮಗೆ ಅಲ್ಲಿಗೆ ತಲಪಲು ಸುಮಾರು 2 ಗಂಟೆ ಸಮಯ ಬೇಕಾಯಿತು. ಹಝ್ರತ್ ಖದೀಜ(ರ) ಪ್ರತಿದಿನ ಹಝ್ರತ್ ಪೈಗಂಬರರಿಗೆ(ಸ) ಆಹಾರ ತೆಗೆದುಕೊಂಡು ಅಲ್ಲಿಗೆ ಹೋಗುತ್ತಿದ್ದರಂತೆ.

ನಾವು ಅಲ್ಲಿಂದ ವಸತಿಗೃಹಕ್ಕೆ ಬಂದು ಮಧ್ಯಾಹ್ನದ ಊಟಮಾಡಿ ಮ್ಯೂಸಿಯಂ ನೋಡಲು ಕಾರಿನಲ್ಲಿ ಹೋದೆವು. ಆದರೆ ಮ್ಯೂಸಿಯಂ ಮುಚ್ಚಿದ್ದ ಕಾರಣ ನಾವು ಅಲ್ಲಿಂದ ಮಸ್ಜಿದುಲ್ ಹರಾಮ್‌ಗೆ ಬಂದೆವು. ಅಸ್‌ರ್ ಸಮಯದಲ್ಲಿ ನಾನು ಮತ್ತು ಅನಸ್ ಕಲ್‌ಬ ತವಾಫ್ ಮಾಡಲು ಹೋದೆವು. ಹಜರುಲ್ ಅಸ್ವದ್ ಸ್ಪರ್ಶಿಸಲು ಜನರ ಸರದಿ ಸಾಲು ಇತ್ತು. ನಾವಿಬ್ಬರೂ ಸರದಿ ಸಾಲಿನಲ್ಲಿ ನಿಂತೆವು. ಅಸ್‌ರ್ ಅಝಾನ್ ಆಯಿತು. ಕ್ಯೂನಲ್ಲಿ ನಾವು ಚಲಿಸುತ್ತಾ ಇದ್ದೆವು. ಇಖಾಮತ್ ಸಮಯ ಸಮೀಪಿಸಿತು. ನಾವಿಬ್ಬರೂ ನಮ್ಮ ಹಿಂದೆ ಇಬ್ಬರೂ ಇದ್ದೆವು. ಅವರ ಹಿಂದೆ ಕ್ಯೂ ನಿಲ್ಲಲು ಪೋಲೀಸ್ ಬಿಡುವುದಿಲ್ಲ. ಹೇಗೂ ನಮಗಿಬ್ಬರಿಗೂ ಹಜರುಲ್ ಅಸ್ವದ್ ಸ್ಪರ್ಶಿಸಿ ಮುದ್ದಿಡುವ ಭಾಗ್ಯ ಲಭಿಸಿತು. ಅಷ್ಟರಲ್ಲಿ ಇಖಾಮತ್ ಹೇಳಲಾಯಿತು.

ಮಗ್‌ರಿಬ್ ನಮಾಝ್ ನಂತರ ನಾವು ನಾಲ್ವರೂ ಕಲ್‌ಬಕ್ಕೆ ತವಾಫ್ ವಿದಾಅ್ (ವಿದಾಯ ಪ್ರದಕ್ಷಿಣೆ) ಮಾಡಲು ಆರಂಭಿಸಿದೆವು. ಏಳು ಸಲ ಕಲ್‌ಬಕ್ಕೆ ತವಾಫ್ ಮಾಡಿ, ಹಿಜ್‌ರ್ ಇಸ್ಮಾಈಲ್ ಸಮೀಪ 2 ರಕ್‌ಅತ್ ನಮಾಝ್ ಮಾಡಿ, ದುಆ ಮಾಡಿದೆವು. ಇಶಾ ನಮಾಝ್ ನಂತರ ನಾವು ಝಂ ಝಂ ನೀರು ಸಂಗ್ರಹಿಸಿದೆವು.

9-08-2009ರಂದು ಆದಿತ್ಯವಾರ ಬೆಳಿಗ್ಗೆ ನಾನು ಮತ್ತು ಅನಸ್ ಗಾರೆ ಸೌರ್ (ಸೌರ್ ಗುಹೆ) ಸಂದರ್ಶಿಸಲು ಹೊರಟೆವು. ಒಬ್ಬ ಅರಬಿ ಕಾರು ಚಾಲಕ ಅಲ್ಲಿಗೆ ಹೋಗಲು 100 ರಿಯಾಲ್ ಬಾಡಿಗೆ ಕೇಳಿದನು! ಬೇರೊಬ್ಬ ಬಂಗಾಳಿ ಕಾರು ಚಾಲಕ ನಮ್ಮನ್ನು 20 ರಿಯಾಲ್ ಬಾಡಿಗೆಗೆ ಸುಮಾರು 6 ಕಿ.ಮೀ. ದೂರವಿರುವ ಅಲ್ಲಿಗೆ ಕರಕೊಂಡು ಹೋದನು. 6.45ಕ್ಕೆ ನಾವು ಜಬಲ್ ಸೌರ್ ಹತ್ತಲು ಪ್ರಾರಂಭಿಸಿದೆವು. ಮೆಲ್ಲಮೆಲ್ಲನೆ ಸುಮಾರು ಒಂದೂವರೆ ಗಂಟೆ ಕಾಲ ಪರ್ವತ ಏರಿದ ನಂತರ ಒಂದು ಅಂಗಡಿ ಸಿಕ್ಕಿತು. ಅಲ್ಲಿ ತಂಪು ಪಾನೀಯ ಸೇವಿಸಿದೆವು. ಅದು ಒಬ್ಬ ಕಾಶ್ಮೀರಿಯ ಅಂಗಡಿಯಾಗಿತ್ತು. ಮೆಟ್ಟಿಲುಗಳಿಲ್ಲದ ಹಾಗೂ ಮೆಟ್ಟಿಲುಗಳಿರುವ ದಾರಿಯನ್ನು ತುಳಿಯುತ್ತಾ ಮತ್ತೂ ಒಂದೂವರೆ ಗಂಟೆ ಕಾಲ ಪರ್ವತ ಏರುತ್ತಾ ನಾವು 5413 ಅಡಿ ಎತ್ತರದಲ್ಲಿರುವ ಸೌರ್ ಗುಹೆಯನ್ನು ತಲಪಿದೆವು. ಸೌರ್ ಗುಹೆಯ ಮುಂದಿನಿಂದ ಒಂದು ಕಾಲುದಾರಿ ಸಾಗುತ್ತದೆ. ಅಲ್ಲಿಂದ ನೋಡಿದರೆ ಗುಹೆಯ



ಸೌರ್ ಗುಹೆಯ ಮುಂಭಾಗ

ಒಳಗೆ ಇರುವವರನ್ನು ಕಾಣಲಾಗದು. ನಾವು ಹಿಂದಿನಿಂದ ಹೋದಾಗ ಅಲ್ಲಿ ಇಬ್ಬರು ಮಾತ್ರ ಕುಳಿತುಕೊಳ್ಳುವಷ್ಟು ಸ್ಥಳವಿದೆ. ಎದ್ದು ನಿಲ್ಲುವಷ್ಟು ಎತ್ತರವಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹಝ್ರತ್ ಅಬೂಬಕರ್ ಸಿದ್ದೀಖ್(ರ) ಅವರೊಂದಿಗೆ ಮಕ್ಕದಿಂದ ಮದೀನಕ್ಕೆ ವಲಸೆಹೋಗುವಾಗ ಈ ಗುಹೆಯೊಳಗೆ ತಂಗಿದ್ದರು. ಕೊಲ್ಲುವ ಉದ್ದೇಶದಿಂದ ಹುಡುಕಿ ಕೊಂಡು ಬಂದ ಶತ್ರುಗಳ ಕಣ್ಣಿಗೆ ಅವರು ಕಾಣಿಸಲಿಲ್ಲ.

ನಾವು ಅಲ್ಲಿ ಕುಳಿತುಕೊಂಡೇ ನಮಾಝ್ ಮಾಡಿದೆವು. ಸೌರ್ ಗುಹೆ ಇರುವ ಸ್ಥಳದಲ್ಲಿ ಸಹ ಒಂದು ಕಾಶ್ಮೀರಿಯ ಅಂಗಡಿ ಇದೆ. ನಾವು ಅಲ್ಲಿ ಬಿಸ್ಕಿಟ್ ಮತ್ತು ಚಾ ಸೇವಿಸಿದೆವು. ಅಲ್ಲಿಂದ ಮರಳಿ ಇಳಿದು ಬರಲು ನಮಗೆ ಒಂದೂವರೆ ತಾಸು ಸಮಯ ಬೇಕಾಯಿತು. ಅಸ್‌ರ್ ನಮಾಝ್ ನಿರ್ವಹಿಸಿ ಸಾಯಂಕಾಲ 4.30ಕ್ಕೆ ನಾವು ಮಕ್ಕದಿಂದ ಬಸ್ಸಿನಲ್ಲಿ ಜಿದ್ದಃಕ್ಕೆ ಮರಳಿದೆವು. ಮಕ್ಕದಿಂದ ಸುಮಾರು ಹತ್ತಿಪ್ಪತ್ತು ಕಿಲೋ ಮೀಟರ್ ದೂರದಲ್ಲಿ ನಮಗೆ "ರಬ್‌ವ ಮಕ್ಕ" ಎಂಬ ಒಂದು ಸ್ಥಳ (ಬೆಟ್ಟ) ಕಂಡು ಪಾಕಿಸ್ತಾನದಲ್ಲಿರುವ ಅಹ್ಮದಿಯಾ



ಸೌರ್ ಗುಹೆಯ ಒಳಗೆ

ಕೇಂದ್ರ "ರಬ್‌ವ" ನೆನಪಿಗೆ ಬಂದು ಸಂತೋಷವಾಯಿತು. ಮಗ್‌ರಿಬ್ ಸಮಯದಲ್ಲಿ ನಾವು ಜಿದ್ದಃ ವಿಮಾನ ನಿಲ್ದಾಣ ತಲಪಿದೆವು. ಅಲ್ಲಿರುವ ಮಸೀದಿಯಲ್ಲಿ ನಾವು ಮಗ್‌ರಿಬ್, ಇಶಾ ನಮಾಝ್ ಮಾಡಿದೆವು. ಮಸ್ಜಿದುಲ್ ಹರಾಮ್, ಮಸ್ಜಿದುನ್ನಬವಿ ಹಾಗೂ ಮಕ್ಕ ಮತ್ತು ಮದೀನದಲ್ಲಿ ನಾವು ನೋಡಿದ ಎಲ್ಲಾ ಮಸೀದಿಗಳಲ್ಲಿ ಪುರುಷರಂತೆ ಸ್ತ್ರೀಯರು ಸಹ ಮಸೀದಿ ಪ್ರವೇಶಿಸಿ ಪ್ರಾರ್ಥನೆ ಮಾಡುತ್ತಾರೆ - ಜಿದ್ದಃದ ಈ ಮಸೀದಿಯಲ್ಲಿ ಸಹ. ಹಾಗಿರುವಾಗ ಸ್ತ್ರೀಯರು ಮಸೀದಿಗೆ ಹೋಗಿ ಪ್ರಾರ್ಥಿಸಬಾರದೆಂದು ನಮ್ಮ ದೇಶದ ಮುಸ್ಲಿಂ ಪಂಡಿತರು ವಾದಿಸುವುದು ಹೇಗೆ? ಅಶ್ಚರ್ಯವಾಗುತ್ತದೆ.

ನಾವು ಜಿದ್ದಃ ವಿಮಾನ ನಿಲ್ದಾಣದ ಒಳಗೆ ಚಾ ಕುಡಿದೆವು. ಒಂದು ಚಾಕ್ಕೆ 9 ರಿಯಾಲ್! (ಸುಮಾರು 150 ರೂಪಾಯಿಗಳು.) ಚಾದ ಜೊತೆಗೆ ಮಧ್ಯದಲ್ಲಿ ತೂತಿರುವ ವಡೆಯಂತಹ ಒಂದು ಬನ್. ಬನ್ ಬೇಡವಾದರೂ ಚಾದ ಬೆಲೆಯಲ್ಲಿ ಕಮ್ಮಿಯೇನೂ ಇಲ್ಲ! ವಿಮಾನ ನಿಲ್ದಾಣದ ಹೊರಗೆ ಒಂದು ಚಾಕ್ಕೆ 2 ರಿಯಾಲ್.

ಜಿದ್ದಃ ಸಮಯ ರಾತ್ರಿ 11.15ಕ್ಕೆ ನಮ್ಮ ವಿಮಾನ ಹೊರಟು ಮರುದಿನ 10-8-2009 ಆದಿತ್ಯವಾರ ಬೆಳಿಗ್ಗೆ ಭಾರತೀಯ ಸಮಯ 7.15ಕ್ಕೆ ಕಲ್ಲಿಕೋಟೆ ತಲುಪಿತು. ರಾತ್ರಿ 7 ಗಂಟೆಗೆ ನಾವು ಮಂಗಳೂರು ತಲುಪಿದೆವು. ಅಲ್‌ಹಮ್ದುಲಿಲ್ಲಾಹ್. ಯಾವ ರೀತಿಯ ತೊಂದರೆಯೂ ಇಲ್ಲದೆ, ನಮಗೆ ಉಮ್ರಃ ಪುಣ್ಯ ಕರ್ಮವನ್ನು ನಿರ್ವಹಿಸಲು ಸೌಭಾಗ್ಯ ದಯಪಾಲಿಸಿದ ಹಾಗೂ ನಮ್ಮನ್ನು ಸುರಕ್ಷಿತವಾಗಿ, ಸುಖ ಸಂತೋಷದಿಂದ ಮನೆಗೆ ತಲಪಿಸಿದ ಅಲ್ಲಾಹನಿಗೆ ಕೋಟ್ಯಾನುಕೋಟಿ ಸ್ತುತಿಸ್ತೋತ್ರಗಳು.


## ಇಸ್ಲಾಂ ಧರ್ಮ ತತ್ವಜ್ಞಾನ

ಗ್ರಂಥಕರ್ತ : ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

*ಈ ಐದು ಪ್ರಶ್ನೆಗಳಿಗೆ ಇಸ್ಲಾಮಿಕ ದೃಷ್ಟಿಯ ಉತ್ತರ :*

1. ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು.
2. ಮಾನವನ ಮರಣಾನಂತರದ ಸ್ಥಿತಿ.
3. ಮಾನವನ ಐಹಿಕ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗಗಳು.
4. ಧರ್ಮ ನಿಯಮಾನುಸರಣೆ ಇಹಪರ ಜೀವಿತದಲ್ಲಿ ಉಂಟುಮಾಡುವ ಫಲಗಳು.
5. ದೈವಿಕ ಜ್ಞಾನ ಸಿದ್ಧಿಯ ಮಾರ್ಗಗಳು.

**ಬೆಲೆ : ರೂ. 25/-**

## ಸನ್ಮಾರ್ಗ ದರ್ಶಕ

ಗ್ರಂಥಕರ್ತ : ಹಝ್ರತ್ ಮಿರ್ಝಾ ಬಶೀರ್ ಅಹ್ಮದ್

ಅಹ್ಮದಿಯಾ ಜಮಾಅತಿನ ವಿಶ್ವಾಸಾದರ್ಶಗಳ ಬಗ್ಗೆ ತಿಳಿಯಲು ಒಂದು ಉತ್ತಮ ಕೃತಿ.

**ಬೆಲೆ : ರೂ. 65/-**

-: ಮೇಲಿನ ಎರಡೂ ಪುಸ್ತಕಗಳಿಗೋಸ್ಕರ ಸಂಪರ್ಕಿಸಿರಿ :-

**Ahmaddiya Muslim Mission**
**No. 1, 3rd Cross Road, Wilson Garden, Bangalore - 560 027**

# 43ನೇ ಯು.ಕೆ. ಅಹ್ಮದಿಯಾ ವಾರ್ಷಿಕ ಸಮ್ಮೇಳನ

ಅಹ್ಮದಿಯಾ ಮುಸ್ಲಿಂ ಜಮಾಅತಿನ 43ನೇ ಯುನೈಟೆಡ್ ಕಿಂಗ್‌ಡಮ್ ವಾರ್ಷಿಕ ಸಮ್ಮೇಳನ ಜುಲೈ 24, 25, 26 ದಿನಾಂಕಗಳಂದು ಲಂಡನಿನಲ್ಲಿ ವಿಜಯಕರವಾಗಿ ಜರುಗಿತು. ಓಕ್‌ಲೇಂಡ್ ಫಾರ್ಮ್‌ನ "ಹದೀಖತುಲ್ ಮಹ್‌ದಿ"ಯಲ್ಲಿ ಜುಲೈ 24ರಂದು ಶುಕ್ರವಾರ ಅಹ್ಮದಿಯಾ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರ ಜುಮಾ ಖುತುಬ ಮೂಲಕ ಸಮ್ಮೇಳನದ ಆರಂಭವಾಯಿತು. ಈ ಸಮ್ಮೇಳನಕ್ಕೆ ಒಂದು ಜಾಗತಿಕ ಸ್ವರೂಪವಿರುವುದರಿಂದ ಲೋಕದ ಎಲ್ಲೆಡೆಗಳಿಂದ ಅಹ್ಮದಿಯರು ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ. ಜಗತ್ತಿನಲ್ಲೆಲ್ಲಾ ಇಸ್ಲಾಂ ಧರ್ಮದ ಕುಂದುತ್ತಿರುವ ಪ್ರಭಾವವನ್ನು ಪುನಶ್ಚೇತನಗೊಳಿಸಲು ಮಾಧ್ಯಮಗಳನ್ನು ಉಪಯೋಗಿಸಿಕೊಂಡು ಅಹ್ಮದಿಯರು ಕೈಲಾದಷ್ಟು ಪ್ರಯತ್ನಿಸಬೇಕೆಂದು ಖಲೀಫತುಲ್ ಮಸೀಹ್ ಉಪದೇಶಿಸಿದರು.

ಕೆಲವು ಉಗ್ರವಾದಿಗಳು ಅವರ ಸ್ವಾರ್ಥಕ್ಕೋಸ್ಕರ ಇಸ್ಲಾಂ ಎಂಬ ಪವಿತ್ರ ನಾಮವನ್ನು ಅಪಹರಿಸಿದ್ದಾರೆ. ಆದುದರಿಂದ ಇಂದು ಇಸ್ಲಾಂ ಶಾಂತಿಗೆ ಬದಲು ದ್ವೇಷದ ಧರ್ಮವೆಂದು ತಪ್ಪುಗ್ರಹಿಸಲ್ಪಟ್ಟಿದೆ ಯೆಂದು ಖಲೀಫ ಹೇಳಿದರು. ಸಂದರ್ಭ ದೊರೆತಾಗಲೆಲ್ಲ ಇಸ್ಲಾಂ ಶಾಂತಿ ಧರ್ಮವೆಂದು ಸ್ಥಾಪಿಸಿ ಇಸ್ಲಾಮಿನ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ನೀಗಿಸಲು ತಾನು ಪ್ರಯತ್ನಿಸುತ್ತಿದ್ದೇನೆಂದೂ ಅವರು ನುಡಿದರು.


ತನ್ನ ನೆರೆವಾಸಿಯ ಹಕ್ಕುಗಳನ್ನು ಸಂರಕ್ಷಿಸುವುದಕ್ಕೆ ಸದಾ ಬದ್ಧನಾಗಿರಬೇಕೆಂದು ಇಸ್ಲಾಂ ಕಲಿಸುತ್ತದೆ. ತಮ್ಮ ಸುತ್ತಮುತ್ತಲು ವಾಸಿಸುವವರ ಕುರಿತು ಅಹ್ಮದಿಯರಿಗೆ ಸದಾ ಗಮನ ವಿರಬೇಕು. ಅಹ್ಮದಿಯರು ತಂತಮ್ಮ ದೇಶಗಳ ನಿಯಮಗಳನ್ನು ಪಾಲಿಸಿಕೊಂಡು ಆಯಾಯ ದೇಶದವ ರೊಂದಿಗೆ ಅತ್ಯಂತ ಸೌಹಾರ್ದ ಮತ್ತು ಸಮಾಧಾನ ದೊಂದಿಗೆ ಬದುಕ ಬೇಕೆಂದು ಅವರು ಉಪದೇಶಿಸಿದರು. ಇಲ್ಲಿ ಸಮ್ಮೇಳನಕ್ಕೆ ಆಗಮಿಸುವವರೂ ಈ ದೇಶ ದವರೊಡನೆ ಸ್ನೇಹಾದರದಿಂದ ವರ್ತಿಸಬೇಕೆಂದು ಸಹ ಹೇಳಿದರು. ಹವಾಮಾನ ದೋಷಕರವಾಗಿದ್ದರೂ ಸಮ್ಮೇಳನ ಆರಂಭಿಸುವುದರೊಂದಿಗೆ ಶುಭ್ರವಾಯಿತು.

ಲಂಡನ್ ಸಮಯ 4.30ಕ್ಕೆ ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನದ ಪ್ರಥಮ ಅಧಿವೇಶನ ಆರಂಭವಾಯಿತು. ಪ್ರಥಮ ಅಧಿವೇಶನದಲ್ಲಿ ಅನೇಕ ಬ್ರಿಟಿಷ್ ಎಂ.ಪಿ.ಗಳೂ ಇತರ ಅನೇಕ ಗಣ್ಯರೂ ಭಾಗವಹಿಸಿದರು.



ಪ್ರಥಮ ದಿನದ ಸಮ್ಮೇಳನದಲ್ಲಿ ಪಾಕಿಸ್ತಾನದ ಅವಸ್ಥೆಗಳ ಬಗ್ಗೆ ಖಲೀಫತುಲ್ ಮಸೀಹ್ ವಿವರಿಸಿದರು: "ಧರ್ಮದ ನಾಮದಲ್ಲಿ ಪಾಕಿಸ್ತಾನದಲ್ಲಿ ಬಹಳ ಹೆಚ್ಚು ರಕ್ತ ಹರಿಯುತ್ತದೆ. ಶಾಂತಿ ಧರ್ಮವಾದ ಇಸ್ಲಾಂ ಅಲ್ಲಿ ಭೀಕರತೆ ಮತ್ತು ಭಯೋತ್ಪಾದನೆಯ ಧರ್ಮವಾಗಿ ಮಾರ್ಪಟ್ಟಿದೆ. ಧರ್ಮ ವಿರೋಧಿಗಳಿಗೆ ಮತ್ರ ಇದು ಗುಣಕರ. ಆದರೆ ಎಲ್ಲ ದೇಶಗಳಲ್ಲಿ ಇಂತಹ ದುಷ್ಕೃತ್ಯಗಳನ್ನು ವಿರೋಧಿಸುವವರನ್ನು ನಾವು ಕಾಣುತ್ತೇವೆ. ಖಂಡಿತವಾಗಿಯೂ ಅಹ್ಮದೀ ಮುಸ್ಲಿಮರು ಇಂತಹ ಕುಕೃತ್ಯಗಳನ್ನು ಖಂಡಿಸುತ್ತಾರೆ. ಇಸ್ಲಾಮಿನ ಬಗ್ಗೆ ಇರುವ ಇಂತಹ ತಪ್ಪು ಕಲ್ಪನೆಗಳನ್ನು ನೀಗಿಸಲಿಕ್ಕೂ ಆಧ್ಯಾತ್ಮಿಕ ವಿಚಾರಗಳನ್ನು ಬೋಧಿಸಲಿಕ್ಕೂ ಬೇಕಾಗಿ ನಾವು ಇಂತಹ ಸಮ್ಮೇಳನಗಳನ್ನು ಎಲ್ಲ ದೇಶಗಳಲ್ಲೂ ಏರ್ಪಡಿಸುತ್ತೇವೆ."

84ರಾಷ್ಟ್ರಗಳಿಂದ 27 ಸಾವಿರ ಪ್ರತಿನಿಧಿಗಳು ಭಾಗವಹಿಸಿದ ಮೂರು ದಿನಗಳ ಸಮ್ಮೇಳನ ಪ್ರಾರ್ಥನೆಯೊಂದಿಗೆ ಮುಕ್ತಾಯವಾಯಿತು. ಲಂಡನಿನ "ಹದೀಖ ತುಲ್ ಮಹ್‌ದಿ" ನಗರದಲ್ಲಿ ಜರಗಿದ ಈ ಮಹಾ ಸಮ್ಮೇಳನ ಉತ್ತಮ ವಾದೊಂದು ಆಧ್ಯಾತ್ಮಿಕ ಔತಣ, ಇಸ್ಲಾಮಿಕ ಚಟುವಟಿಕೆ ಗಳಿಗೆ ಹೊಸತಾದೊಂದು ಸಂದೇಶ ಮತ್ತು ಚೈತನ್ಯ ನೀಡಿದೆಯೆಂದು ಸಮ್ಮೇಳನದಲ್ಲಿ ಭಾಗವಹಿಸಿದ ಅನೇಕ ದೇಶಗಳ ಪ್ರತಿನಿಧಿಗಳು ಅಭಿಪ್ರಾಯ ಸೂಚಿಸಿದರು.




ಅಹ್ಮದಿಯಾ ಖಿಲಾಫತಿನ ಶತಾಬ್ದ ಸಮಾರಂಭದ ಅನುಬಂಧವಾಗಿ ಅಮೇರಿಕದ ಅಂಚೆ ಇಲಾಖೆ ಬಿಡುಗಡೆ ಮಾಡಿದ ಅಂಚೆ ಚೀಟಿ.

# ಅಹ್ಮದಿಯಾ ಜಮಾಅತಿನ ಪ್ರಗತಿ

*ಹಝ್ರತ್ ಖಲೀಫತುಲ್ ಮಸೀಹ್ V*
*25-7-2009ರಂದು ಯು.ಕೆ. ಅಹ್ಮದಿಯಾ ಸಮ್ಮೇಳನದಲ್ಲಿ ಮಾಡಿದ ಭಾಷಣದಿಂದ ಆಯ್ದ ಭಾಗಗಳು*

- ಈ ವರ್ಷ ಎರಡು ಹೊಸ ರಾಷ್ಟ್ರಗಳಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿತವಾಯಿತು – ಸರ್ಬಿಯಾ ಮತ್ತು ಲಿಥೋನಿಯಾ.
- ಒಟ್ಟು 195 ರಾಷ್ಟ್ರಗಳಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪನೆಗೊಂಡಿದೆ.
- ಪಾಕಿಸ್ತಾನದಲ್ಲಿ ಹೊರತು 531 ಹೊಸ ಘಟಕಗಳು ಸ್ಥಾಪಿಸಲ್ಪಟ್ಟಿವೆ.
- 399 ಮಸೀದಿಗಳ ಹೆಚ್ಚಳವಾಯಿತು. ಅದರಲ್ಲಿ 164 ಮಸೀದಿಗಳನ್ನು ನಾವು ಹೊಸದಾಗಿ ನಿರ್ಮಿಸಿದ್ದು, 235 ಮಸೀದಿಗಳು ವಿಶ್ವಾಸಿಗಳೊಂದಿಗೆ ನಮಗೆ ಲಭಿಸಿದವು.
- ಇಷ್ಟರವರೆಗೆ 106 ರಾಷ್ಟ್ರಗಳಲ್ಲಿ ಪ್ರಚಾರ ಕೇಂದ್ರಗಳ ಒಟ್ಟು ಸಂಖ್ಯೆ 2117. (ಇದರಲ್ಲಿ ಭಾರತದಲ್ಲಿ ತೆರೆದ ಹೊಸ ಪ್ರಚಾರ ಕೇಂದ್ರಗಳು 36)
- ಈ ವರ್ಷ ಘಾನದ ಅಶಾಂಟಿ ಭಾಷೆಯಲ್ಲಿ ಖುರ್‌ಆನ್ ಅನುವಾದ ಬಿಡುಗಡೆಗೊಂಡಿದೆ. ಇಷ್ಟರ ತನಕ 69 ಭಾಷೆಗಳಲ್ಲಿ ಅಹ್ಮದಿಯಾ ಜಮಾಅತ್ ಖುರ್‌ಅನ್ ಅನುವಾದ ಪ್ರಕಟಿಸಿದೆ.
- ಅರಬಿ ಭಾಷೆಯಲ್ಲಿ ತಫ್‌ಸೀರ್ ಕಬೀರ್‌ನ 8ನೇ ಸಂಪುಟ ಪ್ರಕಾಶಗೊಂಡಿದೆ.
- ಈ ವರ್ಷ ಮೊದಲ ಬಾರಿಗೆ ಹಝ್ರತ್ ಮಸೀಹ್ ಮೌಊದರ(ಅ) ಪುಸ್ತಕ ಭಂಡಾರ ರೂಹಾನಿ ಖಝಾಇನ್ 12 ಸಂಪುಟಗಳ ಕಂಪ್ಯೂಟರೀಕೃತ ಮುದ್ರಣ ಲಭ್ಯ.
- ಹಝ್ರತ್ ಮಸೀಹ್ ಮೌಊದರ(ಅ) ತದ್‌ಕಿರ ಗ್ರಂಥ ಇಂಡೆಕ್ಸ್ ಸಹಿತ ಇಂಗ್ಲಿಷ್‌ನಲ್ಲಿ ಪ್ರಕಟಗೊಂಡಿದೆ.
- 40 ರಾಷ್ಟ್ರಗಳಲ್ಲಿ ಈ ವರ್ಷ 523 ಪುಸ್ತಕ ಮತ್ತು ಕಿರುಕೃತಿಗಳು 31 ಭಾಷೆಗಳಲ್ಲಿ ಒಟ್ಟು 24 ಲಕ್ಷ 86 ಸಾವಿರ ಪ್ರತಿಗಳು ಪ್ರಕಟವಾಗಿವೆ.
- ಈ ವರ್ಷ 25 ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಆಯ್ದ ವಚನಗಳು, ಆಯ್ದ ಹದೀಸುಗಳು ಮತ್ತು ಹಝ್ರತ್ ಮಸೀಹ್ ಮೌಊದರ ಉಪದೇಶಗಳ ಸಿ.ಡಿ.ಗಳನ್ನು ತಯಾರಿಸಲಾಗಿದೆ.
- ಇಂಗ್ಲೆಂಡಿನ ಅರ್ರಖೀಂ ಪ್ರೆಸ್ಸಿನ ಮೇಲ್ನೋಟದಲ್ಲಿ ಆಫ್ರಿಕದ 8 ದೇಶಗಳಲ್ಲಿ ಪ್ರೆಸ್‌ಗಳು ಕಾರ್ಯನಿರತವಾಗಿವೆ. ಲಂಡನಿನ ಪ್ರೆಸ್ಸಿನಿಂದ ಪ್ರಕಟಗೊಂಡ ಪುಸ್ತಕ ಮತ್ತು ಪತ್ರಿಕೆಗಳ ಪ್ರತಿಗಳ ಸಂಖ್ಯೆ 2,12,500. ಆಫ್ರಿಕದಿಂದ ಪ್ರಕಟಿತವಾದ ಪುಸ್ತಕಗಳ ಪ್ರತಿಗಳ ಸಂಖ್ಯೆ 4,86,000.
- ಎಂ.ಟಿ.ಎ. (ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ)ದಲ್ಲಿ 14 ವಿಭಾಗಗಳಿವೆ. ಅದರಲ್ಲಿ 116 ಪುರುಷರು ಮತ್ತು 46 ಮಹಿಳೆಯರು ದಿನದ 24 ಗಂಟೆಗಳ ಕಾಲ ಉಚಿತ ಸೇವೆ ಸಲ್ಲಿಸುತ್ತಿದ್ದಾರೆ. ಈಗ ಎಂ.ಟಿ.ಎ.ಯಲ್ಲಿ ವರ್ಲ್ಡ್ ನ್ಯೂಸ್ ಬುಲ್ಲೆಟಿನ್ ಪ್ರಸಾರಗೊಳ್ಳುತ್ತಿದೆ. ಅರಬ್ ಜಗತ್ತಿನ ಎಲ್ಲೆಡೆಯಲ್ಲೂ ಈಗ ಎಂ.ಟಿ.ಎ. ಕಾಣಲು ಸಾಧ್ಯ.
- ಎಂ.ಟಿ.ಎ. ಅಲ್ಲದೆ ಬೇರೆ 1159 ಟಿ.ವಿ. ಕಾರ್ಯಕ್ರಮಗಳ ಮೂಲಕ 769 ಗಂಟೆ 40 ನಿಮಿಷಗಳ ಸಮಯ ನಮಗೆ ಲಭಿಸಿತು. ಸುಮಾರು 10 ಕೋಟಿ ಜನರಿಗೆ ಜಮಾಅತಿನ ಸಂದೇಶ ತಲಪಿಸಲು ಸಾಧ್ಯವಾಯಿತು.
- ವಿವಿಧ ರೇಡಿಯೋ ನಿಲಯಗಳಿಂದ 3778 ಗಂಟೆಗಳ ಕಾಲ 5448 ಕಾರ್ಯಕ್ರಮಗಳು ಬಿತ್ತರಿಸಲ್ಪಟ್ಟವು. ಆ ಮೂಲಕ ಸುಮಾರು 7 ಕೋಟಿ ಜನರಿಗೆ ಅಹ್ಮದಿಯಾ ಸಂದೇಶ ತಲಪಿಸಲ್ಪಟ್ಟಿತು.
- ಬೊರ್ಕಿನೋಫಾಸೊ ಮತ್ತು ನಮ್ಮ ಕೆಲವು ರೇಡಿಯೋ ನಿಲಯಗಳಿಂದ ಲಕ್ಷಾಂತರ ಜನರಿಗೆ ಯಥಾರ್ಥ ಇಸ್ಲಾಮಿನ ಸಂದೇಶ ತಲಪಿಸಲ್ಪಟ್ಟಿದೆ.
- ಈ ವರ್ಷ 257 ಎಕ್ಸಿಬಿಷನ್ ಮೂಲಕ 4,73,000 ಜನರಿಗೆ ಜಮಾಅತಿನ ಸಂದೇಶ ತಲಪಿದೆ.
- ಈ ವರ್ಷ 790 ಬುಕ್‌ಸ್ಟಾಲ್ ಮತ್ತು 48 ಬುಕ್‌ಫೇರ್ ಮೂಲಕ 20,97,000 ಜನರಿಗೆ ಅಹ್ಮದಿಯಾ ಸಂದೇಶ ತಲುಪಿದೆ.
- ವಖ್ಫೆನೌ ಯೋಜನೆಯಲ್ಲಿ ಈ ವರ್ಷ 1945 ಮಕ್ಕಳ ಹೆಚ್ಚಳವಾಯಿತು. ಒಟ್ಟು ಮಕ್ಕಳ ಸಂಖ್ಯೆ 39081.
- ಅಹ್ಮದಿಯಾ ಜಮಾಅತಿನ ವೆಬ್‌ಸೈಟ್ "ಅಲ್‌ಇಸ್ಲಾಂ"ನಲ್ಲಿ ಉರ್ದು, ಅರಬಿ ಮತ್ತು ಇಂಗ್ಲಿಷ್‌ನಲ್ಲಿ ಪವಿತ್ರ ಖುರ್‌ಆನಿನ

ಸರ್ಚ್ ಎಂಜಿನ್ ಸೌಲಭ್ಯವಿದೆ. ಮಾತ್ರವಲ್ಲ, ಜಮಾಅತಿನ ತಫ್‌ಸೀರ್‌ಗಳನ್ನೂ ಇತರ ಗ್ರಂಥಗಳನ್ನೂ ಓದಬಹುದು ಮತ್ತು ಡೌನ್‌ಲೋಡ್ ಸಹ ಮಾಡಬಹುದಾಗಿದೆ.

- ಪ್ರೆಸ್ ಎಂಡ್ ಪಬ್ಲಿಕೇಶನ್ ವಿಭಾಗದಿಂದ 105 ಪ್ರೆಸ್ ರಿಲೀಝ್‌ಗಳನ್ನು ಮಾಡಲಾಗಿದೆ.
- ಅಹ್ಮದಿಯಾ ಆರ್ಕಿಟೆಕ್ಟ್ಸ್ ಎಂಡ್ ಇಂಜಿನಿಯರ್ಸ್ ಅಸೋಸಿಯೇಶನ್‌ನ ಅಧೀನದಲ್ಲಿ ಘಾನದ ಉತ್ತರಭಾಗದಲ್ಲಿ 13, ಬೊರ್ಕಿನೋಫಾಸೋದಲ್ಲಿ 10, ಗಾಂಬಿಯಾದಲ್ಲಿ 10, ಸಿರಾಲಿಯೋನಿನಲ್ಲಿ 10, ತನ್ಝಾನಿಯಾದಲ್ಲಿ 10, ಯುಗಾಂಡದಲ್ಲಿ 10, ಕಾಂಗೋದಲ್ಲಿ 10, ಮಾಲಿಯಲ್ಲಿ 12, ಬೆನಿನ್‌ನಲ್ಲಿ 15, ಟೋಗೋದಲ್ಲಿ 5 – ಹೀಗೆ ಒಟ್ಟು 105 ಸೋಲಾರ್ ಸಿಸ್ಟಮ್‌ಗಳನ್ನು ಅಳವಡಿಸಲಾಗಿದೆ. ಮಾತ್ರವಲ್ಲ, 1500 ಸೋಲಾರ್ ಲಾಟೀನುಗಳನ್ನು 6 ಪ್ರದೇಶಗಳಲ್ಲಿ ಹಂಚಲಾಯಿತು. ಆಫ್ರಿಕಾದ ಒಳ ಪ್ರದೇಶಗಳಲ್ಲಿ 357, ಹ್ಯಾಂಡ್ ಪಂಪ್‌ಗಳನ್ನು ಒದಗಿಸಲಾಯಿತು. ಇತರ 165, ಪಂಪ್‌ಗಳನ್ನೂ ಒದಗಿಸಲಾಯಿತು.
- ನುಸ್ರತ್ ಜಹಾನ್ ಯೋಜನೆಯ ಅಧೀನದಲ್ಲಿ ಆಫ್ರಿಕದ 12 ರಾಜ್ಯಗಳಲ್ಲಿ 36 ಆಸ್ಪತ್ರೆಗಳೂ ಕ್ಲಿನಿಕ್‌ಗಳೂ ಕಾರ್ಯನಿರತವಾಗಿವೆ. 38 ಡಾಕ್ಟರ್‌ಗಳು ಅಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 12 ರಾಜ್ಯಗಳಲ್ಲಿ 521 ಹೈಯರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲ್‌ಗಳು ಕಾರ್ಯನಿರತವಾಗಿವೆ.
- ರಬ್‌ವದಲ್ಲಿರುವ ತಾಹಿರ್ ಹಾರ್ಟ್ ಆಸ್ಪತ್ರೆಯಲ್ಲಿ ಕಳೆದ 18 ತಿಂಗಳಲ್ಲಿ 25 ಸಾವಿರ ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು.
- ಈ ವರ್ಷ 4,16,010 ಮಂದಿ ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ. ಅವರು 111 ರಾಷ್ಟ್ರಗಳ 366 ವಿವಿಧ ಗೋತ್ರಗಳಿಗೆ ಸೇರಿದವರಾಗಿದ್ದಾರೆ.
- 2004ರಲ್ಲಿ "ವಸಿಯ್ಯತ್ ಯೋಜನೆ"ಯಲ್ಲಿ 38183 ಮಂದಿ ಸೇರಿದ್ದರು. ಈಗ ಆ ಸಂಖ್ಯೆ 1,05,377 ಆಗಿದೆ.

ಓದಿದ್ದು.........

## ವಿಶ್ವಾದ್ಯಂತ ಮುಸ್ಲಿಮರ ಸಂಖ್ಯೆ 157 ಕೋಟಿ

ವಾಷಿಂಗ್ಟನ್, ಅ.8: ವಿಶ್ವಾದ್ಯಂತ ಪ್ರಕೃತ ಮುಸ್ಲಿಂ ಜನಸಂಖ್ಯೆ 157 ಕೋಟಿ ಇದೆ. ಎಂದರೆ ಪ್ರತೀ ನಾಲ್ವರಲ್ಲಿ ಓರ್ವ ವ್ಯಕ್ತಿ ಮುಸ್ಲಿಂ ಆಗಿದ್ದಾನೆ. ಭಾರತವು ವಿಶ್ವದ ಮೂರನೇ ಬೃಹತ್ ಮುಸ್ಲಿಂ ಜನಸಂಖ್ಯೆಯ ದೇಶವಾಗಿದೆ ಎಂದು ಹೊಸ ಅಧ್ಯಯನವೊಂದು ತಿಳಿಸಿದೆ.

ಧಾರ್ಮಿಕ ಮತ್ತು ಸಾರ್ವಜನಿಕ ಜೀವನದ ಪ್ಯೂಫೋರಂ ನಡೆಸಿರುವ ಈ ಅಧ್ಯಯನದಲ್ಲಿ 200ಕ್ಕೂ ಹೆಚ್ಚು ದೇಶಗಳನ್ನು ಒಳಪಡಿಸಲಾಗಿದೆ. ವಿಶ್ವದಲ್ಲಿ ಪ್ರಕೃತ ಸರ್ವ ವಯೋಮಾನದ 1.57 ಬಿಲಿಯ ಮುಸ್ಲಿಮರು ಜೀವಿಸಿಕೊಂಡಿದ್ದಾರೆ. 2009ರ ಅಂದಾಜಿನ ಪ್ರಕಾರ ವಿಶ್ವ ಜನಸಂಖ್ಯೆ 6.8 ಬಿಲಿಯ ಇದ್ದು ಮುಸ್ಲಿಂ ಜನಸಂಖ್ಯೆಯು ಇದರ ಶೇ. 23ರಷ್ಟಿದೆ ಎಂದು ಅಧ್ಯಯನ ತಿಳಿಸಿದೆ.

ಮುಸ್ಲಿಮರು ಎಲ್ಲ ಐದು ಖಂಡಗಳಲ್ಲಿ ಇದ್ದಾರೆ. ಆದರೆ ಜಾಗತಿಕ ಮುಸ್ಲಿಂ ಜನಸಂಖ್ಯೆಯ ಶೇ. 60 ಪಾಲು ಏಷ್ಯಾದಲ್ಲೇ ಕಂಡುಬರುತ್ತದೆ. ಮಧ್ಯ ಪೂರ್ವ ಮತ್ತು ಉತ್ತರ ಆಫ್ರಿಕದಲ್ಲಿ ಶೇ. 20 ಮುಸ್ಲಿಂ ಜನಸಂಖ್ಯೆ ಇದೆ ಎಂದು ಅಧ್ಯಯನ ತಿಳಿಸಿದೆ.

ಮಧ್ಯಪೂರ್ವ ಮತ್ತು ಉತ್ತರ ಆಫ್ರಿಕದಲ್ಲಿ ಗರಿಷ್ಠ ಶೇಕಡಾವಾರು ಮುಸ್ಲಿಂ ಬಹುಸಂಖ್ಯೆಯ ರಾಷ್ಟ್ರಗಳಿವೆ. ಈ ವಲಯದಲ್ಲಿರುವ 20 ದೇಶಗಳ ಅರ್ಧಾಂಶಕ್ಕೂ ಹೆಚ್ಚು ದೇಶಗಳಲ್ಲಿ ಮುಸ್ಲಿಂ ಜನಸಂಖ್ಯೆ ಶೇ.95 ಇದೆ. ವಿಶ್ವದ ಐದನೇ ಒಂದು ಪಾಲು ಅಥವಾ 300 ದಶಲಕ್ಷಕ್ಕೂ ಅಧಿಕ ಮುಸ್ಲಿಮರು ಇಸ್ಲಾಂ ಬಹುಸಂಖ್ಯಾಕರ ಧರ್ಮವಲ್ಲದ ದೇಶಗಳಲ್ಲಿ ಇದ್ದಾರೆ ಎಂದು ಅಧ್ಯಯನ ತಿಳಿಸಿದೆ.

ಈ ಹಿಂದೆ ಪ್ರಕಟಗೊಂಡಿದ್ದ ಅಂದಾಜುಗಳ ಪ್ರಕಾರ ವಿಶ್ವ ಮುಸ್ಲಿಂ ಜನಸಂಖ್ಯೆಯು 1 ರಿಂದ 1.8 ಬಿಲಿಯ ಇದ್ದಿತ್ತು.

*– (ಉದಯವಾಣಿ 9-10-2009)*

## ಪಿತೃಗಳನ್ನು ಗೌರವಿಸಿದರೆ ಪುಣ್ಯ

ಭರದ್ವಾಜ ಮಹರ್ಷಿಗಳಿಗೆ ಏಳು ಮಂದಿ ಮಕ್ಕಳಿದ್ದರು. ಎಲ್ಲರೂ ವೇದಾಧ್ಯಯನ ಸಂಪನ್ನರು. ತ್ರಿಸಂಧ್ಯೆಗಳಲ್ಲೂ ಜಪ-ತಪ ಮಾಡುತ್ತಿದ್ದರು. ಯಜ್ಞ ಯಾಗಾದಿಗಳನ್ನು ಮಾಡುತ್ತಿದ್ದರು. ಎಲ್ಲರ ಗೌರವಕ್ಕೆ ಪಾತ್ರರಾಗಿದ್ದರು.

ಒಮ್ಮೆ ಪಿತೃಶ್ರಾದ್ಧ ಬಂತು. ಮಾಂಸಕ್ಕೆ ಯಾವ ಪ್ರಾಣಿಯೂ ಸಿಗಲಿಲ್ಲ. ಆಗ ಒಂದು ಆಕಳನ್ನೇ ಮಾಂಸ ಮಾಡಿ ಪಿತೃ ಶ್ರಾದ್ಧವನ್ನು ಪೂರೈಸಿದರು.

ಇದನ್ನು ತಿಳಿದ ಕೆಲವರು ಅವರನ್ನು ಅಧಮರೆಂದು ನಿಂದಿಸಿದರು. ಸಮಾಜ ಬಾಹಿರರಾಗಿ ಅವರು ತುಂಬಾ ಹಿಂಸೆಯನ್ನನುಭವಿಸಿದರು. ಸತ್ತ ಮೇಲೆ ಅವರಿಗೆ ಘೋರ ನರಕ ಕಾದಿದೆ ಅಂದರು. ಹೀಗೆ ಕಾಲ ಕಳೆಯಿತು.

ಪ್ರಕೃತಿ ಧರ್ಮದಂತೆ ಏಳು ಮಂದಿಗಳೂ ನಿಧನ ಹೊಂದಿದರು. ಯಮನ ಭಟರು ತಮ್ಮನ್ನು ನರಕಕ್ಕೆ ಕೊಂಡೊಯ್ಯಬಹುದೆಂದು ಭಯಗೊಂಡರು. ಆದರೆ ಅವರಿಗಾಗಿ ಸ್ವರ್ಗ ಕಾದಿತ್ತು! ಋಷಿಪುತ್ರರು ಆಶ್ಚರ್ಯದಿಂದಲೇ ಪ್ರಶ್ನಿಸಿದರು – "ನಮಗೆ ಸ್ವರ್ಗವೇ ಪ್ರಾಪ್ತಿಸಿತಲ್ಲ! ಕಾರಣವೇನು?" "ಇದು ಪಿತೃಶ್ರಾದ್ಧದ ಫಲ" ಎಂದು ದೇವೇಂದ್ರನೆಂದ.

ಹಿರಿಯರನ್ನು ಗೌರವಿಸುವುದರಿಂದ ಎಷ್ಟೊಂದು ಪುಣ್ಯ ದೊರಕುತ್ತದೆ!

– ತಾ

*(ಉದಯವಾಣಿ 10-09-2009)*

# ನಿಧನ ವಾರ್ತೆಗಳು

## ದೋಸ್ತ್ ಮುಹಮ್ಮದ್ ಶಾಹಿದ್ ಸಾಹೇಬ್



ಅಹ್ಮದಿಯಾ ಜಮಾಅತಿನ ಅಧಿಕೃತ ಇತಿಹಾಸಗಾರ ಹಾಗೂ ಪ್ರಗಲ್ಭ ಧರ್ಮಪಂಡಿತ ಸಾಹಿಬ್‌ಝಾದ ದೋಸ್ತ್ ಮುಹಮ್ಮದ್ ಶಾಹಿದ್ ಸಾಹೇಬ್ ಪಾಕಿಸ್ತಾನದ ರಬ್‌ವದಲ್ಲಿ ಆಗಸ್ಟ್ 25ರಂದು ದಿವಂಗತರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್."

ಅವರನ್ನು ನಡೆದಾಡುವ ಎನ್‌ಸೈಕ್ಲೋಪೀಡಿಯಾ (ವಿಶ್ವಜ್ಞಾನ ಕೋಶ) ಎಂದು ಕರೆಯಲಾಗುತ್ತಿತ್ತು. 1974ರಲ್ಲಿ ಪಾಕಿಸ್ತಾನದ ನ್ಯಾಶನಲ್ ಅಸೆಂಬ್ಲಿಯಲ್ಲಿ ಅಹ್ಮದಿಯಾ ತೃತೀಯ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು ಅಹ್ಮದಿಯಾ ಜಮಾಅತಿನ ಬಗ್ಗೆ ಹಲವು ದಿನಗಳ ಕಾಲ ಪ್ರತಿಪಾದಿಸುತ್ತಿದ್ದಾಗ, ಖಲೀಫರ ಸಹಾಯಕ ಸಂಘದ ಓರ್ವ ಸದಸ್ಯ ದೋಸ್ತ್ ಮುಹಮ್ಮದ್ ಶಾಹಿದ್ ಸಾಹೇಬರಾಗಿದ್ದರು.

1992-93 ಸಾಲಿನಲ್ಲಿ ಕ್ಯಾಂಬ್ರಿಜ್‌ನ ಇಂಟರ್‌ನೇಶನಲ್ ಬಯೋಗ್ರಾಫಿಕಲ್ ಸೆಂಟರ್ ಇವರನ್ನು "ಮ್ಯಾನ್ ಆಫ್ ದಿ ಇಯರ್" ಆಗಿ ಆಯ್ಕೆಮಾಡಿತ್ತು. 1994ರಲ್ಲಿ ಕೊಯಂಬುತ್ತೂರಿನಲ್ಲಿ ಅಹ್ಮದಿ-ಅಹ್ಮದಿಯೇತರರ ಮಧ್ಯೆ ನಡೆದ ಒಂದು ಸಂವಾದದಲ್ಲಿ ಭಾಗವಹಿಸಲು ಬಂದಿದ್ದ ಅವರು ಕೇರಳದ ಜಮಾಅತ್ ಘಟಕಗಳನ್ನೂ ಸಂದರ್ಶಿಸಿದ್ದರು.

ದಿವಂಗತರಿಗೆ ಅಲ್ಲಾಹನು ಮಗ್ಫಿರತನ್ನೂ ಜನ್ನತನ್ನೂ ಕರುಣಿಸಲಿ. ಆಮೀನ್.

## ಮೌಲವಿ ಎಂ. ಅಬ್ದುಸ್ಸಲಾಂ ಸಾಹೇಬ್



ಕರುನಾಗಪಳ್ಳಿ ಜಮಾಅತಿನ ಸದಸ್ಯ ಹಾಗು ದೀರ್ಘಕಾಲ ಮುಬಲ್ಲಿಗ್ ಆಗಿ ಸೇವೆ ಸಲ್ಲಿಸಿದ್ದ ಮೌಲವಿ ಎಂ. ಅಬ್ದುಸ್ಸಲಾಂ ಸಾಹೇಬ್ ಮೇ 2 ರಂದು ನಿಧನರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್."

ಮೌಲವಿ ಸಾಹೇಬರು ಕೇರಳದ ಅನೇಕ ಕಡೆಗಳಲ್ಲೂ ಅಂಡಮಾನ್ ಮತ್ತು ಮಡಿಕೇರಿಯಲ್ಲೂ ಸೇವೆ ಸಲ್ಲಿಸಿದ್ದಾರೆ.

ಮೃತರಿಗೆ ಅಲ್ಲಾಹನು ಮಗ್ಫಿರತ್ ಮತ್ತು ಜನ್ನತನ್ನು ಅನುಗ್ರಹಿಸಲಿ. ಆಮೀನ್.

## ಸಿ. ಹಂಝುಕೋಯ ಸಾಹೇಬ್



ಕಲ್ಲಿಕೋಟೆ : ಮಾತ್ತೋಟ್ಟಂ ಜಮಾಅತ್‌ನ ಸಿ. ಹಂಝುಕೋಯ ಸಾಹೇಬ್ ತನ್ನ 76ನೇ ಪ್ರಾಯದಲ್ಲಿ ಜೂನ್ 23ರಂದು ನಿಧನರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್."

ಅವರು ಲಕ್ಷದ್ವೀಪದ ನಿವೃತ್ತ ಎಂಪ್ಲಾಯಿಮೆಂಟ್ ಆಫೀಸರಾಗಿದ್ದರು. ಪಯಂಗಾಡಿ ಮತ್ತು ಕಲ್ಲಿಕೋಟೆಯಲ್ಲಿ ಜಮಾಅತಿನ ಅನೇಕ ಸ್ಥಾನಗಳನ್ನು ವಹಿಸಿ ಅವರು ಸೇವೆಸಲ್ಲಿಸಿದ್ದಾರೆ. ಅವರು ಕಾಲೇಜು ವಿದ್ಯಾಭ್ಯಾಸವನ್ನು ಮಂಗಳೂರಿನ ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಮಾಡಿದ್ದರು.

ದಿವಂಗತರಿಗೆ ಅಲ್ಲಾಹನು ಮಗ್ಫಿರತ್ ಮತ್ತು ಜನ್ನತನ್ನು ಕರುಣಿಸಲಿ. ಆಮೀನ್.

## ಕೆ. ಎಂ. ಜಮಾಲುದ್ದೀನ್ ಸಾಹೇಬ್



ಜನಾಬ್ ಕೆ. ಎಂ. ಜಮಾಲುದ್ದೀನ್ ಸಾಹೇಬರು 2009 ಅಕ್ಟೋಬರ್ ದಿನಾಂಕ 23ರಂದು 70ನೇ ವಯಸ್ಸಿನಲ್ಲಿ ಮಡಿಕೇರಿಯಲ್ಲಿ ನಿಧನರಾದರು. ("ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಮೂಲತಃ ಹಾಸನ ಜಿಲ್ಲೆ ಸಕಲೇಶಪುರ ತಾಲೂಕು ಶುಕ್ರವಾರ ಸಂತೆ ಸಮೀಪ ಕಾಮನ ಹಳ್ಳಿಯಲ್ಲಿ, ಅಲ್ಲಿನ ಪ್ರಥಮ ಅಹ್ಮದಿ ದಿವಗಂತ ಜನಾಬ್ ಜಿ. ಕೆ. ಮಹ್‌ಮೂದ್ ಸಾಹೇಬರ ಪುತ್ರರಾಗಿ ಜನಿಸಿದ ಅವರು, ಮಡಿಕೇರಿಯ ಪ್ರಥಮ ಅಹ್ಮದಿಯರ ಪೈಕಿ ಓರ್ವರಾದ ಜನಾಬ್ ಜಿ. ಕೆ. ಫಕ್ರುದ್ದೀನ್ ಸಾಹೇಬರ ಪುತ್ರಿಯನ್ನು ವಿವಾಹವಾಗಿದ್ದರು. ಮಡಿಕೇರಿಯ ಅಹ್ಮದಿಯಾ ಜಮಾಅತಿನ ಮಾಜಿ ಝುಯೀಮ್ ಅನ್‌ಸಾರುಲ್ಲಾ ಆಗಿದ್ದ ಅವರು ಜಮಾಅತಿನ ಚಟುವಟಿಕೆಗಳಲ್ಲಿ ಭಾಗವಹಿಸುವವರಾಗಿದ್ದರು. ಅವರು ಐವರು ಗಂಡು ಮಕ್ಕಳನ್ನೂ ಮೂವರು ಹೆಣ್ಣು ಮಕ್ಕಳನ್ನೂ ಪತ್ನಿಯನ್ನೂ ಅನೇಕ ಬಂಧು ಮಿತ್ರಾದಿಗಳನ್ನೂ ಅಗಲಿ ಹೋಗಿರುವರು. ಯುಗರಶ್ಮಿ ಬಳಗದ ಮುಹಮ್ಮದ್ ಶರೀಫ್ ಸಾಹೇಬ್ ಅವರ ಚತುರ್ಥ ಪುತ್ರ.

ಅಲ್ಲಾಹನು ದಿವಂಗತರಿಗೆ ಮಗ್ಫಿರತನ್ನೂ ಜನ್ನತನ್ನೂ ಬಂಧುಗಳಿಗೆ ಸಹನೆಯನ್ನೂ ದಯಪಾಲಿಸಲಿ. ಆಮೀನ್.

# ಹಿಂದಿನ ಸಂಚಿಕೆಗಳನ್ನು ತಿರುವಿಹಾಕಿದಾಗ....



## ಸಂಪಾದಕರಿಗೆ ಪತ್ರ

ಪ್ರಿಯ ಮಾನ್ಯ ಸಂಪಾದಕರೇ,

ತಾವು ಪ್ರೀತಿವಾತ್ಸಲ್ಯದಿಂದ ಕಳುಹಿಸುವ ಯುಗರಶ್ಮಿಯು ತಪ್ಪದೆ ಸಕಾಲಕ್ಕೆ ನನಗೆ ತಲುಪುತ್ತವೆ. ಆ ಬಗ್ಗೆ ನಾನು ತಮಗೆ ಚಿರಋಣಿ. ಅನಂತಕೋಟಿ ಅಭಿನಂದನೆಗಳು.

ತಮ್ಮ ಯುಗರಶ್ಮಿಯಲ್ಲಿ ದೇವರೊಬ್ಬನಿದ್ದಾನೆ ಎಂಬುದನ್ನು ಪ್ರತಿಪಾದಿಸಲು ಕೊಟ್ಟ (Practical) ಆಧಾರಗಳನ್ನು ಓದಿ ನನಗೆ ಪರಮಾನಂದವಾಯಿತು. ಆತ್ಮತೃಪ್ತಿಯೂ ಆಯಿತು.

**ಓರ್ವ ಹಿಂದೂ ಅಧ್ಯಾಪಿಕೆ**
ವಿಶ್ವೇಶ್ವರಪುರಂ
(ಯುಗರಶ್ಮಿ, ಸಪ್ಟೆಂಬರ್ 1976)

---

ಮಾನ್ಯರೆ,

ನೀವು ಕಳುಹಿಸಿ ಕೊಟ್ಟ ಯುಗರಶ್ಮಿ ತಲುಪಿದೆ. ನಿಮ್ಮ ಈ ಪತ್ರಿಕೆ ಮುಹಮ್ಮದ್ ಪೈಗಂಬರರ ಶಾಂತಿ ಸಂದೇಶವನ್ನು ಎಲ್ಲ ಕಡೆಯೂ ಪ್ರಸರಿಸಿ ಎಲ್ಲ ಮತಗಳ ನಡುವೆ ಸೌಹಾರ್ದವನ್ನುಂಟುಮಾಡಲಿ ಎಂದು ಹಾರೈಸುತ್ತೇನೆ.

**ಬಿ. ಶಾಮಸುಂದರ**
ಉಪಸಂಪಾದಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು
(ಯುಗರಶ್ಮಿ, ಸಪ್ಟೆಂಬರ್ 1976)

---

ಸಂಪಾದಕರಾದ ಶ್ರೀ ಮುಹಮ್ಮದ್ ಯೂಸುಫ್‌ರವರಿಗೆ,

ಸ್ನೇಹಪೂರ್ವಕ ವಂದನೆಗಳು. ನಿಮ್ಮ ಪತ್ರಿಕೆ ನಿಜವಾಗಿಯೂ ಒಳ್ಳೆಯ ಸಂದೇಶಗಳಿಂದ ತುಂಬಿದೆ. "ಅಲ್ಲಾ ಎಂಬುವ ಅವ ಬೇರಲ್ಲ. ಎಲ್ಲವ ಬಲ್ಲವಗೆ ಜಗದಲಿ ಜಗಳವೇ ಇಲ್ಲ" ಎಂದು ನುಡಿದು ಹಿಂದೂ ಮುಸ್ಲಿಮ್ ಭಾವೈಕ್ಯತೆಗೆ ನಾಂದಿಹಾಕಿದ ಶ್ರೀ ಸಂತ ಶಿಶುನಾಳ ಷರೀಫ್ ಸಾಹೇಬರ ದಿವ್ಯ ಸಂದೇಶದಂತೆ ಯುಗರಶ್ಮಿ ಕನ್ನಡ ತಾಯಿಯ ಸಾರಸ್ವತ ಲೋಕದಲ್ಲಿ ಪರಮಾತ್ಮನ ದಿವ್ಯ ಸಂದೇಶವನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಜನತೆಗೆ ನೀಡುವಂತಾಗಲಿ. ಕರ್ನಾಟಕ ಜನತೆಗೆ ಪವಿತ್ರ ಖುರಾನಿನ ಸೂಕ್ತಿಗಳು ಸಿಗುವಂತೆ ನಿಮಗೆ ಭಗವಂತನು ಸೂಕ್ತ ಸಹಕಾರವನ್ನು ನೀಡಲಿ ಎಂಬುದೇ ನಮ್ಮ ಆಕಾಂಕ್ಷೆ.

**ತೊ.ಗ. ಅಡವೀಶಪ್ಪ**
ಸಂಪಾದಕ, "ಅಮರ ಸಂದೇಶ", ಕನ್ನಡ ವಾರಪತ್ರಿಕೆ
(ಕನ್ನಡ ಪಕ್ಷದ ಮತ್ತು ಕರ್ನಾಟಕ ಸೇವಾ ಸಮಿತಿ ಅಧ್ಯಕ್ಷ), ತುಮಕೂರು.
(ಯುಗರಶ್ಮಿ ಸಪ್ಟೆಂಬರ್ 1976)

---

ಸನ್ಮಾನ್ಯ ಸಂಪಾದಕರೇ,


ತಾವು ಅಭಿಮಾನವಿಟ್ಟು ಕಳುಹಿಸಿರುವ "ಯುಗರಶ್ಮಿ"ಯ 1976ನೇ ಮಾರ್ಚ್ ಮತ್ತು ಜೂನ್ ತಿಂಗಳುಗಳ ಸಂಚಿಕೆಗಳು ತಲುಪಿದ್ದು, ಅವನ್ನು ಕಂಡೊಡನೆ ಕುತೂಹಲದಿಂದ ಪುಟಗಳನ್ನು ತಿರುವಿ ಹಾಕಿದಾಗ, ಅವುಗಳಲ್ಲಿ ಕಂಡ ಇಂದಿನ ಜನಾಂಗಕ್ಕೆ ಉಪಯುಕ್ತವಾದ ಲೇಖನಗಳನ್ನು ಓದಿ ತುಂಬಾ ಸಂತೋಷವಾಯಿತು. ಪವಿತ್ರವಾದ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ಹಾಗೂ ಏಸುಕ್ರಿಸ್ತರ ಬಗ್ಗೆ ವಿಚಾರಾತ್ಮಕ ಲೇಖನಗಳು ನಿಜವಾಗಿಯೂ ಮಾನವನ ಮೇಲೆ ಪರಿಣಾಮವನ್ನು ಬೀರುವ ಅಸ್ತ್ರಗಳಾಗಿವೆ. ಜೀವನದಲ್ಲಿ ಅಶಾಂತಿಯನ್ನೇ ಕಾಣುತ್ತಿರುವ ಇಂದಿನ ಮಾನವಕುಲಕ್ಕೆ ಏನಾದರೂ ಸ್ವಲ್ಪ ನೆಮ್ಮದಿ ದೊರಕಬೇಕಾದರೆ ಇಂತಹ "ಯುಗರಶ್ಮಿ"ಯಂತಹ ಆಧ್ಯಾತ್ಮಿಕ ಚಿಂತನೆಯನ್ನು ವೃದ್ಧಿಗೊಳಿಸುವಂತಹ ಕೃತಿರತ್ನಗಳಿಂದ ಮಾತ್ರ ಸಾಧ್ಯ.

ಜನಜೀವನದಲ್ಲಿ ಜ್ಞಾನದ ಜ್ಯೋತಿಯನ್ನು ಪ್ರಜ್ವಲಿಸಲು ಹೊರಟಿರುವ ಜಾತ್ಯಾತೀತ "ಯುಗರಶ್ಮಿ"ಗೆ ಹಾಗೂ ಲಾಭದಾಯಕ ವೃತ್ತಿ ಇದಲ್ಲವೆಂದು ತಿಳಿದಿದ್ದೂ ಜ್ಞಾನ ಪ್ರಚಾರ ಕಾರ್ಯಕ್ಕೆ ಧೈರ್ಯದಿಂದ ಕೈ ಹಾಕಿರುವ ತಮಗೂ "ಅಲ್ಲಾ"ನು ಯಶಸ್ಸನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

**ಎಂ. ಕೆ. ಗೋಪಾಲ್ ಸಿಂಗ್,**
ಸಂಪಾದಕ, "ಗಿರಿವಾರ್ತಾ", ಚಿಕ್ಕಮಗಳೂರು.
(ಯುಗರಶ್ಮಿ ಸಪ್ಟೆಂಬರ್ 1976)

# READ AHMADIYYA PERIOICALS

| | |
|---|---|
| **THE REVIEW OF RELIGIONS** | **Annual Subscription : Rs. 150/-**<br>Write to : The Chairman<br>THE REVIEW OF RELIGIONS<br>Qadian - 143516 (Punjab) |
| **BADR**<br>**Urdu Weekly** | **Annual Subscription : Rs. 350/-**<br>Write to : The Manager<br>The BADR Weekly<br>Qadian - 143516 (Punjab) |
| **ANSARULLAH**<br>**Urdu & Hindi Bi-Monthly** | **Annual Subscription : Rs. 100/-**<br>Write to : The Manager<br>ANSARULLAH<br>Qadian - 143516 (Punjab) |
| **MISHKAT**<br>**Urdu Monthly** | **Annual Subscription : Rs. 150/-**<br>Write to : The Manager<br>MISHKAT<br>Qadian - 143516 (Punjab) |
| **SATHYADOOTHAN**<br>**Malayalam Monthly** | **Annual Subscription : Rs. 150/-**<br>Write to : The Manager<br>The SATHYADOOTHAN Monthly<br>Qadian - 143516 (Punjab) |
| **SATHYAMITHRAM**<br>**Malayalam Bi-Monthly** | **Annual Subscription : Rs. 60/-**<br>Write to : The Manager<br>SATHYAMITHRAM<br>Thavakkara, Kannur (Kerala) |



ಇತ್ತೀಚೆಗೆ ಬರ್ಲಿನ್‌ನಲ್ಲಿ ಉದ್ಘಾಟಿಸಲ್ಪಟ್ಟ ಖದೀಜ ಮಸೀದಿ



ಬೈತುನ್ನೂರ್ ಮಸೀದಿ, ನನ್ಸ್‌ಪೀಟ್, ಹಾಲೆಂಡ್

Registered with the Registrar of Newspapers for India No. R.N. 27354/75
YUGARASHMI Kannada Quarterly, November - 2009

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ
ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

Muslim TV Ahmadiyya International

# ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ ಇಂಟರ್‌ನೇಶನಲ್

# THE FIRST ISLAMIC SATELLITE CHANNEL

## BROADCASTING ROUND THE CLOCK

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : $105.5^0$ EAST | SYMBOL RATE | : 26000 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

E-Mail : info@alislam.org Website : http:www.alislam.org/mta.tv




ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

## ಕನ್ನಡ ಭಾಷಾಂತರ

ಬೆಲೆ : ರೂ. 200/-

ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden,
Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001